ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 13 ಭಾನುವಾರ 2023

₹4

ಸಂಪುಟ: 44 | ಸಂಚಿಕೆ: 119 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕಾನೂನು ಶಿಕ್ಷಣ ನಿರ್ದೇಶನಾಲಯ ಸ್ಥಾಪನೆ ಬಗ್ಗೆ ಚಿಂತನೆ: ಹೆಚ್.ಕೆ.ಪಾಟೀಲ್

ಶೀಘ್ರವೇ ಕಾನೂನು ತರಬೇತಿ ಕಟ್ಟಡ ನಿರ್ಮಾಣ



ಮೈಸೂರು, ಆ.12(ಬಿಎಲ್‌ಯು)– ಈಗಾಗಲೇ ಸ್ಥಾಪನೆಯಾಗಿರುವ ಕಾನೂನು ವಿಶ್ವವಿದ್ಯಾನಿಲಯದಲ್ಲಿ ನಿರೀಕ್ಷಿತ ಪ್ರಮಾಣದ ಕೆಲಸಗಳು ನಡೆಯದ ಕಾರಣ ಕಾನೂನು ಶಿಕ್ಷಣ ನಿರ್ದೇಶನಾಲಯ ಸ್ಥಾಪನೆ ಮಾಡುವ ಬಗ್ಗೆ ಚಿಂತನೆ ಮಾಡಲಾಗಿದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ. ಮೈಸೂರಲ್ಲಿ ಮಾತನಾಡಿದ ಅವರು, ಕಾಲಕ್ಕೆ ತಕ್ಕಂತೆ ಕಾನೂನಿನ ಶಿಕ್ಷಣ ನೀಡುವುದು ಅತ್ಯವಶ್ಯ. ಈ ಹಿನ್ನೆಲೆ ಕಾನೂನು ಶಿಕ್ಷಣ ನಿರ್ದೇಶನಾಲಯ ಸ್ಥಾಪನೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದರು.

ಕಾನೂನು ಬದಲಾವಣೆ, ಕಾಯ್ದೆ ಬದಲಾವಣೆ ಸೇರಿದಂತೆ ಹಲವು ವಿಚಾರಗಳನ್ನು ವಕೀಲರು ಅರ್ಥೈಸಿಕೊಳ್ಳಬೇಕು. ಈ ಮೂಲಕ ವಕೀಲರು ಪುನರ್ ಮನನ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕಾನೂನು ಇಲಾಖೆಯಿಂದ ತರಬೇತಿ ಕಟ್ಟಡ ನಿರ್ಮಿಸಲಾಗುವುದು ಎಂದು ಹೆಚ್.ಕೆ. ಪಾಟೀಲ್ ಭರವಸೆ ನೀಡಿದರು.

ವಕೀಲರ ಹಿತರಕ್ಷಣೆಗಾಗಿ ಕಾಯ್ದೆ ರೂಪಿಸುವ ಬಗ್ಗೆ ಮುಂದಿನ ಸಚಿವ ಸಂಪುಟದಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು. ಜೊತೆಗೆ ವಕೀಲರ ಹಿತ ಕಾಪಾಡುವ ನಿಟ್ಟಿನಲ್ಲಿ ಹಲವು ಯೋಜನೆಗಳಿಗೆ 500 ಕೋಟಿ ಮೀಸಲಿಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇನೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಿದ್ದರಾಮಯ್ಯ, ಆರ್ಥಿಕ ಸ್ಥಿತಿಗತಿ ನೋಡಿಕೊಂಡು ಹಣ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ವಕೀಲರ ಪಾತ್ರ ಬಹಳ ಮುಖ್ಯವಾಗಿದೆ. ಪರಿಣಾಮಕಾರಿಯಾಗಿ ಕಾನೂನಿನ ಅನುಷ್ಠಾನ ಆಗಲು ವಕೀಲರು ತಮ್ಮದೆ ಆದ ಪಾತ್ರ ನಿರ್ವಹಿಸುತ್ತಾರೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ವಕೀಲರಿಗೆ ಗೌರವ ಹಾಗೂ ಮನ್ನಣೆ ದೊರೆಯಬೇಕು ಎಂದರು. ಲಕ್ಷಾಂತರ ಪ್ರಕರಣಗಳು ನ್ಯಾಯಕ್ಕಾಗಿ ಕಾದು ಕುಳಿತಿದೆ. ಆದರೆ ವ್ಯಾಜ್ಯಗಳು ಇತ್ಯರ್ಥವಾಗುವುದು ವಿಳಂಬವಾಗುತ್ತಿದೆ. ಹತ್ತಾರು ವರ್ಷಗಳಿಂದ ಪ್ರಕರಣ ಇತ್ಯರ್ಥವಾಗದ ಕಾರಣ ಬಡವರಿಗೆ ತೊಂದರೆ ಆಗುತ್ತಿದೆ ಎಂದು ಹೆಚ್.ಕೆ. ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದರು.

ನನ್ನ ಎರಡು ಹುಟ್ಟಿದ ದಿನಾಂಕಗಳು ತಪ್ಪು; ಸಿಎಂಗೆ ಬಹುಪರಾಕ್; ಕಾಲ್ತುಳಿತದಿಂದ ಕಣ್ಣೀರಿಟ್ಟ ಮಹಿಳೆ

ಮುಖ್ಯಮಂತ್ರಿಗಳ ಭೇಟಿಯ ವಿದ್ಯಮಾನಗಳು



ಮೈಸೂರು, ಆ.12 (ಬಿಎಲ್ ಯು)– ನನ್ನ ಹುಟ್ಟಿದ ದಿನಾಂಕ ಯಾವತ್ತು ಅಂತ ನನಗೇ ಈ ತನಕ ಗೊತ್ತಿಲ್ಲ. ಈಗ ಆಚರಣೆ ಮಾಡುತ್ತಿರುವ ನನ್ನ ಹುಟ್ಟಿದ ದಿನಾಂಕಗಳೆರಡೂ ತಪ್ಪು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಸ್ಯ ಧಾಟಿಯಲ್ಲಿ ಹೇಳಿದರು.

ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ರೇಷ್ಮೆ ಜುಬ್ಬ, ರೇಷ್ಮೆ ಪಂಚೆ ಹಾಗೂ ರೇಷ್ಮೆ ವಲ್ಲಿ ಧರಿಸಲ್ಲಿ ಸಿದ್ದರಾಮಯ್ಯ ಮಿಂಚುತ್ತಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ ಸಿದ್ದರಾಮಯ್ಯ, 'ಅಯ್ಯೋ ಬಿಡಿ ಯಾವ ಹುಟ್ಟುಹಬ್ಬ...' ಎಂದರು.

ಒಂದು ಅಪ್ಪ ಬರೆಸಿದ್ದು; ಮತ್ತೊಂದು ಮೇಷ್ಟ್ರು ಬರೆಸಿದ್ದು: 'ಒಂದು ಡೇಟ್ ಆಫ್ ಬರ್ತ್ ಅನ್ನು ನನ್ನ ತಂದೆ ಬರೆಸಿರೋದು, ಇನ್ನೊಂದು ಡೇಟ್ ಆಫ್ ಬರ್ತ್ ಅನ್ನು ನಮ್ಮ ಮೇಷ್ಟ್ರು ಬರೆಸಿರೋದು. ಆದರೆ ಆಗಸ್ಟ್ 3 ಹಾಗೂ ಆಗಸ್ಟ್ 12ರಂದು ಆಚರಣೆ ಮಾಡುತ್ತಿರುವ ಎರಡು ಜನ್ಮ ದಿನಾಂಕಗಳು ತಪ್ಪು. ಹೀಗಾಗಿ ನನ್ನ ಜನ್ಮ ದಿನಾಂಕ ನನಗೇ ಸರಿಯಾಗಿ ಗೊತ್ತಿಲ್ಲ. ಇದರಿಂದ ಈ ಬಗ್ಗೆ ಯಾವ ಆಸಕ್ತಿಯೂ ಇಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ ಅವರು ಮೈಸೂರಿನ ಮಂಡಕಳ್ಳಿ ಏರ್‌ಪೋರ್ಟ್‌ನಿಂದ ಹೊರಗೆ ಬರುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಜೈಕಾರದ ಘೋಷಣೆಗಳನ್ನು ಮೊಳಗಿಸಿ, ಬಹುಪರಾಕ್ ಹಾಕಿದರು. ಅನ್ನಭಾಗ್ಯ ಸರದಾರ, ವರುಣ ಕ್ಷೇತ್ರದ ಮಹಾರಾಜ... ಎಂದೆಲ್ಲಾ ಬಿರುದು–ಬಾವಲಿ ನೀಡಿ ಘೋಷಣೆ ಕೂಗಿದರು. ಕಾರ್ಯಕರ್ತರತ್ತ ಕೈ ಬೀಸಿದ ಸಿದ್ದರಾಮಯ್ಯ ಸಾಕು ಸಾಕು ಎಂದು ಹೇಳುತ್ತಿದ್ದಂತೆ ಮತ್ತಷ್ಟು ಜೋರಾಗಿಯೇ ಕೂಗಲು ಆರಂಭಿಸಿದರು.

ಹಾರ ತುರಾಯಿ, ಶಾಲು ಹಾಕಿಸಿಕೊಳ್ಳುವುದಿಲ್ಲ ಎಂದು ಸಿದ್ದರಾಮಯ್ಯನವರು ಈಗಾಗಲೇ ಹೇಳಿದ್ದರು. ಕೆಲವು ಕಡೆ ಹಾರ, ಶಾಲು, ಪೇಟ ಹಾಕಲು ಬಂದವರಿಗೆ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡಿದ್ದರು. ಆದರೂ ಇಂದು ನೂಕು ನುಗ್ಗಲಿನ ಮಧ್ಯೆ ಒಂದಿಬ್ಬರು ಕಾಂಗ್ರೆಸ್ ಮುಖಂಡರು ಸಿದ್ದರಾಮಯ್ಯ ಅವರಿಗೆ ಶಾಲು ಹೊದಿಸಿದರು. ಆದರೆ ನೂಕುನುಗ್ಗಲಿನಲ್ಲಿ ಅರಿವಿಗೆ ಬಾರದ ಕಾರಣ ಸಿದ್ದರಾಮಯ್ಯ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಈ ವೇಳೆ ಅಹವಾಲು ಸಲ್ಲಿಸಲು ಕಾರ್ಯಕರ್ತರ ನಡುವೆ ತಳ್ಳಾಟ ನೂಕಾಟವಾಯಿತು. ಇದರಿಂದ ಸಿದ್ದರಾಮಯ್ಯ ಯಾರ ಅರ್ಜಿಯನ್ನು ಪಡೆಯಲಾಗಲಿಲ್ಲ. ಇದರ ನಡುವೆ ಕಾಂಗ್ರೆಸ್ ಮುಖಂಡ ಬಸವಣ್ಣ ಅವರ ತಾಯಿ ಪುಟ್ಟಮ್ಮ, ಮಗನಿಗೆ ನಿಗಮ ಮಂಡಳಿಯಲ್ಲಿ ಸ್ಥಾನ ನೀಡುವಂತೆ ಕೇಳಲು ಸಿದ್ದರಾಮಯ್ಯ ಬಳಿ ಹೋದರು. ಈ ವೇಳೆ ಗನ್‌ಮನ್‌ಗಳ ಒರಟಾದ ಶೂಗಳ ತುಳಿತದಿಂದ ಪುಟ್ಟಮ್ಮ ಕಾಲಿಗೆ ಗಾಯವಾಗಿ ಜೋರಾಗಿ ಕಿರುಚಿಕೊಂಡರು. ಕಾಲ್ತುಳಿತದಿಂದ ಪುಟ್ಟಮ್ಮ ಕಾಲಿಗೆ ರಕ್ತ ಬರುವಷ್ಟರ ಮಟ್ಟಿಗೆ ಗಾಯವಾಯಿತು. ಬೆಂಗಳೂರಿಗೆ ಹೋಗಿ ಸಿದ್ದರಾಮಯ್ಯ ಭೇಟಿಯಾಗಲು ಸಾಧ್ಯವಿಲ್ಲ. ಮೈಸೂರಲ್ಲಾದರೆ ಸುಲಭವಾಗಿ ಭೇಟಿ ಮಾಡಿ ನಮ್ಮ ಬೇಡಿಕೆ ಸಲ್ಲಿಸಬಹುದು ಎಂದು ಇಲ್ಲಿಗೆ ಬಂದೆ. ಆದರೆ ವಯಸ್ಸಾಗಿದೆ ಎಂಬುದನ್ನೂ ನೋಡದೇ ತುಳಿದರು ಎಂದು ಪುಟ್ಟಮ್ಮ ಕಣ್ಣೀರಿಟ್ಟರು.

ಇಂದು ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು,ಆ.12–ಮೈಸೂರಿನ ಶ್ರೀ ಯೋಗಿ ನಾರೇಯಣ ಬಣಜಿಗ (ಬಲಿಜ) ಸಂಘವು ವಾಸನ್ ಐ ಕೇರ್ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಆ.13ರಂದು ಬೆಳಿಗ್ಗೆ 9.30 ಗಂಟೆಗೆ ಸಂಘದ ಆವರಣದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವನ್ನು ಮೈಲ್ಯಾಕ್ ಮಾಜಿ ಅಧ್ಯಕ್ಷ ಎಚ್.ಎ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಾಸನ್ ಐ ಕೇರ್ ಆಸ್ಪತ್ರೆಯ ಡಾ.ಪವನ್ ಜೋಷಿ ಭಾಗ ವಹಿಸುವರು. ಶ್ರೀಯೋಗಿ ನಾರೇಯಣ ಬಣಜಿಗ (ಬಲಿಜ) ಸಂಘದ ಅಧ್ಯಕ್ಷ ಎಂ. ನಾರಾಯಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಘದ ಕಾರ್ಯದರ್ಶಿ ಎಚ್.ಆರ್. ಗೋಪಾಲಕೃಷ್ಣ ಉಪಸ್ಥಿತರಿರುವರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಆ.12–ಸ್ಪರ್ಶ ಹೆಲ್ತ್ ಫೌಂಡೇಷನ್ ವತಿಯಿಂದ ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆಯಲ್ಲಿ ಆ.15ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8762955344 ಸಂಪರ್ಕಿಸಬಹುದು.

ನಿಧನ

ಜಮ್ಮಡ ಎಂ. ಪೊನ್ನಮ್ಮ



ಮೈಸೂರು,ಆ.12–ಮೈಸೂರಿನ ಬನ್ನಿಮಂಟಪ ಬಡಾವಣೆ ನಿವಾಸಿ ದಿವಂಗತ ಡಾ.ಜಮ್ಮಡ ಎಂ.ಮಂದಪ್ಪ ಅವರ ಪತ್ನಿ ಜಮ್ಮಡ ಎಂ. ಪೊನ್ನಮ್ಮ (88) ಶನಿವಾರ ಬೆಳಗ್ಗೆ ಮಂಗಳೂರಿನಲ್ಲಿ ನಿಧನರಾದರು. ಮೃತರು ಪುತ್ರರಾದ ಜಮ್ಮಡ ಪೂವಣ್ಣ, ಪಾಲೇಕಂಡ ವಾಣಿ ಕುಶಾಲಪ್ಪ ಮತ್ತು ಜಮ್ಮಡ ಅಯ್ಯಣ್ಣ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ನಾಗೇಶ್ವರಮೂರ್ತಿ



ಮೈಸೂರಿನ ಅಶೋಕ ರಸ್ತೆಯ ಜ್ಯುವೆಲ್ಲರಿ ಅಂಗಡಿ ಮಾಲೀಕ ಎಂ.ನಾಗೇಶ್ವರಮೂರ್ತಿ (71) ಬುಧವಾರ ನಿಧನರಾದರು. ದಿವಂಗತ ಹಳ್ಳದಕೇರಿ ಮಾಸ್ತಾಚಾರಿ ಅವರ ಪುತ್ರರಾದ ಇವರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಿವಾಕರ್




ಮೈಸೂರಿನ ಸಿದ್ಧಾರ್ಥನಗರದ ನಿವಾಸಿ ಹಾಗೂ ರೇಸಿಂಗ್ ಬುಕ್ ವರದಿಗಾರ ದಿವಾಕರ್ (62) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಲರಾಮ್



ಮೈಸೂರಿನ ಕುವೆಂಪುನಗರ ಆರ್‌ಎಂಪಿ ಕ್ವಾಟ್ರರ್ಸ್ ನಿವಾಸಿ ಮೆಕ್ಯಾನಿಕ್ ಬಲರಾಮ್(80) ಅವರು ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಭಾನುವಾರ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು(ಮೊ.ಸಂ.8310986360) ತಿಳಿಸಿವೆ.

ಸಾನಿಹಾ



ಮೈಸೂರಿನ ಕುವೆಂಪುನಗರದ ನಿವಾಸಿ ಎಂ.ಎಸ್.ಅಭಿಷೇಕ್ ಮತ್ತು ಆರ್.ಪವಿತ್ರ ದಂಪತಿ ಪುತ್ರಿ ಸಾನಿಹಾ (11) ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು. ಮೃತ ಬಾಲಕಿ ತಂದೆ–ತಾಯಿ, ದೊಡ್ಡಮ್ಮ ಮಂಜುಳಾ, ರಂಗಲಕ್ಷ್ಮಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾಳೆ. ಅಂತ್ಯಕ್ರಿಯೆ ಅರವಿಂದ ನಗರ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರಮಪಟ್ಟರೆ ನೀವೂ ನ್ಯಾಯಾಧೀಶರಾಗಬಹುದು

ವಕೀಲರಿಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬೋಪಣ್ಣ ಟಿಪ್ಸ್



ಎ.ಎಸ್.ಬೋಪಣ್ಣ

ಮೈಸೂರು, ಆ.12 (ಬಿಎಲ್‌ಯು)– ಸಮರ್ಥ ವಾದ ಮಂಡನೆ ಹಾಗೂ ಉತ್ತಮ ವ್ಯಾಸಂಗದಿಂದ ನೀವು ಕೂಡ ನ್ಯಾಯಾಧೀಶರಾಗಬಹುದು ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ವಕೀಲರಿಗೆ ಕಿವಿ ಮಾತು ಹೇಳಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆದ ವಕೀಲರ 10ನೇ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬಹಳಷ್ಟು ವಕೀಲರಿಗೆ ನ್ಯಾಯಾಧೀಶರಾಗುವ ಸಾಮರ್ಥ್ಯವಿದೆ. ಆದರೆ ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಟಿಪ್ಸ್ ನೀಡಿದರು.

ನಾನು ಮೂಲತಃ ಕೊಡಗಿನವನು. ಆದರೆ ಬೆಂಗಳೂರಿನ'ಲ್ಲಿ ವಕೀಲನಾಗಿ ಪ್ರಾಕ್ಟೀಸ್ ಮಾಡುತ್ತಿದ್ದೆ. ಹೆಚ್ಚಾಗಿ ಕಾರ್ಮಿಕ ವ್ಯಾಜ್ಯಗಳ ಬಗ್ಗೆ ವಾದ ಮಾಡುತ್ತಿದ್ದೆ. ನಾನು ಸುಪ್ರೀಂಕೋರ್ಟ್ ನ್ಯಾಯಾಧೀಶನಾಗುತ್ತೇನೆ ಎಂದು ನಿರೀಕ್ಷೆ ಮಾಡಿರಲಿಲ್ಲ. ನನ್ನ ಹಾಗೆ ಶ್ರಮಪಟ್ಟರೆ ನೀವು ಕೂಡ ನ್ಯಾಯಾಧೀಶರಾಗಬಹುದು. ನಿಮಗೆ ಸ್ಫೂರ್ತಿಯಾಗಲಿ ಎಂಬ ಕಾರಣದಿಂದ ಈ ಮಾತು ಹೇಳುತ್ತಿದ್ದೇನೆ ಎಂದರು.

ನಾನು ವಕೀಲ ವೃತ್ತಿ ಮಾಡಿ ಈಗ ನ್ಯಾಯಾಧೀಶನಾಗಿದ್ದೇನೆ. ಈ ಕಾರಣದಿಂದ ವಕೀಲರನ್ನು ಕಂಡರೆ ನನಗೆ ಬಹಳ ಪ್ರೀತಿ ವಿಶ್ವಾಸ ಎಂದು ನ್ಯಾಯಮೂರ್ತಿ ಬೋಪಣ್ಣ ನುಡಿದರು.

ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದಾಗ ಸಣ್ಣ ಸಮಾರಂಭ ಇರಬಹುದು ಎಂದುಕೊಂಡಿದ್ದೆ. ಆದರೆ ಸಾವಿರಾರು ವಕೀಲರನ್ನು ಸೇರಿಸಿ ನಡೆಸುತ್ತಿರುವ ದೊಡ್ಡ ಪ್ರಮಾಣದ ಈ ಸಮ್ಮೇಳನ ನೋಡಿ ಸಂತೋಷವಾಯಿತು ಎಂದರು. ಮೈಸೂರು ರೇಷ್ಮೆ ಹಾಗೂ ರೇಷ್ಮೆ ನೂಲಿನಿಂದ ನೇಯ್ದಿರುವ ಅತ್ಯಾಕರ್ಷಕ ಹಾರವನ್ನು ಹಾಕುವುದರ ಮೂಲಕ ನ್ಯಾಯಮೂರ್ತಿ ಬೋಪಣ್ಣ ಅವರನ್ನು ವಕೀಲರ ಸಂಘದವರು ಸನ್ಮಾನಿಸಿದರು.

ಲೋಕ ಅದಾಲತ್‌ಗೆ ವಕೀಲರು ಹೆಚ್ಚು ಪ್ರಾಮುಖ್ಯತೆ ನೀಡಬೇಕು

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಲೆ ಸಲಹೆ



ಮೈಸೂರು, ಆ.12(ಬಿಎಲ್‌ಯು)– ಪ್ರಕರಣಗಳು ಶೀಘ್ರ ಇತ್ಯರ್ಥವಾಗಲು ಅನುವಾಗುವ ಲೋಕ ಅದಾಲತ್‌ಗೆ ವಕೀಲರು ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಲೆ ಸಲಹೆ ನೀಡಿದ್ದಾರೆ.

ಕಕ್ಷಿದಾರರ ನಡುವೆ ರಾಜೀ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಗೊಳಿಸಲು ವಕೀಲರು ಮುಂದಾಗಬೇಕು. ಇದರಿಂದ ನ್ಯಾಯಾಂಗ ವ್ಯವಸ್ಥೆ ಮೇಲೆ ಪ್ರಕರಣಗಳ ಒತ್ತಡ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಲೋಕ ಅದಾಲತ್‌ನಲ್ಲಿ ಲಕ್ಷಾಂತರ ಪ್ರಕರಣಗಳು ಇತ್ಯರ್ಥವಾಗುತ್ತದೆ. ಇದೇ ವರ್ಷದ ಫೆಬ್ರವರಿ ತಿಂಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 64.13 ಲಕ್ಷ ಪ್ರಕರಣ ಇತ್ಯರ್ಥವಾಗಿದೆ. ಎರಡನೇ ಬಾರಿ ನಡೆದ ಲೋಕ ಅದಾಲತ್ ನಲ್ಲಿ 34.76 ಲಕ್ಷ ಪ್ರಕರಣಗಳು ಇತ್ಯರ್ಥವಾಗಿದೆ ಎಂದು ಪ್ರಸನ್ನ ವರಾಲೆ ಅಂಕಿ–ಅಂಶಗಳ ವಿವರ ನೀಡಿದರು.

ಲೋಕ ಅದಾಲತ್‌ನಲ್ಲಿ ಕುಟುಂಬ ವ್ಯಾಜ್ಯಗಳು ಕೂಡ ಬಗೆಹರಿದಿದೆ. ಇದರಿಂದ ಭಿನ್ನಾಭಿಪ್ರಾಯ ಹೊಂದಿದ್ದ ಬಹಳಷ್ಟು ದಂಪತಿಗಳು ಒಂದಾಗಿದ್ದಾರೆ. ತಂದೆ–ತಾಯಿ ಮತ್ತೆ ಒಂದಾಗಿ ಬಾಳ್ವೆ ಮಾಡುವ ಕಾರಣ ಮಕ್ಕಳಿಗೂ ಕೂಡ ಸಂತೋಷವಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಮಾಡಲು ಪ್ರಯತ್ನ ಮಾಡಿ ಎಂದು ಪ್ರಸನ್ನ ವರಾಲೆ ವಕೀಲರಿಗೆ ಸಲಹೆ ನೀಡಿದರು.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಮೈಸೂರು,ಆ.12(ಎಂಕೆ)–ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ನಂಜನಗೂಡಿನ ಶ್ರೀರಾಂಪುರ ಬಡಾವಣೆ ನಿವಾಸಿ ಮನೋಜ್(24) ಮೃತಪಟ್ಟವರು. ಶುಕ್ರವಾರ ರಾತ್ರಿ ಮನೋಜ್ ಮತ್ತು ಆಕಾಶ್ ಗಾರೆ ಕೆಲಸ ಮುಗಿಸಿ ಬೈಕಿನಲ್ಲಿ ದೊಡ್ಡ ಕಾನ್ಯ ಗ್ರಾಮದ ಎಪಿಜೆ ಅಬ್ದುಲ್ ಕಲಾಂ ಅಲ್ಪಸಂಖ್ಯಾತರ ವಸತಿ ಶಾಲೆ ಬಳಿ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಪರಿಣಾಮ ಮನೋಜ್ ಸ್ಥಳದಲ್ಲೇ ಮೃತಪಟ್ಟಿದ್ದು, ಗಾಯಗೊಂಡಿರುವ ಆಕಾಶ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯಾದ್ಯಂತ 108 ವೈದ್ಯರ ವರ್ಗಾವಣೆ

ಮೈಸೂರು, ಆ.12(ಎಸ್‌ಪಿಎನ್)– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ 96 ವೈದ್ಯಾಧಿಕಾರಿಗಳು, ನಾಲ್ವರು ಉಪ ನಿರ್ದೇಶಕರು ಹಾಗೂ 8 ಮಂದಿ ತಜ್ಞ ವೈದ್ಯರು ಸೇರಿದಂತೆ ಒಟ್ಟು 38 ಮಂದಿಯನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ.

ಮೈಸೂರು ಕೇಂದ್ರ ಕಾರಾಗೃಹದಲ್ಲಿ ಮಾನಸಿಕ ಆರೋಗ್ಯ ತಜ್ಞರಾಗಿ ಕೆಲಸ ಮಾಡುತ್ತಿದ್ದ ಡಾ.ವಿ.ಸಂತೋಷ್ ಅವರನ್ನು ಮೈಸೂರು ಡಿಎಲ್‌ಓ (ಡಿಸ್ಟ್ರಿಕ್ ಲೆಪ್ರೊಸಿ ಆಫೀಸರ್) ಹುದ್ದೆಗೆ, ಮಂಡ್ಯ ಜಿಲ್ಲೆ ನಾಗಮಂಗಲ ಸಾರ್ವಜನಿಕ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ.ಎಂ.ಸಿ. ಸೋಮಶೇಖರ ಅವರನ್ನು ಮಂಡ್ಯ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಹುದ್ದೆಗೆ, ಮೈಸೂರು ತಾಲೂಕಿನ ಸಾಲುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಆಡಳಿತ ವೈದ್ಯಾಧಿಕಾರಿ ಡಾ.ವಿ.ಬೃಂದಾ ಅವರನ್ನು ಮೈಸೂರು ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಹುದ್ದೆಗೆ, ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ವಿಜ್ಞಾನ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ.ವಿ. ಸಂಜಯ್ ಅವರನ್ನು ಬೆಂಗಳೂರಿನ ರಾಜ್ಯ ಶುಶ್ರೂಷಕ ಮತ್ತು ಪ್ಯಾರಾ ಮೆಡಿಕಲ್ ಪ್ರಾಧಿಕಾರದ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಗೆ 4ಕ್ಕೂ ಹೆಚ್ಚು ಜನರನ್ನು ಉಪನಿರ್ದೇಶಕರ ಹುದ್ದೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪಕಾರ್ಯದರ್ಶಿ ಎಂ.ಎಸ್. ಅರ್ಚನಾ ವರ್ಗಾವಣೆ ಮಾಡಿ ಆದೇಶಿಸಿದ್ದರಲ್ಲದೆ, ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 8 ಮಂದಿ ತಜ್ಞ ವೈದ್ಯರನ್ನು ವಿವಿಧೆಡೆ ವರ್ಗಾವಣೆ ಮಾಡಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಹಲ್ಲೆ



ಮೈಸೂರು,ಆ.12(ಬಿಎಲ್‌ಯು)– ಕೆಎಸ್‌ಆರ್‌ಟಿಸಿ ಬಸ್ ಅಡ್ಡಗಟ್ಟಿದ ಯುವಕ, ಡ್ರೈವರ್‌ಗೆ ಮನಸೋ ಇಚ್ಛೆ ಥಳಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರು–ಬೆಂಗಳೂರು ರಸ್ತೆಯ ಫೈವ್‌ಲೈಟ್ ಸರ್ಕಲ್ ಬಳಿ ಕೆಎಸ್‌ಆರ್‌ಟಿಸಿ ಬಸ್ ಹಂಪ್ಸ್ ಹತ್ತಿಸುವಾಗ ಏಕಾಏಕಿ ಬಂದ ಸ್ಕೂಟರ್ ಸವಾರ ಯೂಟರ್ನ್ ತೆಗೆದುಕೊಂಡಿದ್ದಾನೆ. ಇದರಿಂದ ಬಸ್ಸು ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ತರುವಾಯ ಮುಂದೆ ಹೋಗುತ್ತಿದ್ದ ಬಸ್ ಚೇಸ್ ಮಾಡಿಕೊಂಡು ಹೋದ ಸ್ಕೂಟರ್ ಸವಾರ ಬಸ್ಸನ್ನು ಅಡ್ಡಗಟ್ಟಿದ್ದಾನೆ. ಬಸ್ ಒಳಗೆ ನುಗ್ಗಿ ಚಾಲಕನನ್ನು ನಿಂದಿಸಿ, ಹಿಗ್ಗಾಮುಗ್ಗಾ ಥಳಿಸಿದ್ದಾನೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.8.2023 ಭಾನುವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023 ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ದಿನೇಶ್ ಕೋಚಿಂಗ್ ಸೆಂಟರ್ :** ಜಿಲ್ಲಾಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ, ಉದ್ಘಾಟನೆ: ಕಾಮಾಕ್ಷಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ವಿ.ಪ್ರಸನ್ನಕುಮಾರ್, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9.30ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಅಂತರ ರಾಷ್ಟ್ರೀಯ ಯುವ ದಿನಾಚರಣೆ ಪ್ರಯುಕ್ತ ಆರೋಗ್ಯ, ಯೋಗಕ್ಷೇಮ ಮತ್ತು ಕ್ರೀಡೆಗಳು, ಉದ್ಘಾಟನೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಾನ್ನಿಧ್ಯ: ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಸ್ಥಳ: ಕಲಾಮಂದಿರ, ಬೆಳಗ್ಗೆ 9.30 ರಿಂದ.

■ **ಆಚಾರ್ಯ ಇನ್‌ಸ್ಟಿಟ್ಯೂಟ್:** ವೇದಿಕ್ ಆರ್ಕಿಟೆಕ್ಚರ್ ಕೋರ್ಸ್ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಉಪಸ್ಥಿತರು: ಡಾ.ಬಿ.ವಿ.ರಾಮನ್ ಜಯಂತಿ, ಮುಖ್ಯ ಅತಿಥಿಗಳು: ಡಾ.ಸೌಮ್ಯ ಕುಮಾರ್, ಮಹಾರಾಜ ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಪಿ. ಸತ್ಯನಾರಾಯಣ, ಅಧ್ಯಕ್ಷತೆ: ಆಚಾರ್ಯ ಐಐಟಿ ಸ್ಥಾಪಕ ನಿರ್ದೇಶಕ ಪ್ರೊ. ಸುಧೀ ಆಚಾರ್ಯ, ಸ್ಥಳ: ಆಚಾರ್ಯ ಇನ್‌ಸ್ಟಿಟ್ಯೂಟ್, ಬೆಳಗ್ಗೆ 9.30ಕ್ಕೆ.

■ **ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ಮಹಾವಿದ್ಯಾಲಯ, ಮೈಸೂರು ಯೋಗ ಒಕ್ಕೂಟ:** ಸ್ವಾತಂತ್ರ್ಯೋತ್ಸವ ಪ್ರಯುಕ್ತ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಉದ್ಘಾಟನೆ: ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಮುಖ್ಯ ಅತಿಥಿಗಳು: ಡಾ.ಎ.ಎಸ್.ಚಂದ್ರಶೇಖರ್, ಹೆಚ್.ಎನ್.ರವಿಕುಮಾರ್, ಎಂ. ವಿವೇಕಾನಂದ, ಎಂ.ಬಿ.ಶ್ರೀಕಂಠಸ್ವಾಮಿ, ಶಿವಪ್ರಕಾಶ್ ಗುರೂಜಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ಯೋಗಿ ನಾರೇಯಣ ಬಣಜಿಗ ಸಂಘ, ವಾಸನ್ ಐ ಕೇರ್ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆ :** ಉಚಿತ ಕಣ್ಣಿನ ತಪಾಸಣಾ ಶಿಬಿರ, ಉದ್ಘಾಟನೆ: ಮೈಲ್ಯಾಕ್ ಮಾಜಿ ಅಧ್ಯಕ್ಷ ಎಚ್.ಎ.ವೆಂಕಟೇಶ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ನಾರಾಯಣ, ಮುಖ್ಯ ಅತಿಥಿಗಳು: ಡಾ.ಪವನ್ ಜೋಷಿ, ಎಚ್.ಆರ್.ಗೋಪಾಲಕೃಷ್ಣ, ಸ್ಥಳ: ವಿದ್ಯಾರ್ಥಿನಿಲಯ, ಬೆಳಗ್ಗೆ 10ಕ್ಕೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಕರ್ನಾಟಕ ಬುದ್ಧ ಧಮ್ಮ ಸಮಿತಿ:** ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಧಮ್ಮ ಸ್ವಾತಂತ್ರ್ಯದೆಡೆಗೆ ಬಿಕ್ಕು ಸಂಘ ದೊಡನೆ ಸಂವಾದ, ಸ್ಥಳ: ಧ್ಯಾನ ಮಂದಿರ, ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶ್ರೀ ಗಣೇಶ್ ಕಲ್ಚರ್ ಅಂಡ್ ಎಜುಕೇಷನ್ ಟ್ರಸ್ಟ್ :** ದೇಶಭಕ್ತಿಗೀತೆ, ಗಾಯನ, ಏಕಪಾತ್ರಾಭಿನಯ, ಪ್ರಬಂಧ ಸ್ಪರ್ಧೆ, ಸ್ಥಳ: ಅಂಧ ಮಕ್ಕಳ ಪ್ರೌಢಶಾಲೆ, ತಿಲಕ್‌ನಗರ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ :** ಸ್ವಾತಂತ್ರ್ಯೋತ್ಸವದ ಅಂಗವಾಗಿ ಕಲಾವಿದ ಯು.ಜಿ. ಮೋಹನ್‌ಕುಮಾರ್ ಆರಾಧ್ಯ ರಚಿಸಿರುವ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಕಲಾ ಪ್ರದರ್ಶನ ಹಾಗೂ ಯೋಧರೊಂದಿಗೆ ಸ್ವಾತಂತ್ರ್ಯೋತ್ಸವ ಆಚರಣೆ, ಚಾಲನೆ: ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಅಧ್ಯಕ್ಷತೆ: ಶಿಲ್ಪ ಕಲಾವಿದ ಎಲ್.ಶಿವಲಿಂಗಪ್ಪ, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಡಾ.ಹೆಳವರಹುಂಡಿ ಸಿದ್ದಪ್ಪ, ಮಡ್ಡೀಕೆರೆ ಗೋಪಾಲ್, ಶಿವಕುಮಾರ್, ಎ.ಪಿ.ನಾಗೇಶ್, ಕೆ.ಪಿ. ದಿವಾಕರ್, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಯೂನಿವರ್ಸಲ್ ಮಾರ್ಷಲ್ ಆರ್ಟ್ಸ್ ಅಂಡ್ ಸ್ಪೋರ್ಟ್ಸ್ :** ಆಲನ್ ತಿಲಕ್ ಕರಾಟೆ ಸ್ಕೂಲ್ ಇಂಟರ್‌ನ್ಯಾಷನಲ್ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಪಾಲಿಕೆ ಸದಸ್ಯ ಅಕ್ಮಲ್ ಪಾಷ, ಮುಖ್ಯ ಅತಿಥಿಗಳು: ಡಾ.ಪ್ರವೀಣ್ ರಂಕ, ಉಪ ಪೊಲೀಸ್ ಆಯುಕ್ತ ಮುತ್ತುರಾಜ್, ಮಾಜಿ ಉಪಮೇಯರ್ ಕೃಷ್ಣ, ಸಿಇಓ ಉಮರ್ ಶರೀಫ್, ಸ್ಥಳ: ಹುಡ್ಕೋ ಮೇನ್ ರೋಡ್, ಬನ್ನಿಮಂಟಪ, ಬೆಳಗ್ಗೆ 11ಕ್ಕೆ.

■ **ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ :** ದಿ ಇಂಡಿಯನ್ ಪೊಲಿಟಿಕಲ್ ಲೆಜೆಂಡ್ ಮುಖ್ಯಮಂತ್ರಿ ಸಿದ್ದರಾಮಯ್ಯರ 76ರ ಸಂಭ್ರಮದಲ್ಲಿ... ಕಾಂಗ್ರೆಸ್ ಗ್ಯಾರಂಟಿ ಜನೋತ್ಸವ ಅವಲೋಕನ, ಉದ್ಘಾಟನೆ: ಸಚಿವ ಡಾ.ಮಹದೇವಪ್ಪ, ಉಪಸ್ಥಿತರು: ಸಚಿವ ಕೆ.ವೆಂಕಟೇಶ್, ರಾಜಕೀಯ ವಿಶ್ಲೇಷಕ ದಿನೇಶ್ ಅಮೀನ್‌ಮಟ್ಟು, ಡಾ.ಅಕ್ಕಯ್ಯ ಪದ್ಮಾಶಾಲಿ, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಜಿಲ್ಲಾ ಮತ್ತು ತಾಲೂಕು ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಮತ್ತು ನೌಕರರ ಸಂಘ :** ಶ್ರೀ ಬಸವ ಜಯಂತಿ, ಶ್ರೀ ಶಿವಕುಮಾರ ಸ್ವಾಮಿಗಳ ಜಯಂತಿ, ಮೈಸೂರು ಜಿಲ್ಲಾ ಮತ್ತು ತಾಲೂಕು ಅರ್ಚಕರ ಸಮಾವೇಶ, ಸಾನ್ನಿಧ್ಯ: ಶ್ರೀ ಷಡಕ್ಷರಬ್ರಹ್ಮ ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವ ಡಾ.ಮಹದೇವಪ್ಪ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಸಚಿವ ರಾಮಲಿಂಗಾರೆಡ್ಡಿ, ಸಂಘದ ರಾಜ್ಯಾಧ್ಯಕ್ಷ ಎಂ.ಎಸ್.ವೆಂಕಟಾಚಲಯ್ಯ, ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಹೆಚ್. ಬಸವ ರಾಜೇಂದ್ರ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಶಿವಾರ್ಚಕ ಮಹದೇವಪ್ಪ, ಉಪಾಧ್ಯಕ್ಷ ಹೆಚ್.ಎನ್.ರಾಜು, ವರುಣಾ ಮಹೇಶ್, ಪ್ರದೀಪ್, ಸ್ಥಳ: ಶ್ರೀ ಕಾಳಿಬೀರೇಶ್ವರ ಕಲ್ಯಾಣ ಮಂಟಪ, ಕಡಕೊಳ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ:** ಸನ್ಮಾನ ಸಮಾರಂಭ, ಅಧ್ಯಕ್ಷತೆ: ಹೆಚ್.ಎನ್.ನವೀನ್, ಸನ್ಮಾನಿತರು: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 1ಕ್ಕೆ.

■ **ಕರ್ನಾಟಕ ರಾಜ್ಯ ವಕೀಲರ ಪರಿಷತ್, ಮೈಸೂರು ಬಾರ್ ಅಸೋಸಿಯೇಷನ್ :** ರಾಜ್ಯಮಟ್ಟದ ವಕೀಲರ ಸಮ್ಮೇಳನದ ಸಮಾರೋಪ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಮರಣ ಸಂಚಿಕೆ ಬಿಡುಗಡೆ: ಸಚಿವ ಡಾ.ಮಹದೇವಪ್ಪ, ಸಮ್ಮೇಳನದ ವೆಲ್‌ಫೇರ್ ಸ್ಟಾಂಪ್ ಬಿಡುಗಡೆ: ಹಿಮಾಚಲ ಪ್ರದೇಶದ ನಿವೃತ್ತ ಹೈಕೋರ್ಟ್ ಮುಖ್ಯ ನ್ಯಾಯಾಧೀಶ ಎಲ್.ನಾರಾಯಣಸ್ವಾಮಿ, ಮುಖ್ಯ ಅತಿಥಿಗಳು: ಜಸ್ಟೀಸ್ ಕೆ.ಎನ್. ಪಣೀಂದ್ರ, ಶಾಸಕ ಎ.ಎಸ್.ಪೊನ್ನಣ್ಣ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ, ವಿಧಾನಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, ಅಧ್ಯಕ್ಷತೆ: ಕರ್ನಾಟಕ ಬಾರ್ ಕೌನ್ಸಿಲ್ ಅಧ್ಯಕ್ಷ ಹೆಚ್.ಎಲ್. ವಿಶಾಲ ರಘು, ಗೌರವ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಸ್ಥಳ: ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3ಕ್ಕೆ.

■ **ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘ:** ಮಹಿಳಾ ಮತ್ತು ಪುರುಷರ ಮಟ್ಟಿ ಕುಸ್ತಿ, ಉದ್ಘಾಟನೆ: ವಾಣಿಜ್ಯೋದ್ಯಮಿ ಜಯದೀಪ್ ಭಾಲೇರಾವ್ ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ಚಂದ್ರಪ್ರಕಾಶ್, ಮುಖ್ಯ ಅತಿಥಿಗಳು: ವಕೀಲ ಓ. ಶ್ಯಾಮ ಭಟ್, ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಪೈಮಂಜು, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಗಣೇಶ, ವಕೀಲ ಗಂಗಾಧರಗೌಡ, ಸ್ಥಳ: ಸಾಹುಕಾರ್ ಎಸ್. ಚನ್ನಯ್ಯ ಕ್ರೀಡಾಂಗಣ, ದೊಡ್ಡಕೆರೆ ಮೈದಾನ, ಮಧ್ಯಾಹ್ನ 3.30ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ವೈ.ವಿ.ಯಶೋಧ ರಾಮಕೃಷ್ಣ ಅವರ ವಚನಜ್ಯೋತಿ ಆಧುನಿಕ ವಚನಗಳ ಸಂಕಲನ ಕೃತಿ ಲೋಕಾರ್ಪಣೆ, ಕವಿಗೋಷ್ಠಿ ಸಮಾರಂಭ, ಉದ್ಘಾಟನೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು: ಪ್ರೊ.ಬೆಸೂರು ಮೋಹನ್ ಪಾಳೇಗಾರ್, ಮುಖ್ಯ ಅತಿಥಿಗಳು: ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ. ಸಂತೋಷ್, ಹೇಮಗಂಗಾ, ವೈ.ವಿ.ಯಶೋಧ ರಾಮಕೃಷ್ಣ, ಓಂಕಾರಪ್ಪ, ಸ್ಥಳ: ಕಸಾಪ ಸಭಾಂಗಣ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಆದ್ಯಗೋವಿಂದಾಚಾರ್ಯ ಅವರಿಂದ ಭಾಗವತ ಸಪ್ತಾಹ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 4.45ರಿಂದ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀನಿವಾಸಾಚಾರ್ಯ ಕೂರ್ಲಹಳ್ಳಿ ಅವರಿಂದ ಯುದ್ಧಕಾಂಡ ಕುರಿತು ಪ್ರವಚನ, ಸ್ಥಳ: ವಿದ್ಯಾಪೀಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಆರಾತ್ರಿಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಪ್ರವಚನ (ಕನ್ನಡದಲ್ಲಿ), ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಸಂಜೆ 6.30 ರಿಂದ.

■ **ರಂಗಾಯಣ:** ಧಾರವಾಡದ ಪಪೆಟ್‌ಹೌಸ್ ಹಾಗೂ ಸಂಚಲನ ಮೈಸೂರು ತಂಡದಿಂದ ಅದ್ಭುತ ರಾಮಾಯಣ–ಛಾಯಾಚಲನೆ ನಾಟಕ ಪ್ರದರ್ಶನ, ಮೂಲ ನಾಟಕ ಕೃತಿ–ಕಂದಗಲ್ ಹನುಮಂತರಾಯ, ನಿರ್ದೇಶನ: ರಜನಿ ಗರುಡ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಶ್ರೀಕೃಷ್ಣಧಾಮ:** ಶ್ರೀ ಶ್ರೀ ಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತು ರ್ಮಾಸ್ಯದ ಪ್ರಯುಕ್ತ ಸಾಂಸ್ಕೃತಿಕ ಹಬ್ಬ, ವಿದ್ವಾನ್ ಎಸ್. ಮಹಾದೇವಪ್ಪ ಅವರ ಮೊಮ್ಮಗನಾದ ವಿದ್ವಾನ್ ಸುಮಂತ್ ಮಂಜುನಾಥ್ ಅವರಿಂದ ಪಿಟೀಲು ವಾದನ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಎಂ.ಕೆ. ಭಾಸ್ಕರ ರಾವ್, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಬಿ.ವಿ.ವಸಂತ ಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಹದಿಹರಯದ ಹೆಣ್ಣುಮಕ್ಕಳ ಮಾನಸಿಕ ಸಮಸ್ಯೆಗಳು ಮತ್ತು ಆಪ್ತ ಸಲಹೆ ಕುರಿತು ಡಾ.ಬಿ.ಎನ್.ರವೀಶ್ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟಾ– ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ–ಅಮೃತ ವಿದ್ಯಾಲಯ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಬಿ.ಕೆ.ರಮಪ್ರಭ, 12.45 ಜನಪದ ಸಂಗೀತ–ರತ್ನಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಜಿ.ಪುಷ್ಪಲತಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ ಮತ್ತು ಕೆ.ಬಿ.ಮೀನಾ, 3.15 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ದಕ್ಷ ಯಜ್ಞ, ಪ್ರಸ್ತುತಿ–ಪುತ್ತೂರಿನ ಎ.ಚಂದ್ರಶೇಖರ್ ಮತ್ತು ತಂಡದವರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಪಶುರಂಗ– ಜಾನುವಾರುಗಳಲ್ಲಿ ಕಂದು ರೋಗ ನಿರ್ವಹಣೆ ಕುರಿತು ನಂಜನಗೂಡು ತಾಲೂಕ್ ಕಲ್ಲುಂದ ಗ್ರಾಮದ ಪಶು ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ಟಿ.ಪಿ.ರಾಘವೇಂದ್ರ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ, ವಿಶೇಷ ಯತ್ನ, ಬಾನುಲಿ ಸರಣಿ–ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯಲ್ಲಿ ತೊಡಗಿರುವ ಮೊಹಮ್ಮದ್ ಕಲೀಂವುಲ್ಲ ಅವರೊಂದಿಗೆ ಸಂವಾದ ಇವರೊಂದಿಗೆ ಭಾಗವಹಿಸುವವರು ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿತ್ ರಾಜೇಂದ್ರ ಪ್ರಸನ್ನ–ಷೆಹನಾಯ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 13 ಭಾನುವಾರ 2023

ಸಂಪುಟ: 44 | ಸಂಚಿಕೆ: 119 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ನಿತ್ಯ 10 ಸಾವಿರ ಕ್ಯುಸೆಕ್‌ನಂತೆ 15 ದಿನ

ತಮಿಳ್ನಾಡಿಗೆ ನೀರು ಬಿಡಿ

- ಕರ್ನಾಟಕಕ್ಕೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚನೆ
- ಆ.22ರವರೆಗೆ ನಿತ್ಯ 8 ಸಾವಿರ ಕ್ಯೂಸೆಕ್ ನೀರು ಬಿಡುವುದಾಗಿ ರಾಜ್ಯದ ವಾದ
- ನಿತ್ಯವೂ 15 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ತಮಿಳ್ನಾಡು ಬೇಡಿಕೆ

ನವದೆಹಲಿ, ಆ.12–ತಮಿಳುನಾಡಿಗೆ ನೀರು ಬಿಡಲು ಕರ್ನಾಟಕ ಸರ್ಕಾರಕ್ಕೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚನೆ ನೀಡಿದೆ.

ದಿನಕ್ಕೆ 10 ಸಾವಿರ ಕ್ಯೂಸೆಕ್‌ನಂತೆ ಹದಿನೈದು ದಿನಗಳ ಕಾಲ ತಮಿಳುನಾಡಿಗೆ ನೀರು ಬಿಡಲು ಪ್ರಾಧಿಕಾರ ಹೇಳಿದೆ. ಆದರೆ ಪ್ರಾಧಿಕಾರದ ಆದೇಶಕ್ಕೆ ಕರ್ನಾಟಕ ಒಪ್ಪಿಗೆ ಸೂಚಿಸಿಲ್ಲ. ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ ಆಗಸ್ಟ್ 22ರವರೆಗೂ ನಿತ್ಯ 8,000 ಕ್ಯೂಸೆಕ್ ನೀರು ಬಿಡುವುದಾಗಿ ಕರ್ನಾಟಕ ತಿಳಿಸಿದೆ. ನಿತ್ಯ 15 ಸಾವಿರ ಕ್ಯೂಸೆಕ್ ನೀರಿಗಾಗಿ ತಮಿಳುನಾಡು ಬೇಡಿಕೆ ಇಟ್ಟಿತ್ತು. ನೀರು ಬಿಡದಿದ್ದರೆ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದಾಗಿ ಎಚ್ಚರಿಕೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಕನಿಷ್ಠ 10 ಸಾವಿರ ಕ್ಯೂಸೆಕ್ ನೀರು ಬಿಡಲು ಪ್ರಾಧಿಕಾರ ಸೂಚನೆ ನೀಡಿತ್ತು. ನೀರಿನ ಅಭಾವದ ಹಿನ್ನೆಲೆಯಲ್ಲಿ ನಿತ್ಯ 8,000 ಕ್ಯೂಸೆಕ್ ಬಿಡುವುದಾಗಿ ಕರ್ನಾಟಕ ಹೇಳಿತ್ತು. ಹೀಗಾಗಿ ಕರ್ನಾಟಕದ ವಿರುದ್ಧ ತಮಿಳುನಾಡು ಸುಪ್ರೀಂಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ ಎನ್ನಲಾಗಿದೆ. ಕಾವೇರಿ ವಿಚಾರದಲ್ಲಿ ಅಂದುಕೊಂಡಂತೆ ತಮಿಳುನಾಡು ಕಿರಿಕ್ ಶುರುಮಾಡಿದೆ. ಅದರಲ್ಲೂ ಕಳೆದ 4–5 ವರ್ಷ ಉತ್ತಮ ಮಳೆಯಾಗಿ, ಕರ್ನಾಟಕ ಹೆಚ್ಚಾಗಿಯೇ ನೀರನ್ನು ತಮಿಳುನಾಡಿಗೆ ಹರಿಸಿತ್ತು. ಆದರೆ ಈ ಬಾರಿ ತೀವ್ರ ಮಳೆ ಕೊರತೆ ಉಂಟಾಗಿದ್ದು ಕನ್ನಡ ನಾಡಿನ ಜೀವನದಿ ಕಾವೇರಿಯಲ್ಲಿ ನೀರು ಬರಿದಾಗುತ್ತಿದೆ. ಕಳೆದ ತಿಂಗಳು ಅಂದರೆ ಜುಲೈನಲ್ಲಿ ಉತ್ತಮವಾಗಿ ಮಳೆಯಾದ ಕಾರಣ ಕೆಆರ್‌ಎಸ್ ಮತ್ತು ಕಾವೇರಿ ಕೊಳ್ಳದ ಡ್ಯಾಂಗಳಿಗೆ ಒಂದಷ್ಟು ನೀರು ಹರಿದಿತ್ತು. ಆದರೂ ಕಾವೇರಿ ಕೊಳ್ಳದಲ್ಲಿ ನೀರಿನ ಕೊರತೆ ಕಾಡುತ್ತಿದೆ. ಈ ಸಂಕಷ್ಟದ ನಡುವೆ ತಮಿಳುನಾಡಿಗೆ ನೀರು ಹರಿಸಲಾಗಿದೆ. ಇನ್ನೂ ಹೆಚ್ಚಿನ ನೀರಿಗಾಗಿ ತಮಿಳುನಾಡು ಕಿರಿಕ್ ಶುರು ಮಾಡಿದೆ ಕಳೆದ ವರ್ಷ ನೂರಾರು ಟಿಎಂಸಿ ಸಮುದ್ರಕ್ಕೆ ಹರಿಸಿದ್ದ ಅಲ್ಲಿನ ಸರ್ಕಾರ, ಈಗ ಮತ್ತೆ ಜಗಳಕ್ಕೆ ನಿಂತಿದೆ.



ಗೃಹಜ್ಯೋತಿ'ಗೆ ಲೋಡ್‌ಶೆಡ್ಡಿಂಗ್ ನೆರಳು!

ಬೇಡಿಕೆ ಹೆಚ್ಚಳ; ಉತ್ಪಾದನೆ ಕುಸಿತ; ಲೋಡ್‌ಶೆಡ್ಡಿಂಗ್ ಅನಿವಾರ್ಯ

ಬೆಂಗಳೂರು, ಆ. 12(ಕೆಎಂಶಿ)–ಗೃಹ ಜ್ಯೋತಿ ಯೋಜನೆಯಡಿ 200 ಯುನಿಟ್‌ವರೆಗೂ ಉಚಿತ ವಿದ್ಯುತ್ ಅನುಷ್ಠಾನಗೊಳ್ಳುತ್ತಿದ್ದಂತೆ ಸರ್ಕಾರ ಮತ್ತೊಂದೆಡೆ ಲೋಡ್ ಶೆಡ್ಡಿಂಗ್ ಪ್ರಾರಂಭಿಸಿದೆ ಗೃಹ ಜ್ಯೋತಿ ಅನುಷ್ಠಾನಗೊಳ್ಳುತ್ತಿದ್ದಂತೆ ದಾಖಲೆ ಪ್ರಮಾಣದಲ್ಲಿ 253 ಮಿಲಿಯನ್ ಯುನಿಟ್‌ಗೆ ಬೇಡಿಕೆ ಏರಿಕೆಯಾಗಿದೆ.



ಇದೇ ಸಮಯದಲ್ಲಿ ಹವಾಮಾನ ವೈಪರಿತ್ಯ ಮತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಅಗತ್ಯವಾಗಿರುವ ಕಲ್ಲಿದ್ದಲು ಪೂರೈಕೆ ಮಿತವ್ಯಯ ಮಾಡಿರುವುದರಿಂದ ವಿದ್ಯುತ್ ಪ್ರಸರಣ ಕಂಪನಿಗಳು ಅನಿವಾರ್ಯವಾಗಿ ಲೋಡ್‌ಶೆಡ್ಡಿಂಗ್‌ಗೆ ಮೊರೆ ಹೋಗಿವೆ. ಉತ್ಪಾದನೆಗೂ, ಬೇಡಿಕೆಗೂ ಅಜಗಜಾಂತರ ವ್ಯತ್ಯಾಸ ಕಂಡು ಬಂದಿರುವುದರಿಂದ ಪ್ರತಿನಿತ್ಯ 3200 ಮೆಗಾ ವ್ಯಾಟ್ ವಿದ್ಯುತ್‌ನಷ್ಟು ಲೋಡ್‌ಶೆಡ್ಡಿಂಗ್ ಮಾಡುತ್ತಿದೆ.

ಒಂದೇ ಬಾರಿ ಲೋಡ್‌ಶೆಡ್ಡಿಂಗ್ ಮಾಡುವ ಬದಲು ರಾಜ್ಯದ ವಿವಿಧೆಡೆ ಬೆಳಿಗ್ಗೆಯಿಂದ ರಾತ್ರಿಯವರೆಗೂ ವಿವಿಧ ಹಂತದಲ್ಲಿ ನಾಲ್ಕರಿಂದ ಆರು ಬಾರಿ ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ಬೇಡಿಕೆಗಿಂತ ಉತ್ಪಾದನೆ ಹೆಚ್ಚಾಗಿ ನೆರೆ ರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡುತ್ತಿದ್ದ ರಾಜ್ಯ ಸರ್ಕಾರ ಉಚಿತ ವಿದ್ಯುತ್ ಅನುಷ್ಠಾನ ಮತ್ತು ಹವಾಮಾನ ವೈಪರಿತ್ಯದಿಂದ ನಮಗೆ ಬೇಕಾಗಿರುವಷ್ಟು ವಿದ್ಯುತ್ ಉತ್ಪಾದನೆಗೂ ತೊಂದರೆಯಾಗಿದೆ. ಮುಂಗಾರು ಮಳೆ ಕೈಕೊಟ್ಟಿರುವುದರಿಂದ ಮಳೆಗಾಲ ದಲ್ಲೂ ರೈತರು ಕೃಷಿ ಪಂಪ್‌ಸೆಟ್ ಮೊರೆ ಹೋಗಿರು ವುದರಿಂದ ಪ್ರತಿನಿತ್ಯ 50 ರಿಂದ 60 ಮಿಲಿಯನ್ ಬೇಡಿಕೆ ಹೆಚ್ಚಿದೆ. ಇದೇ ಕಾಲಕ್ಕೆ ಗೃಹಜ್ಯೋತಿ ಅನುಷ್ಠಾನಗೊಂಡ ನಂತರ ಉಚಿತ ವಿದ್ಯುತ್ ಎಂಬುದನ್ನು ಮನಗಂಡು ಗ್ರಾಹಕರು ಹೆಚ್ಚು ಬಳಕೆ ಮಾಡುತ್ತಿದ್ದಾರೆ.

ಈ ಮಧ್ಯೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಿರುವ ಕಲ್ಲಿದ್ದಲು ಪೂರೈಕೆಯಲ್ಲಿ ಮಿತವ್ಯಯ ಮಾಡಿರುವುದರಿಂದ ಉಷ್ಣಸ್ಥಾವರಗಳು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿಲ್ಲ. ಪವನ ವಿದ್ಯುತ್ ಉತ್ಪಾದನೆಯಲ್ಲೂ ಸಮರ್ಪಕ ಗಾಳಿ ಇಲ್ಲದೆ, ಉತ್ಪಾದನೆ ಕುಸಿತಗೊಂಡಿದೆ. ರಾಜ್ಯದಲ್ಲಿ ಮುಂಗಾರು ಮಳೆ ಕೈಕೊಟ್ಟಿರುವುದರಿಂದ ವಿದ್ಯುತ್ ಉತ್ಪಾದನೆ ಮಾಡುವ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ. ಇರುವ ನೀರನ್ನು ಸಂಕಷ್ಟ ಸಮಯದಲ್ಲಿ ಬಳಕೆ ಮಾಡಿಕೊಳ್ಳಲು ಇಲಾಖೆ ●9ನೇ ಪುಟಕ್ಕೆ

ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರಿಂದ 'ಕಮಿಷನ್' ಆರೋಪ

ಬೆಂಗಳೂರು, ಆ. 12(ಕೆಎಂಶಿ)–ನಮ್ಮ ಸರ್ಕಾರದ ಸಚಿವರು ಶಾಸಕರು, ಲಂಚ ಕೇಳಿಲ್ಲ ಎಂದು ಕೇವಲ ಕೆಂಪಣ್ಣ ಮಾತ್ರವಲ್ಲ, ಇತರೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಕೇವಲ ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರು ಮಾತ್ರ ಸರ್ಕಾರದ ವಿರುದ್ಧ ಕಮಿಷನ್ ಆರೋಪ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನರಿಗೆ ದಕ್ಷ, ಭ್ರಷ್ಟಾಚಾರರಹಿತ ಆಡಳಿತ ನೀಡುವ ವಚನ ನೀಡಿ ಅಧಿಕಾರಕ್ಕೆ ಬಂದಿದ್ದು, ಪಾರದರ್ಶಕವಾಗಿ ಆಡಳಿತ ಮಾಡಲು ಬದ್ಧರಾಗಿದ್ದೇವೆ. ಕರ್ನಾಟಕವನ್ನು ದಕ್ಷ ಆಡಳಿತದ ಪ್ರಗತಿದಾಯಕ ರಾಜ್ಯವಾಗಿ ಮಾಡುವುದು ನಮ್ಮ ಕನಸು. ಇದಕ್ಕಾಗಿ ಜನ ನಮಗೆ ಆಶೀರ್ವಾದ ಮಾಡಿದ್ದಾರೆ. ನಾನು, ಸಿದ್ದರಾಮಯ್ಯ ಅವರು ನಮ್ಮದೇ ಆದ ರಾಜಕೀಯ ಹಿನ್ನೆಲೆ ಹೊಂದಿದ್ದೇವೆ. ಕೆಂಪಣ್ಣ ಅವರು ಬಹಳ ಹಿರಿಯ ಹಾಗೂ ಗೌರವಾನ್ವಿತ ವ್ಯಕ್ತಿ. ಅವರು ಬಹಳ ಜವಾಬ್ದಾರಿ ಹೊಂದಿದ್ದಾರೆ. ಅವರು ಬಿಜೆಪಿ ಸರ್ಕಾರ ಬಾಕಿ ಉಳಿಸಿರುವ ಬಿಲ್ ಪಾವತಿ ಬಗ್ಗೆ ಮನವಿ ಮಾಡಲು ನನ್ನನ್ನು ಭೇಟಿ ಮಾಡಿದ್ದರು. ಬಿಜೆಪಿ ಸರ್ಕಾರ ಯಾಕೆ ಬಿಲ್ ಪಾವತಿ ಮಾಡಲಿಲ್ಲ ಎಂಬುದು ನನ್ನ ಪ್ರಶ್ನೆ. ಈಗ ನಮ್ಮ ಮುಖ್ಯಮಂತ್ರಿಗಳ ನಿರ್ದೇಶನದಂತೆ ಕಾಮಗಾರಿಗಳ ●9ನೇ ಪುಟಕ್ಕೆ

'ಗೃಹಲಕ್ಷ್ಮಿ' ಯೋಜನೆಗೆ ಆ.29 ಇಲ್ಲವೇ 30ರಂದು ಚಾಲನೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

- ಯೋಜನೆಯಡಿ ಈಗಾಗಲೇ 1.06 ಕೋಟಿ ನೋಂದಣಿ
- ಡಿಸೆಂಬರ್ ನಂತರ ಯುವನಿಧಿ ಯೋಜನೆಗೆ ಚಾಲನೆ
- ಭ್ರಷ್ಟಾಚಾರ ಎಸಗಿರುವ ಗುತ್ತಿಗೆದಾರರಿಗೆ ತೊಂದರೆ ಗ್ಯಾರಂಟಿ
- ಕಾವೇರಿ ನದಿ ನೀರು ಹಂಚಿಕೆ ಬಗ್ಗೆ ಸಂಕಷ್ಟ ಸೂತ್ರ ಪಾಲಿಸಬೇಕು



ಮೈಸೂರು, ಆ.12(ಬಿಎಲ್‌ಯು)–ಕುಟುಂಬದ ಯಜಮಾನಿಗೆ ಎರಡು ಸಾವಿರ ರೂಪಾಯಿ ನೀಡುವ ಗೃಹಲಕ್ಷ್ಮಿ ಯೋಜನೆಗೆ ಆಗಸ್ಟ್ 29 ಅಥವಾ 30 ರಂದು ವಿದ್ಯುಕ್ತ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮಕ್ಕೆ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಬಗ್ಗೆ ಅವರು ಇನ್ನು ದಿನಾಂಕ ನೀಡಿಲ್ಲ. ಆ.29 ಇಲ್ಲವೇ 30 ರಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಲಾಗುವುದು. ಯಾವುದೇ ಕಾರಣಕ್ಕೂ ಕಾರ್ಯಕ್ರಮ ಮತ್ತೆ ಮುಂದೂಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕರ್ನಾಟಕದಲ್ಲಿ ಗೃಹಲಕ್ಷ್ಮಿ ಯೋಜನೆಗೆ 1.33 ಕೋಟಿ ಮಹಿಳೆಯರ ನೋಂದಣಿ ಆಗಬೇಕು. ಆದರೆ ಈಗ 1.06 ಕೋಟಿ ಮಹಿಳೆಯರು ನೋಂದಣಿ ಮಾಡಿಸಿಕೊಂಡಿದ್ದಾರೆ. ಇನ್ನು ಕೂಡ ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಕಾರ್ಯಕ್ರಮಕ್ಕೆ ಚಾಲನೆ ನೀಡುವ ದಿನಾಂಕದೊಳಗೆ ಗುರಿ ಮುಟ್ಟುವ ಸಾಧ್ಯತೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಡಿಸೆಂಬರ್ ನಂತರ ಯುವ ನಿಧಿ: ಇನ್ನು ಯುವ ನಿಧಿ ಯೋಜನೆಯನ್ನು ಡಿಸೆಂಬರ್ ನಂತರ ಜಾರಿ ಮಾಡಲಾಗುವುದು. ಬಹುಶಃ ಜನವರಿ ತಿಂಗಳಿಂದ ನಿರುದ್ಯೋಗ ಭತ್ಯೆ ದೊರೆಯಲಿದೆ. ಬಿಎ, ಬಿಕಾಂ, ಬಿಎಸ್ಸಿ, ಎಂಎ, ಎಂಎಸ್ಸಿ, ಎಂಕಾಂ ಸೇರಿದಂತೆ ಪದವಿ ಮುಗಿಸಿರುವ ಹಲವು ನಿರುದ್ಯೋಗಿಗಳಿಗೆ ಮೂರು ಸಾವಿರ ರೂಪಾಯಿ ನೀಡಲಾಗುವುದು. ಡಿಪ್ಲೊಮಾ ಮುಗಿಸಿದವರಿಗೆ 1,500 ನೀಡಲಾಗುವುದು. ಪದವಿ ಮುಗಿಸಿ ಆರು ತಿಂಗಳಾದರೂ ಕೆಲಸ ಸಿಗದವರಿಗೆ ನಿರುದ್ಯೋಗ ಭತ್ಯೆ ದೊರೆಯುತ್ತದೆ ಎಂದರು.

ತಮಿಳುನಾಡು ತಗಾದೆ ಸರಿ ಇಲ್ಲ: ಕಾವೇರಿ ನೀರು ಬಿಡುವಂತೆ ತಮಿಳುನಾಡಿನವರು ಕ್ಯಾತೆ ತೆಗೆದಿದ್ದಾರೆ. ಹೆಚ್ಚುವರಿ ನೀರು ಬಂದಾಗ ಅವರು ಕೇಳದಿದ್ದರೂ, ನೀರು ಬಿಟ್ಟಿದ್ದೇವೆ. ಆದರೆ ಈಗ ಕೊಡಗು ಹಾಗೂ ಕೇರಳದಲ್ಲಿ ನಿರೀಕ್ಷೆಯಂತೆ ಮಳೆಯಾಗಿಲ್ಲ. ಇದರಿಂದ ನಮಗೇ ನೀರಿಗೆ ಕೊರತೆಯಾಗಿದೆ. ಈ ಸಮಯದಲ್ಲಿ ಎರಡು ರಾಜ್ಯಗಳು ಸಂಕಷ್ಟ ಸೂತ್ರ ಪಾಲಿಸಬೇಕಿದೆ. ಕಾವೇರಿ ನೀರು ಬಿಡುವಂತೆ ತಮಿಳುನಾಡು ಸರ್ಕಾರದ ಪ್ರಸ್ತಾಪಕ್ಕೆ ಉತ್ತರ ನೀಡುವ ಸಂಬಂಧ ತಜ್ಞರ ●9ನೇ ಪುಟಕ್ಕೆ

ಕೋರ್ಟ್ ನಿರ್ದೇಶನದಂತೆ ತಾಪಂ, ಜಿಪಂ ಚುನಾವಣೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ನಿಗಮ–ಮಂಡಳಿಗಳಲ್ಲಿ ಶಾಸಕರಿಗೂ ಅವಕಾಶ

ಮೈಸೂರು, ಆ.12(ಬಿಎಲ್‌ಯು)–ನ್ಯಾಯಾಲಯದ ನಿರ್ದೇಶನದಂತೆ ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ, ಬಿಬಿಎಂಪಿ ಚುನಾವಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಮರುವಿಂಗಡಣೆ ಮಾಡುವ ಸಲುವಾಗಿ ನ್ಯಾಯಾಲಯ 10 ವಾರಗಳ ಕಾಲಾವಕಾಶ ನೀಡಿದೆ. ಬಿಬಿಎಂಪಿ ಚುನಾವಣೆ ನಡೆಸುವ ಬಗ್ಗೆ ಕ್ಷೇತ್ರ ಮರುವಿಂಗಣೆಗೆ 12 ವಾರಗಳ ಕಾಲಾವಕಾಶ ನೀಡಿದೆ. ನ್ಯಾಯಾಲಯ ನೀಡಿರುವ ಗಡುವಿನೊಳಗೆ ವರದಿ ಸಿದ್ಧವಾಗಲಿದ್ದು, ಅದನ್ನು ಕೋರ್ಟ್‌ಗೆ ಸಲ್ಲಿಸುತ್ತೇವೆ ಎಂದರು. ತರುವಾಯ ನ್ಯಾಯಾಲಯ ನೀಡುವ ನಿರ್ದೇಶನದಂತೆ ಚುನಾವಣೆ ನಡೆಸುತ್ತೇವೆ. ಚುನಾವಣೆ ನಡೆಸಲು ನಾವು ಬಿಜೆಪಿಯಂತೆ ಹಿಂದೇಟು ಹಾಕುವುದಿಲ್ಲ. ಬಿಜೆಪಿಯವರು ಚುನಾವಣೆ ನಡೆಸಲು ಮೀನಾಮೇಷ ಎಣಿಸುತ್ತಿದ್ದರು. ಆದರೆ ನಾವು ಯಾವುದೇ ಕಾರಣಕ್ಕೂ ಚುನಾವಣೆ ಮುಂದೂಡುವುದಿಲ್ಲ. ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆ ನಡೆಸುತ್ತೇವೆ ಎಂದು ತಿಳಿಸಿದರು.

ಶಾಸಕರಿಗೆ ಸ್ಥಾನ: ನಿಗಮ–ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ ಸಮಿತಿ ರಚನೆ ಮಾಡಲಾಗಿದೆ. ಶಾಸಕರಿಗೂ ಇವುಗಳಲ್ಲಿ ಸ್ಥಾನ ನೀಡಲಾಗುವುದು. ಆದರೆ ಯಾವ ಅನುಪಾತದಲ್ಲಿ ಹಂಚಿಕೆ ಮಾಡಬೇಕೆಂದು ಸಮಿತಿ ನೀಡುವ ತೀರ್ಮಾನದ ಮೇಲೆ ನಿರ್ಧಾರ ಮಾಡಲಾಗುವುದು ಎಂದು ಹೇಳಿದರು. ●9ನೇ ಪುಟಕ್ಕೆ

1,695 ಅನಧಿಕೃತ ಶಾಲೆಗಳು ಬಂದ್

ಬೆಂಗಳೂರು, ಆ.12–ರಾಜ್ಯಾದ್ಯಂತ ಒಟ್ಟು 1,695 ಅನಧಿಕೃತ ಶಾಲೆಗಳಿದ್ದು, ಈ ಶಾಲೆಗಳಿಗೆ ತಮ್ಮ ಲೋಪವನ್ನು ಸರಿಪಡಿಸಲು ಸಮಯಾವಕಾಶ ನೀಡಿ, ಸರಿಹೋಗದಿದ್ದಲ್ಲಿ ಹಂತ ಹಂತವಾಗಿ ಈ ಶಾಲೆಗಳನ್ನು ಮುಚ್ಚಲಾಗುತ್ತದೆ ಎಂದು ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.



ನಗರದ ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಧಿಕೃತ ಶಾಲೆಗಳನ್ನು ಮುಚ್ಚಿಸುವುದು ದೊಡ್ಡ ವಿಷಯವಲ್ಲ. ಆ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಹಿತ ಕಾಯುವುದು ಸರಕಾರದ ಕರ್ತವ್ಯವಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕ್ರಮ ಜರುಗಿಸಲಾಗುವುದು ಎಂದರು.

ರಾಜ್ಯದಲ್ಲಿ 26 ಶಾಲೆಗಳು ನೋಂದಣಿಯನ್ನೇ ಮಾಡಿಲ್ಲ, ಅನುಮತಿ ಪಡೆಯದೆ ಉನ್ನತೀಕರಿಸಿರುವ ಶಾಲೆಗಳು 76, ಇತರೆ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳು 143, ಅನುಮತಿ ಪಡೆಯದೆ ಹೆಚ್ಚುವರಿ ವಿಭಾಗಗಳನ್ನು ಪಡೆದಿರುವ 631, ಅನುಮತಿ ಪಡೆಯದೆ ಸ್ಥಳಾಂತರಿಸಿರುವ 190, ಅನುಮತಿ ಪಡೆಯದೆ ಹಸ್ತಾಂತರ ಮಾಡಿರುವ 15, ಒಂದೇ ಕಟ್ಟಡದಲ್ಲಿ ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಬೋಧಿಸುತ್ತಿರುವ ಶಾಲೆಗಳು 95 ಶಾಲೆಗಳಿವೆ ಎಂದು ಮಾಹಿತಿ ನೀಡಿದರು.

ಮೈಸೂರಲ್ಲಿ ಕರ್ನಾಟಕ ವಕೀಲರ ರಾಜ್ಯ ಮಟ್ಟದ 10ನೇ ಸಮ್ಮೇಳನ ಆರಂಭ

ಮುಂದಿನ ಅಧಿವೇಶನದಲ್ಲಿ ವಕೀಲರ ಹಿತರಕ್ಷಣಾ ಕಾಯ್ದೆ ಮಂಡನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

- ರಾಜ್ಯ ವಕೀಲರ ಪರಿಷತ್ ಕಟ್ಟಡಕ್ಕೆ ನಿವೇಶನ ಮಂಜೂರು
- ವಕೀಲರ ಹಿತ ಕಾಯಲು ಸದಾ ಬದ್ಧ ಎಂದ ಮುಖ್ಯಮಂತ್ರಿ
- ವಕೀಲರ ಈಡೇರಿಸಬಹುದಾದ ಬೇಡಿಕೆಗಳಿಗೆ ಸಕಾರಾತ್ಮಕ ಸ್ಪಂದನೆ





ಮೈಸೂರು, ಆ.12(ಎಂಟಿವೈ)– ವೃತ್ತಿ ಪಾಲನೆ ವೇಳೆ ವಕೀಲರಿಗೆ ಹಲವು ಸಮಸ್ಯೆ ಹಾಗೂ ಸವಾಲುಗಳು ಎದುರಾಗಲಿದ್ದು, ಈ ವೇಳೆ ವಕೀಲರ ರಕ್ಷಣೆಗಾಗಿ ಮುಂದಿನ ಅಧಿವೇಶನದಲ್ಲಿ 'ವಕೀಲರ ಸಂರಕ್ಷಣಾ ಕಾಯ್ದೆ' ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಹಾಗೂ ಮೈಸೂರು ಜಿಲ್ಲಾ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಮೈಸೂರಿನ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಆಯೋಜಿಸಿರುವ ಎರಡು ದಿನಗಳ ರಾಜ್ಯ ಮಟ್ಟದ 10ನೇ ವಕೀಲರ ಸಮ್ಮೇಳನವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಕೀಲರಿಗೆ ರಕ್ಷಣೆ ನೀಡಬೇಕಾದ ಜವಾಬ್ದಾರಿ ನಮ್ಮದಾಗಿದೆ. ನಾನು ಈ ಹಿಂದೆ ವಿರೋಧ ಪಕ್ಷದ ನಾಯಕನಾಗಿದ್ದಾಗ ಬೆಳಗಾವಿ ಅಧಿವೇಶನದಲ್ಲಿ ವಕೀಲರ ಹಿತರಕ್ಷಣಾ ಕಾಯ್ದೆ ಜಾರಿಗೊಳಿಸುವಂತೆ ಒತ್ತಾಯಿಸಿದ್ದೆ. ಇದೀಗ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದೆ. ಮೊದಲನೇ ಅಧಿವೇಶನದಲ್ಲಿ ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೊಳಿಸಲು ಉದ್ದೇಶಿಸಿದ್ದೆ. ಆದರೆ, ಕಾರಣಾಂತರಗಳಿಂದ ಮಸೂದೆ ಮಂಡಿಸಲು ಆಗಿಲ್ಲ. ಮುಂದಿನ ಅಧಿವೇಶನದಲ್ಲಿ ಈ ಮಸೂದೆಯನ್ನು ಪಾಸ್ ಮಾಡುತ್ತೇವೆ. ವಕೀಲರ ರಕ್ಷಣೆಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು. ಕರ್ನಾಟಕ ರಾಜ್ಯ ವಕೀಲರ ಪರಿಷತ್‌ಗೆ ಸ್ವತಃ ಕಟ್ಟಡ ನಿರ್ಮಿಸುವುದಕ್ಕಾಗಿ ನಿವೇಶನ ಮಂಜೂರು ಮಾಡಲು ಸರ್ಕಾರ ನಿರ್ಧರಿಸಿದೆ. ಆದರೆ, ಬೆಂಗಳೂರಲ್ಲಿ ಜಾಗದ ಸಮಸ್ಯೆ ಇದೆ. ರಾಜ್ಯ ವಕೀಲರ ಪರಿಷತ್ತು ಬೆಂಗಳೂರು ಸುತ್ತಮುತ್ತಲಿನ ಯಾವುದಾದರೂ ಸ್ಥಳದಲ್ಲಿ ಜಾಗ ಗುರುತಿಸಿ, ಸರ್ಕಾರಕ್ಕೆ ಮನವಿ ಸಲ್ಲಿಸಿದರೆ ನಿವೇಶನ ಒದಗಿಸುತ್ತೇವೆ. ವಕೀಲರ ಪರಿಷತ್ ಸಲ್ಲಿಸಿರುವ ಇನ್ನಿತರ ಬೇಡಿಕೆಗಳನ್ನು ಪರಿಶೀಲಿಸುತ್ತೇನೆ. ನಿಮ್ಮ ಬೇಡಿಕೆಗಳಿಗೆ ನಾನು ಸಕಾರಾತ್ಮಕವಾಗಿ ಸ್ಪಂದಿಸುತ್ತೇನೆ. ನಾನು ಯಾವ ವಿಚಾರದಲ್ಲೂ ನಕಾರಾತ್ಮಕವಾಗಿ ಮಾತಾಡುವುದಿಲ್ಲ. ಬಗೆಹರಿಸಬಹುದಾದ ಬೇಡಿಕೆಗಳ ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಸಂವಿಧಾನ ಉಳಿಸುವ ಕಾಯಕದಲ್ಲಿ ವಕೀಲರ ಪಾತ್ರ ಹೆಚ್ಚು: ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ●9ನೇ ಪುಟಕ್ಕೆ

ವಕೀಲರಿಗೆ ಭದ್ರತೆ ಸಿದ್ದರಾಮಯ್ಯರ ಆರನೇ ಗ್ಯಾರಂಟಿ

ಮುಂದಿನ ಅಧಿವೇಶನದಲ್ಲಿ ವಕೀಲರ ಹಿತರಕ್ಷಣಾ ಕಾಯ್ದೆ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡುತ್ತಿದ್ದಂತೆ ಕೆಲ ವಕೀಲರು 'ಇದು ಆರನೇ ಭಾಗ್ಯ' ಎಂದು ಕೂಗಿದರು. ಇದನ್ನು ಕೇಳಿಕೊಂಡ ಸಿಎಂ, ವಕೀಲರು ಸಲ್ಲಿಸಿದ ಬೇಡಿಕೆ ಪಟ್ಟಿಯಲ್ಲಿರುವ ಆರನೇ ಬೇಡಿಕೆಯತ್ತ ಗಮನಹರಿಸಲು ಮುಂದಾದರು. ಈ ವೇಳೆ ವೇದಿಕೆಯಲ್ಲಿದ್ದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಂದು ವಕೀಲರು ಹೇಳಿದ್ದು ಆರನೇ ಭಾಗ್ಯ ಎಂದು ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಜೋರಾಗಿ ನಗುತ್ತಲೇ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಇದು ಆರನೇ ಭಾಗ್ಯವೇನಲ್ಲ. ಈಗಾಗಲೇ ಅನೇಕ ಭಾಗ್ಯಗಳನ್ನು ಜಾರಿಗೊಳಿಸಲಾಗಿದೆ. ಈ ಹಿಂದೆ ನಾವು ನೀಡಿದ್ದ 165 ಭರವಸೆಗಳಲ್ಲಿ 158 ಈಡೇರಿಸಿದ್ದೇನೆ. ನುಡಿದಂತೆ ನಡೆದಿದ್ದೇನೆ. ಈಗಲೂ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ವಕೀಲರ ಹಿತರಕ್ಷಣಾ ಕಾಯ್ದೆ ಜಾರಿಗೊಳಿಸಿದರೆ, ಆರನೇ ಗ್ಯಾರಂಟಿ ಕಾರ್ಯಕ್ರಮವಾಗಲಿದೆ ಎಂದರು. ಇದಕ್ಕೆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ವಕೀಲ ಸಮೂಹ ಚಪ್ಪಾಳೆ ತಟ್ಟಿ ಸ್ವಾಗತಿಸಿ, ಅಭಿನಂದಿಸಿದರು.

ಕುರುಬ ಸಮುದಾಯದ ಒಬ್ಬನೇ ವಕೀಲ!

ನಾನು ಆಗ ಕುರುಬ ಸಮುದಾಯದ ಒಬ್ಬನೇ ವಕೀಲನಾಗಿದ್ದೆ. ಇಡೀ ಮೈಸೂರು ಭಾಗದಲ್ಲಿ ಕುರುಬ ಸಮುದಾಯದ ಲಿಂಗಯ್ಯ ಎಂಬುವವರು ಇದ್ದರಾದರೂ ಅವರು ಸರಿಯಾಗಿ ನ್ಯಾಯಾಲಯಕ್ಕೆ ಬರ್ತಾನೆ ಇರಲಿಲ್ಲ. ಅಲ್ಲದೇ, ನಾನು ಒಬ್ಬನೇ ಇದ್ದರೂ ಮೈಸೂರು ವಕೀಲರ ಸಂಘಕ್ಕೆ ಕಾರ್ಯದರ್ಶಿ ಆಗಿ ಆಯ್ಕೆಯಾಗಿದ್ದೆ ಎಂದು ಸಿಎಂ ಸಿದ್ದರಾಮಯ್ಯ ಸ್ಮರಿಸಿದರು.

ಶ್ಯಾನುಭೋಗರ ಮಾತು ಕೇಳಿದ್ದರೇ ನಾನು ಸಿಎಂ ಆಗುತ್ತಿರಲಿಲ್ಲ

ಈ ಹಿಂದೆ ತಳ ಸಮುದಾಯದವರು ಲಾಯರ್ ಓದಬಾರದು ಎಂಬ ಸಂಚು ನಡೆಸಲಾಗುತ್ತಿತ್ತು. ಆ ಅನುಭವ ನನಗೂ ಆಗಿದೆ. ನಮ್ಮೂರಲ್ಲಿ ಚೆನ್ನಪ್ಪಯ್ಯ ಎಂಬುವವರಿದ್ದರು. ನಮ್ಮಪ್ಪ ಅವರ ಶಿಷ್ಯ. ಒಂದು ದಿನ ನಮ್ಮ ತಂದೆ, ಶ್ಯಾನು ಬೋಗರೇ ನನ್ನ ಮಗನನ್ನು ಲಾಯರ್ ಓದಿಸಬೇಕು ಎಂದು ಕೇಳಿದಾಗ ಅದಕ್ಕೆ ಚೆನ್ನಪ್ಪಯ್ಯ 'ಹೇಯ್ ಕುರುಬರು ಲಾಯರ್ ಓದೋಕೆ ಸಾಧ್ಯವೇನಯ್ಯ, ಬೇಡ ಎಂದಿದ್ದರು. ಇದರಿಂದ ನಮ್ಮ ಅಪ್ಪ ಮನೆಗೆ ಬಂದು ಶ್ಯಾನುಭೋಗರು ಹೇಳಿದ್ದಾರೆ ಲಾಯರ್ ಓದಬೇಡ ಎಂದು ತಾಕೀತು ಮಾಡಿದರು. ಶ್ಯಾನುಭೋಗರ ಮಾತು ಕೇಳಿ ನಾನು ಲಾ ಓದದಿದ್ದರೆ, ಇಂದು ಮುಖ್ಯಮಂತ್ರಿ ಆಗುತ್ತಿರಲಿಲ್ಲ ಎಂದು ತಮ್ಮ ಭವಿಷ್ಯ ಉಜ್ವಲಗೊಂಡಿದ್ದನ್ನು ನೆನಪಿಸಿಕೊಂಡರು.

ನಕ್ಕರೆ ಅದೇ ಸ್ವರ್ಗ

ಸತೀಶ : ಟೀಚರ್... ಪಕ್ಷಾಂತರ ಎಂದರೇನು?
ಟೀಚರ್ : ಪಕ್ಷ ಬದಲಾಯಿಸುವುದು!
ಸತೀಶ : ಸ್ಥಳಾಂತರ?
ಟೀಚರ್ : ಸ್ಥಳ ಬದಲಾಯಿಸುವುದು!
ಸತೀಶ : ಹಾಗಾದ್ರೆ ಗಂಡಾಂತರ ಎಂದರೆ?

ಮೈಸೂರು ಮಿತ್ರ

ಭಾನುವಾರ, 13 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಹೆತ್ತವರಿಗೆ ಗೌರವ ಕೊಡದ ಮಕ್ಕಳು ಜಗತ್ತಿನಲ್ಲಿ ಇನ್ಯಾರಿಗೆ ಗೌರವ ಕೊಡಲು ಸಾಧ್ಯ?. –ಬಿಲ್ಲಿ ಗ್ರಹಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಷ್ಠೆಯಿದ್ದವನಿಗೆ ನಷ್ಟವಿಲ್ಲ

ನಿಮ್ಮ ಪತ್ರಗಳು

ಮತ್ತೆ ಮೇಲಕ್ಕೆ ಏರಿದ ನಂದಿನಿ ತುಪ್ಪದ ದರ



ಮಾನ್ಯರೇ,

ಆಗಸ್ಟ್ 1 ರಿಂದ ಅನ್ವಯವಾಗುವಂತೆ ಕರ್ನಾಟಕ ಹಾಲು ಮಹಾಮಂಡಳವು ಸರ್ಕಾರದ ನಿರ್ಧಾರದೊಂದಿಗೆ ನಂದಿನಿ ಹಾಲಿನ ದರವನ್ನು ಪರಿಷ್ಕರಿಸಿ ಲೀಟರ್ ಗೆ ಕನಿಷ್ಟ ರೂ 3ರಷ್ಟು ಏರಿಸಿತ್ತು. ಅದರೊಟ್ಟಿಗೆ ಮಾಮೂಲಿನಂತೆ, ಗ್ರಾಹಕರಿಗೆ ಹೊರೆಯಾಗದಂತೆ ಮತ್ತು ಹಾಲು ಉತ್ಪಾದಕರ ಹಿತ, ಎಂಬ ಹಳೆಯ ಸವಕಲು ಡೈಲಾಗ್ ಅನ್ನೇ ಹೇಳಿಯೂ ಇತ್ತು. ಆದರೆ ಈ ದರ ಏರಿಕೆ ಹಿನ್ನೆಲೆಯಲ್ಲೇ ಜಿಲ್ಲಾ ಹಾಲು ಒಕ್ಕೂಟಗಳು ಐದಾರು ದಿನಗಳ ಹಿಂದೆ ನಂದಿನಿ ತುಪ್ಪದ ಬೆಲೆ ಯನ್ನೂ ಏರಿಸಿದೆ. ವಿಪರ್ಯಾಸವೆಂದರೆ ಕೆಲವೇ ತಿಂಗಳ ಹಿಂದೆ ನಂದಿನಿ ತುಪ್ಪದ ಬೆಲೆ ಏರಿಸಿದ್ದ ಜಿಲ್ಲಾ ಹಾಲು ಒಕ್ಕೂಟಗಳು, ಪ್ರಸ್ತುತ ಹಾಲಿನ ದರ ಏರಿಕೆ ನೆಪವನ್ನು ಮುಂದಿಟ್ಟುಕೊಂಡು ಮತ್ತೆ ನಂದಿನಿ ತುಪ್ಪದ ದರವನ್ನು ಲೀಟರ್‌ಗೆ ರೂ 610 ರಿಂದ 650ಕ್ಕೆ, ಮತ್ತು ಅರ್ಧ ಲೀಟರ್ ಪ್ಯಾಕೆಟ್‌ಗೆ ರೂ 305ರಿಂದ 325ಕ್ಕೆ ಏರಿಸಿದೆ. ಅಂದರೆ ಒಟ್ಟಾರೆಯಾಗಿ ಲೀಟರ್ ತುಪ್ಪಕ್ಕೆ ರೂ 40 ರಷ್ಟನ್ನು ಸದ್ದಿಲ್ಲದೆ ಹೆಚ್ಚಳ ಮಾಡಿದೆ. ಈ ಬಗ್ಗೆ ಯಾವ ಪ್ರಕಟಣೆಯೂ ನೀಡಿಲ್ಲ.

ಹಾಲಿನ ದರ ಪರಿಷ್ಕರಣೆಯ ದರದ ನಿರ್ಧಾರವನ್ನು ಸರ್ಕಾರ ಹೇಗೆ ನಿಯಂತ್ರಣದಲ್ಲಿರಿಸಿಕೊಂಡಿದೆಯೋ ಹಾಗೆಯೇ ಹಾಲಿನ ಉಪ ಉತ್ಪನ್ನಗಳ ಬೆಲೆಯನ್ನೂ ಸರ್ಕಾರ ವಹಿಸಿಕೊಳ್ಳುವುದು ಗ್ರಾಹಕರ ಹಿತದೃಷ್ಟಿಯಿಂದ ಉತ್ತಮ. ಇಲ್ಲದೇ ಹೋದಲ್ಲಿ, ಜಿಲ್ಲಾ ಹಾಲು ಒಕ್ಕೂಟಗಳು ಮನಸೋ ಇಚ್ಛೆ ದರ ಪರಿಷ್ಕರಿಸಿ ನಂದಿನಿ ಗ್ರಾಹಕರ ಮೇಲೆ ಗದಾ ಪ್ರಹಾರ ನಡೆಸುತ್ತಲೇ ಇರುತ್ತದೆ.

–ವಿಜಯ್ ಹೆಮ್ಮಿಗೆ, ಮೈಸೂರು

ಅತ್ಯಾಚಾರಿ ದೃಶ್ಯ ಮಾಧ್ಯಮಗಳು!

ಮಾನ್ಯರೆ,

ಸೆಲೆಬ್ರಿಟಿಗಳ ಅಂತ್ಯ ಸಂಸ್ಕಾರವನ್ನು ವೈಭವೀಕರಿಸಿ ಎಡೆಬಿಡದೆ ನೇರಪ್ರಸಾರ ಮಾಡುವ ಮೂಲಕ ನಮ್ಮ ಸುದ್ದಿವಾಹಿನಿಗಳು ಘಟಶ್ರಾದ್ಧ (ತನ್ನ ಶ್ರಾದ್ಧವನ್ನು ತಾನೇ ಮಾಡಿಕೊಳ್ಳುವುದು) ಮಾಡಿಕೊಂಡಿವೆ.

ಶವ ಪರೀಕ್ಷೆ ನಡೆಸುವ ಸ್ಥಳಕ್ಕೆ ಪ್ರವೇಶಿಸಲು ಅವಕಾಶ ನೀಡಿದ್ದರೆ ಈ ಸುದ್ದಿ ವಾಹಿನಿಗಳು ಶವ ಪರೀಕ್ಷೆಯ ದೃಶ್ಯಗಳನ್ನೂ ಸಹ ನೇರ ಪ್ರಸಾರ ಮಾಡುತ್ತಿದ್ದವೋ ಏನೋ? ವಿದ್ಯುತ್ ಚಿತಾಗಾರದೊಳಗೆ ಕ್ಯಾಮರಾ ತೂರಿಸಲು ಅವಕಾಶ ನೀಡಿದ್ದರೆ ನಮ್ಮ ಸುದ್ದಿ ವಾಹಿನಿಗಳ ಕ್ಯಾಮರಾಗಳೂ ಸಹ ಭಸ್ಮವಾಗಿ ಸುದ್ದಿವಾಹಿನಿಗಳ ಆತ್ಮಕ್ಕೆ ಶಾಂತಿ ದೊರಕುತ್ತಿತ್ತು.

ಯಾವುದೇ ವ್ಯಕ್ತಿ ಮೃತನಾದರೆ, ಮೃತಳಾದರೆ ಅಂತಹವರ ಪಾರ್ಥಿವ ಶರೀರದ ಫೋಟೋ ಅಥವಾ ವಿಡಿಯೋ ಚಿತ್ರೀಕರಣ ಮಾಡುವುದು ಮೃತರಿಗೆ ಮಾಡುವ ಅವಮಾನ. ಮೃತ ವ್ಯಕ್ತಿಗಳ ಶವದ ಚಿತ್ರೀಕರಣ ಮಾಡುವುದರ ಜೊತೆಗೆ ಅದನ್ನು ನೇರಪ್ರಸಾರ ಮಾಡುವುದು ಅತ್ಯಾಚಾರಕ್ಕಿಂತ ನೀಚ ಕೃತ್ಯ!

ಶವಸಂಸ್ಕಾರದ ದೃಶ್ಯಗಳನ್ನು ನೇರಪ್ರಸಾರ ಮಾಡುತ್ತಾ ಏರುಧ್ವನಿಯಲ್ಲಿ ಅಬ್ಬರಿಸುತ್ತಾ ಸುದ್ದಿ ಮಾಡುವ ನಡುನಡುವೆ ಜಾಹೀರಾತುಗಳನ್ನು ತುರುಕಿ ಸಾವಿನ ಮನೆಯಲ್ಲಿ ಲಾಭ ಮಾಡುವ ಸುದ್ದಿವಾಹಿನಿಗಳಿಗೆ ಜ್ಞಾನೋದಯವಾಗುವುದೆಂದು?

ಶವದ ಮೇಲೆ ಅತ್ಯಾಚಾರ ಎಸಗಿದ ವಿಕೃತಕಾಮಿಗಿಂತ ಶವಸಂಸ್ಕಾರದ ದೃಶ್ಯಗಳನ್ನು ನೇರಪ್ರಸಾರ ಮಾಡಿದ ಮಾಧ್ಯಮಗಳ ಕೃತ್ಯ ಹೇಯ!

ತಾನು ಮೃತನಾದ, ಮೃತಳಾದ ನಂತರ ತನ್ನ ಶವಸಂಸ್ಕಾರದ ದೃಶ್ಯಗಳನ್ನು ಸುದ್ದಿವಾಹಿನಿಗಳು ನೇರ ಪ್ರಸಾರ ಮಾಡಬಾರದು ಎಂದು ಪ್ರತಿಯೊಬ್ಬ ಸೆಲೆಬ್ರಿಟಿಯೂ ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ಪಡೆದು ನಮ್ಮ ಸುದ್ದಿವಾಹಿನಿಗಳು ಎಸಗುವ ಅತ್ಯಾಚಾರಕ್ಕೆ ಬ್ರೇಕ್ ಹಾಕಬೇಕಿದೆ!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಕುಡಿಯುವ ನೀರಿನ ಪೈಪ್ ದುರಸ್ತಿಪಡಿಸಿ



ಮಾನ್ಯರೆ,

ಮೈಸೂರಿನ ಕುವೆಂಪುನಗರದ ಉದಯ ರವಿ ರಸ್ತೆ, ಚಂದ್ರಮಣಿ ವೃತ್ತ, ಅಮ್ಮ ಕಾಂಪ್ಲೆಕ್ಸ್, ಮಾರ್ಬಲ್ಸ್ ಬಳಿ ಕುಡಿಯುವ ನೀರಿನ ಪೈಪ್ ಒಡೆದು ಸುಮಾರು ದಿನಗಳಿಂದ ನೀರು ಅನವಶ್ಯಕವಾಗಿ ಪೋಲಾಗುತ್ತಿದೆ. ಅಲ್ಲದೆ ಈ ರಸ್ತೆಯಲ್ಲಿ ವಾಹನ ದಟ್ಟಣೆ ಜಾಸ್ತಿ ಇರುವುದರಿಂದ ವಾಹನಗಳು ಇದರ ಮೇಲೆ ಚಲಿಸಿ ಪಾದಚಾರಿಗಳ ಮೇಲೆ ಎರಚುವುದುಂಟು. ಇದರ ಬಗ್ಗೆ ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಸಂಬಂಧಪಟ್ಟ ನೀರು ಪೋಲಾಗದಂತೆ ಕ್ರಮ ವಹಿಸಲು ಕುವೆಂಪುನಗರ, ಉದಯರವಿ ರಸ್ತೆ, ಅಗ್ನಿ ಹಂಸ ರಸ್ತೆ, ನವಿಲು ರಸ್ತೆ, ಚಿತ್ರಭಾನು ರಸ್ತೆ ನಿವಾಸಿಗಳ ಮನವಿ.

–ಬಿ. ನರೇಂದ್ರಬಾಬು, ಕುವೆಂಪುನಗರ, ಮೈಸೂರು.

ಸರಿಯಾದ ಕ್ರಮವಲ್ಲ

ಮಾನ್ಯರೆ,

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾದ ಡಾ. ಎಂ.ಹೆಚ್. ನಾಗೇಶ್ ಅವರು ಲೋಕಾಯುಕ್ತರ ಬಲೆಗೆ ಬಿದ್ದು 5 ವರ್ಷ ಜೈಲು ಶಿಕ್ಷೆ ಆಗಿರುವುದರಿಂದ ಅವರನ್ನು ಕಡ್ಡಾಯವಾಗಿ ನಿವೃತ್ತಿ ಹೊಂದಲು ಅನುಮೋದನೆ ನೀಡಲಾಗಿದೆ ಎಂಬ ಸುದ್ದಿ ಓದಿ ಆಶ್ಚರ್ಯ ಆಯಿತು. ಮೊದಲೇ ಭ್ರಷ್ಟ, ಅದರ ಮೇಲೆ ಕ್ರಿಮಿನಲ್ ಅಪರಾಧದ ಮೇಲೆ 5 ವರ್ಷ ಸಜಾ. ಅಂಥವರನ್ನು ಕಡ್ಡಾಯವಾಗಿ ನಿವೃತ್ತಿ ಹೇಗೆ ಮಾಡಿದರು? ಈಗ ಅವರಿಗೆ ಪಿಂಚಣಿ, ಕುಟುಂಬ ಪಿಂಚಣಿ, DCRG ಮುಂತಾದ ಸವಲತ್ತು ಸಿಗುತ್ತವೆ. ಒಂದೇ ದಿನ ನ್ಯಾಯಾಲಯದಿಂದ ಜೈಲು ಶಿಕ್ಷೆ ಆದರೂ ಅವರನ್ನು ಸೇವೆಯಿಂದ ವಜಾ ಮಾಡಬೇಕಿತ್ತು. ಆಗ ಯಾವುದೇ ಸವಲತ್ತುಗಳು ದೊರಕುವುದಿಲ್ಲ. ಆಗ ಶಿಕ್ಷೆಯು ಪರಿಣಾಮಕಾರಿಯಾಗಿರುತ್ತದೆ. ಇಲ್ಲೇನಾದರೂ ವಾಮಮಾರ್ಗ ಇದೆಯೇ ಎಂಬ ಸಂದೇಹ ಮೂಡುತ್ತದೆ

–ಅಕ್ಕಿಹೆಬ್ಬಾಳು ವೆಂಕಟೇಶ್, ಅಧಿಕಾರಿ ಅಂಚೆ ಇಲಾಖೆ

ನೊಂದವರಿಗೆ ನ್ಯಾಯ ಕಲ್ಪಿಸಿ ಸಮಾಜದಲ್ಲಿ ಪರಿವರ್ತನೆ ತರುವ ವಕೀಲರು ಸಾಮಾಜಿಕ ಇಂಜಿನಿಯರ್‌ಗಳು!

● ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅಭಿಮತ ● 'ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ' ವಿವರಣೆ ● ಎಲ್ಲರಲ್ಲೂ ಕಾನೂನು ಅರಿವು ಮೂಡಿಸುವುದು ವಕೀಲರ ಪ್ರಥಮ ಕರ್ತವ್ಯ



ಮೈಸೂರು, ಆ.12(ಎಂಕೆ)– ಕಪ್ಪು ಕೋಟ್ ಧರಿಸಿ ನೊಂದವರಿಗೆ ನ್ಯಾಯ ದೊರಕಿಸುವ ಮೂಲಕ ಸಮಾಜದಲ್ಲಿ ಪರಿವರ್ತನೆ ತರುವ ವಕೀಲರು, ಸಾಮಾಜಿಕ ಇಂಜಿನಿಯರ್‌ಗಳಾಗಿದ್ದಾರೆ ಎಂದು ಹೈಕೋರ್ಟ್ ನ್ಯಾಯಮೂರ್ತಿಗಳಾದ ಹೆಚ್.ಪಿ. ಸಂದೇಶ್ ಅಭಿವ್ಯಕ್ತಪಡಿಸಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ವಕೀಲರ 10ನೇ ಸಮ್ಮೇಳದಲ್ಲಿ 'ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ' ಕುರಿತು ಮಾತನಾಡಿದ ಅವರು, ವಕೀಲರು ಕೋರ್ಟ್‌ನಲ್ಲಿ ವಾದ ಮಾಡುವುದಷ್ಟೇ ಅಲ್ಲ. ಸಮಾಜದಲ್ಲಿ ನಡೆಯುವ ಪ್ರತಿಯೊಂದು ಘಟನೆಗಳನ್ನು ತಿಳಿಯುವುದರ ಜೊತೆಗೆ ಸಾಮಾಜಿಕ ಪರಿವರ್ತನೆಗೆ ಕಾರಣರಾಗಿರುತ್ತಾರೆ. ಆದ್ದರಿಂದ ಅವರನ್ನು ಸಾಮಾಜಿಕ ಇಂಜಿಯರ್‌ಗಳೆಂದು ಕರೆಯುತ್ತೇನೆ ಎಂದರಲ್ಲದೆ ಸಮಾಜದಲ್ಲಾಗುವ ಬದಲಾವಣೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸುವುದು ವಕೀಲರ ಜವಾಬ್ದಾರಿಯಾಗಿರುತ್ತದೆ ಎಂದರು.

ವಕೀಲರು ಮುಖ್ಯವಾಗಿ ಸಮಾಜದಲ್ಲಿನ ಎಲ್ಲರಿಗೂ ಕಾನೂನು ಅರಿವು ಮೂಡಿಸುವ ಕೆಲಸ ಮಾಡಬೇಕು. ಇದಕ್ಕಾಗಿ ಸಂಘ–ಸಂಸ್ಥೆಗಳು, ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಕಾನೂನು ಉಪನ್ಯಾಸ ನೀಡಬೇಕು. ಹಾಗೆಯೇ ಸರ್ಕಾರ ಹೊಸದಾಗಿ ತರುವ ಕಾಯ್ದೆಗಳಲ್ಲಿ ವಕೀಲರ ಸಲಹೆ ಸೂಚನೆಗಳಿರಬೇಕು ಎಂದು ಅಭಿಪ್ರಾಯಪಟ್ಟರು.

ವಕೀಲರಲ್ಲಿ ಪ್ರಾಮಾಣಿಕತೆ ಮುಖ್ಯವಾಗಿದ್ದು, ತಮ್ಮ ಕಕ್ಷಿದಾರರಿಗೆ ವಂಚನೆ ಮಾಡಬಾರದು. ಆಕಸ್ಮಾತ್ ವಂಚನೆ ಮಾಡಿದರೆ ಅದು ತಮಗೆ ತಾವೇ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಆದ್ದರಿಂದ ಪ್ರಾಮಾಣಿಕರಾಗಿರುವುದು ಅತೀ ಮುಖ್ಯವಾಗಿದೆ. ಹಾಗೆಯೇ ಕಕ್ಷಿದಾರರಿಂದ ಶುಲ್ಕವನ್ನಷ್ಟೇ ಪಡೆಯದೆ ಅವರಿಗೂ ಕಾನೂನಿನ ಅರಿವು ಮೂಡಿಸಬೇಕು. ಸರಿಯಾದ ಮಾರ್ಗದರ್ಶನ ನೀಡಬೇಕು. ಕೆಲಸದಲ್ಲಿ ಚಾಕಚಕ್ಯತೆ ಇರಬೇಕು. ಗಂಟೆಗಟ್ಟಲೆ ಜಡ್ಜ್ ಮುಂದೆ ವಾದ ಮಾಡುವುದಕ್ಕಿಂತ ಜಡ್ಜ್‌ಗಳ ಮನಸ್ಥಿತಿ ಅರಿತು ಸೂಕ್ತವಾದ ವಿಚಾರ ತಿಳಿಸುವ ಚಾಕಚಕ್ಯತೆ ಹೊಂದಿರುವ ಜೊತೆಗೆ ಬುದ್ಧಿವಂತಿಕೆಯಿಂದ ಕೆಲಸದಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಉತ್ತಮ ವಾಕ್ಚಾತುರ್ಯ ಹೊಂದಿರಬೇಕು ಎಂದರು.

ಸುಳ್ಳು ಭರವಸೆ ನೀಡಬಾರದು: ವಕೀಲರು ತಮ್ಮ ಕಕ್ಷಿದಾರರಿಗೆ ಸುಳ್ಳು ಭರವಸೆಗಳನ್ನು ನೀಡಬಾರದು. ಕೇಸ್ ತೆಗೆದುಕೊಳ್ಳುವಾಗಲೇ ಜಡ್ಜ್‌ಮೆಂಟ್ ಏನಾಗುತ್ತದೆ ಎಂಬುದರ ಅರಿವಿನೊಂದಿಗೆ ಕೆಲಸ ಮಾಡಬೇಕು. ಕಕ್ಷಿದಾರರ ಪರ ತೀರ್ಪು ಕೊಡಿಸಲಾಗದಿದ್ದರೂ ಕೊಡಿಸುತ್ತೇವೆ ಎಂಬ ಸುಳ್ಳು ಭರವಸೆಗಳನ್ನು ನೀಡಬಾರದು. ಇದರಿಂದ ವಕೀಲ ವೃತ್ತಿಗೆ ಹಾಗೂ ಕಾನೂನು ವ್ಯವಸ್ಥೆಗೆ ಕೆಟ್ಟ ಹೆಸರು ಬರುತ್ತದೆ. ಅಲ್ಲದೆ ಕೇಸ್ ತೆಗೆದುಕೊಳ್ಳುವ ಮೊದಲೇ ಕಕ್ಷಿದಾರರಿಗೆ ವಾಸ್ತವಾಂಶವನ್ನು ತಿಳಿಸುವುದು ಸೂಕ್ತ ಎಂದು ನ್ಯಾ. ಸಂದೇಶ್ ಕಿವಿಮಾತು ಹೇಳಿದರು.

ಸಹಭಾಗಿತ್ವ, ಸತ್ಯ ಹುಡುಕಾಟ: ಕೋರ್ಟ್ ಅಂಗಳದಲ್ಲಿ ವಾದಿ–ಪ್ರತಿವಾದಿಗಳಾಗಿರುವವರು ಕೋರ್ಟ್‌ನಿಂದ ಹೊರಗೆ ಬಂದಾಗ ಸಹಭಾಗಿತ್ವದಿಂದ ಇರಬೇಕು. ಸೀನಿಯರ್ ಮತ್ತು ಜೂನಿಯರ್ ನಡುವೆ ಉತ್ತಮ ಬಾಂಧವ್ಯ ಹೊಂದಿರಬೇಕು. ವಕೀಲ ವೃತ್ತಿಯಲ್ಲಿ ಸದಾ ಸತ್ಯದ ಹುಡುಕಾಟದಲ್ಲಿರಬೇಕು. ನ್ಯಾಯಾಧೀಶರು ಯಾವ ವಿಚಾರವನ್ನು ಅಥವಾ ಯಾವ ಅಂಶವನ್ನು ಕೇಳುತ್ತಾರೆ ಎಂಬುದನ್ನರಿತು ಪೂರ್ವ ಸಿದ್ಧತೆ ಮಾಡಿಕೊಂಡಿದ್ದರೆ ಕಕ್ಷಿದಾರರಿಗೆ ನ್ಯಾಯ ದೊರಕಿಸಿ ಕೊಡಬಹುದಾಗಿದೆ ಎಂದು ಸಲಹೆ ನೀಡಿದರು.

ಆತ್ಮವಿಶ್ವಾಸ ತುಂಬಬೇಕು: ಹಿರಿಯ ವಕೀಲರು, ಕಿರಿಯ ವಕೀಲರಲ್ಲಿ ಆತ್ಮವಿಶ್ವಾಸ ತುಂಬಬೇಕು. ಸರಿಯಾದ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಬೇಕು. ಹಾಗೆಯೇ ಕಿರಿಯ ವಕೀಲರು ಕೂಡ ಕಲಿಕೆಯಲ್ಲಿ ಆಸಕ್ತಿ ಹೊಂದಿರಬೇಕು ಎಂದರಲ್ಲದೆ ಹಿರಿಯ ವಕೀಲರು ಈಗಾಗಲೇ ಆಸ್ತಿ ಮಾಡಿರುತ್ತೀರಿ. ಆದ್ದರಿಂದ ತಮ್ಮ ಬಳಿ ಕೆಲಸ ಮಾಡುವ ಜೂನಿಯರ್‌ಗಳಿಗೂ ಸ್ವಲ್ಪ ಹಣ ನೀಡಿ, ಅವರೂ ಆರ್ಥಿಕವಾಗಿ ಸದೃಢರಾಗಲು ಸಹಕರಿಸಿ ಎಂದ ನ್ಯಾಯಮೂರ್ತಿಗಳು, ಕೋಟಿ ಕೋಟಿ ಆಸ್ತಿ ಮಾಡಿದರೆ ಏನು ಪ್ರಯೋಜನ. ಸತ್ತಾಗ ಏನ್ ಹೊತ್ಕೊಂಡ್ ಹೋಗ್ತಿವಾ ಎಂದರು.

ವಕೀಲರು ಮುಖ್ಯವಾಗಿ ಅಧ್ಯಯನ ಮಾಡುವುದರ ಜೊತೆಗೆ ಸಮಯ ಪ್ರಜ್ಞೆ, ಶಿಸ್ತಿನ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಹಿರಿಯ ವಕೀಲರಿಗೆ ಗೌರವ ಕೊಡುವುದರ ಜೊತೆಗೆ ದಿನ 24 ಗಂಟೆಗಳನ್ನು ವ್ಯವಸ್ಥಿತವಾಗಿ ಬಜೆಟ್ ರೀತಿ ವಿಂಗಡಣೆ ಮಾಡಿಕೊಳ್ಳಬೇಕು. ದುಡಿಯುವುದರ ಜೊತೆ ಜೊತೆಗೆ ಸಮಾಜಕ್ಕೆ ಕೊಡುಗೆ ನೀಡಬೇಕು. ವಕೀಲರು ಸನ್ಯಾಸಿಯಂತೆ ಜೀವನ, ಕುದುರೆಯಂತೆ ಕೆಲಸ ಮಾಡಬೇಕು. ನ್ಯಾಯಕೊಡಿಸುವುದರಲ್ಲಿ ತಮ್ಮ ವೃತ್ತಿಯನ್ನು ಎಲ್ಲೆಡೆ ಪಸರಿಸಬೇಕು ಎನ್ನುತ್ತಾ ಸಮಾಜದಲ್ಲಿ ವಕೀಲರ ಪಾತ್ರವೇನು ಎಂಬುದನ್ನು ಮನದಟ್ಟು ಮಾಡಿಸಿದರು.

ವೃತ್ತಿಯ ಆಯಾಮ ಬದಲಾಗಿದೆ: ನಂತರ 'ವಕೀಲ ವೃತ್ತಿಯ ಹೊಸ ಆಯಾಮಗಳು' ಕುರಿತು ಮಾತನಾಡಿದ ಕರ್ನಾಟಕದ ಮಾಜಿ ಅಡ್ವೊಕೇಟ್ ಜನರಲ್ ಉದಯ್ ಹೊಳ್ಳ, ವಕೀಲ ವೃತ್ತಿಯಲ್ಲಾಗಿರುವ ಬದಲಾವಣೆ ಹಾಗೂ ಬೇರೆ ಬೇರೆ ದೇಶಗಳಲ್ಲಿನ ವಕೀಲ ವೃತ್ತಿಯ ಬಗ್ಗೆ ಮಾಹಿತಿ ನೀಡಿದರು.

ವೇದ ಓದಿದವರೆಲ್ಲಾ ದೊಡ್ಡವರಾಗಲ್ಲ...!

"ವೇದ ಮತ್ತು ಉಪನಿಷತ್ತು ಓದಿದವರೆಲ್ಲಾ ದೊಡ್ಡವರಾಗುವುದಿಲ್ಲ. ಜನರ ವೇದನೆಯನ್ನು ತಿಳಿದು ಅವರ ಕಷ್ಟಕ್ಕೆ ಸ್ಪಂದಿಸಿದರಷ್ಟೇ ದೊಡ್ಡವರಾಗುವುದು. ಎಲ್ಲಾ ನ್ಯಾಯಾಲಯಗಳಿಗಿಂತಲೂ ಇರುವ ದೊಡ್ಡ ನ್ಯಾಯಾಲಯವೆಂದರೆ ಆತ್ಮಸಾಕ್ಷಿ. ಆದ್ದರಿಂದ ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಿದರೆ ವೃತ್ತಿಯಲ್ಲಿ ಧೈರ್ಯ–ಸ್ಥೈರ್ಯ ತಾನಾಗಿಯೇ ಬರಲಿದೆ.

–ಹೆಚ್.ಪಿ.ಸಂದೇಶ್, ಹೈಕೋರ್ಟ್ ನ್ಯಾಯಮೂರ್ತಿ

ಭಾರತದ ಮುಡಿಗೆ ಏಷ್ಯನ್ ಚಾಂಪಿಯನ್ಸ್ ಹಾಕಿ ಕಿರೀಟ



ಚೆನ್ನೈ: ಮಲೇಷ್ಯಾ ತಂಡ ಒಡ್ಡಿದ ಸ್ಫೂರ್ತಿಯುತ ಸವಾಲನ್ನು ಬದಿಗೊತ್ತಿದ ಭಾರತ ತಂಡ, ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಕಿರೀಟ ಮುಡಿಗೇರಿಸಿಕೊಂಡಿತು. ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ಬಳಗ 4–3 ಗೋಲುಗಳಿಂದ ಗೆದ್ದಿತು.

ಜುಗ್‌ರಾಜ್ ಸಿಂಗ್ (9ನೇ ನಿ.), ಹರ್ಮನ್‌ಪ್ರೀತ್ ಸಿಂಗ್ (45ನೇ ನಿ.), ಗುರುಜಂತ್ ಸಿಂಗ್ (45ನೇ ನಿ.) ಮತ್ತು ಆಕಾಶ್‌ದೀಪ್ ಸಿಂಗ್ (56ನೇ ನಿ.) ಅವರು ಗೋಲು ಗಳಿಸಿ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮಲೇಷ್ಯಾ ತಂಡದ ಪರ ಅಬು ಕಮಲ್ ಅಝ್ರಾಯ್ (14ನೇ ನಿ.), ರಹೀಂ ರಝಿ (18ನೇ ನಿ.) ಹಾಗೂ ಮುಹಮ್ಮದ್ ಅಮೀನುದೀನ್ (28ನೇ ನಿ.) ಅವರು ಚೆಂಡನ್ನು ಗುರಿ ಸೇರಿಸಿದರು.

45ನೇ ನಿಮಿಷದವರೆಗೆ 1–3 ಗೋಲುಗಳಿಂದ ಹಿನ್ನಡೆಯಲ್ಲಿದ್ದ ಭಾರತ, ಕೊನೆಯಲ್ಲಿ ಅಮೋಘ ರೀತಿಯಲ್ಲಿ ಮರು ಹೋರಾಟ ನಡೆಸಿ ಗೆಲುವು ತನ್ನದಾಗಿಸಿಕೊಂಡಿತು. 4ನೇ ಸಲ ಪ್ರಶಸ್ತಿ ಗೆದ್ದ ಭಾರತ ಇಂದಿನ ಫೈನಲ್‌ನಲ್ಲಿ ಮಲೇಷಿಯಾ ವಿರುದ್ಧ 4–3 ಗೋಲುಗಳ ಅಂತರದಲ್ಲಿ ಜಯ ಗಳಿಸಿತು.

ಪಿಯುಸಿ ಪೂರಕ ಪರೀಕ್ಷೆ ಉಚಿತ ಬಸ್ ಪ್ರಯಾಣ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸಲಾಗಿದೆ. ಆ.21ರಿಂದ ಸೆ.2ರವರೆಗೆ ದ್ವಿತೀಯ ಪಿಯು 2ನೇ ಪೂರಕ ಪರೀಕ್ಷೆಗೆ ಹಾಜರಾಗುವವರು ಹಾಲ್ ಟಿಕೆಟ್ ತೋರಿಸಿ ತಮ್ಮ ವಾಸ ಸ್ಥಳದಿಂದ ಪರೀಕ್ಷಾ ಕೇಂದ್ರದವರೆಗೆ ಕೆಎಸ್ ಆರ್‌ಟಿಸಿ, ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಹೋಗಿಬರಬಹುದು. ಈ ಸಂಬಂಧ ಇನ್ನೂ ನಿರ್ದೇಶನ ಬಂದಿಲ್ಲ ಎಂದು ಮೈಸೂರು ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ವೇಳಾ ಪಟ್ಟಿ: ಆ.21ಕ್ಕೆ ಕನ್ನಡ, ಹಿಂದಿ, ಅರೇಬಿಕ್, ಆ.22 ಐಚ್ಛಿಕ ಕನ್ನಡ, ರಾಸಾಯನಶಾಸ್ತ್ರ, ಮೂಲಗಣಿತ, ಆ.23 ಸಮಾಜ ಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ, ಆ.24 ತರ್ಕಶಾಸ್ತ್ರ ಹಿಂದೂಸ್ತಾನಿ ಸಂಗೀತ, ವ್ಯವಹಾರ ಅಧ್ಯಯನ, ಆ.25 ಇತಿಹಾಸ, ಸಂಖ್ಯಾಶಾಸ್ತ್ರ, ಆ.26 ಇಂಗ್ಲಿಷ್, ಆ.28 ಭೂಗೋಳಶಾಸ್ತ್ರ, ಮನಃಶಾಸ್ತ್ರ, ಭೌತಶಾಸ್ತ್ರ, ಆ.29 ಭೂಗರ್ಭ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಗೃಹಶಾಸ್ತ್ರ, ಆ.30 ರಾಜ್ಯಶಾಸ್ತ್ರ, ಗಣಿತಶಾಸ್ತ್ರ, ಸೆ.1 ಅರ್ಥ ಶಾಸ್ತ್ರ, ಜೀವಶಾಸ್ತ್ರ ಪರೀಕ್ಷೆ ನಡೆಯಲಿದೆ.

ಸಂಗೀತಾಸಕ್ತರ ಮನಗೆದ್ದ ಸ್ವರಧಾರ ಸಂಗೀತ ರಸಸಂಜೆ



ಮೈಸೂರು,ಆ.12(ಎಂಕೆ)– ಮೈಸೂರು ಜಗನ್ಮೋಹನ ಅರಮನೆ ವೇದಿಕೆಯಲ್ಲಿ ಕನ್ನಡ, ಹಿಂದಿ ಚಲನಚಿತ್ರಗೀತೆಗಳ 'ಸ್ವರಧಾರ' ಸಂಗೀತ ರಸಸಂಜೆ ಕೇಳುಗರ ಮನಕೆ ಇಂಪು ನೀಡಿತು.

ಕವಿತಾ ಕಾಮತ್ ಅವರ ಗೀತ್ ಸಂಗಮ್ ತಂಡದಿಂದ ಏರ್ಪಡಿಸಿದ್ದ ಸ್ವರಧಾರ ಸಂಗೀತ ಸಂಜೆಯಲ್ಲಿ 20ಕ್ಕೂ ಹೆಚ್ಚು ಸುಮಧುರ ಕನ್ನಡ ಮತ್ತು ಹಿಂದಿ ಚಲನಚಿತ್ರ ಗೀತೆಗಳ ಗಾಯನ ಸಂಗೀತ ಪ್ರಿಯರ ಮನತಣಿಸಿತು.

ಗಾಯಕರಾದ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಸದಾಶಿವ ಶೆಣೈ, ಹೆಡತಲೆ ನಾರಾಯಣ್, ಡಾ.ಸುರೇಂದ್ರನ್, ಜಯಲಕ್ಷ್ಮಿ ನಾಯ್ಡು, ಬಿ.ಎಸ್. ಕುಮಾರಸ್ವಾಮಿ, ಎಂ.ಎಸ್.ಶಾರದಾಂಬ, ಡಾ.ರವೀಂದ್ರ ಕುಮಾರ್, ಡಾ.ಭರತ್‌ರಾಜ್ ಹಾಗೂ ಗೀತಾರಾವ್ ಸುಶ್ರಾವ್ಯವಾಗಿ ಹಾಡುವ ಮೂಲಕ ಎಲ್ಲರ ಮನಗೆದ್ದರು.

'ಸತಿ ಸುಕನ್ಯಾ' ಚಿತ್ರದ 'ಮಧುರ ಮಧುರವಿ ಮಂಜುಳಗಾನ', 'ಕೃಷ್ಣ ರುಕ್ಮಿಣಿ' ಚಿತ್ರದ 'ಕರ್ನಾಟಕದ ಇತಿಹಾಸದಲ್ಲಿ' ಚೋರ್ ಮಚಾಯೆಶೋರ್ ಹಿಂದಿ ಚಿತ್ರದ ಗುಂಗುರುಕೀ ತರಹ', 'ಗಿರಿಕನ್ಯೆ' ಚಿತ್ರದ 'ಥೈ ಥೈ ಥೈ ಬಂಗಾರಿ', 'ಯಾರಿವನು' ಚಿತ್ರದ 'ಕಾವೇರಿ ಏಕೆ ಓಡುವೆ', 'ನಾನಿರುವುದೇ ನಿನಗಾಗಿ' ಚಿತ್ರದ 'ಒಲವಿನ ಗೆಳೆಯನೆ', 'ಮಹಾಕ್ಷತ್ರಿಯ' ಚಿತ್ರದ 'ಈ ಭೂಮಿ ಬಣ್ಣದ ಬುಗುರಿ', 'ಬಂಗಾರದ ಮನುಷ್ಯ' ಚಿತ್ರದ 'ಬಾಳ ಬಂಗಾರ ನೀನು', 'ಪ್ರೇಮಾನುಬಂಧ' ಚಿತ್ರದ 'ಬೆಳದಿಂಗಳೊಂದು' 'ರಾಣಿರೂಪಮತಿ' ಹಿಂದಿ ಚಿತ್ರದ ಆ ಲೌಟ್‌ಕೇ ಆಜಾಮೆರೆಮೀತ್', 'ಚೂರಿ ಚಿಕ್ಕಣ್ಣ' ಚಿತ್ರದ 'ಮೆಲ್ಲಗೆ ನಡೆ ಮೆಲ್ಲಗೆ' ಹಾಡು ಸೇರಿದಂತೆ 20 ಕ್ಕೂ ಹೆಚ್ಚು ಹಾಡುಗಳನ್ನು ಹಾಡಿ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಮನಸ್ಸಿನ ದುಃಖ ಕಡಿಮೆಯಾಗುತ್ತದೆ: 'ಸ್ವರಧಾರ' ಸಂಗೀತ ರಸಸಂಜೆ ಕಾರ್ಯಕ್ರಮ ಉದ್ಘಾಟಿಸಿದ ಉದ್ಯಮಿ ಜಗನ್ನಾಥ್ ಶೆಣೈ ಮಾತನಾಡಿ, ಸಂಗೀತ ಕೇಳುವುದರಿಂದ ಮನಸ್ಸಿನಲ್ಲಿನ ದುಃಖ, ಚಿಂತೆ ಎಲ್ಲವೂ ಕಡಿಮೆಯಾಗುತ್ತದೆ. ದಿನವಿಡೀ ಕೆಲಸ ಮಾಡಿ ಒತ್ತಡದಲ್ಲಿರುವವರಿಗೆ ಸಂಗೀತ ಚಿಕಿತ್ಸೆಯ ರೂಪದಲ್ಲಿ ಅವರ ಆರೋಗ್ಯ ಕಾಪಾಡುವ ಕೆಲಸ ಮಾಡುತ್ತದೆ ಎಂದರಲ್ಲದೆ 'ಸ್ವರಧಾರ' ಸಂಸ್ಥೆಯನ್ನು ಕಲಾ ಪೋಷಕರು ಹಾಗೂ ಕಲಾಭಿಮಾನಿಗಳು ಪ್ರೋತ್ಸಾಹಿಸುವಂತೆ ಕೋರಿದರು.

ವಾರಭವಿಷ್ಯ



13.8.2023 ರಿಂದ 19.8.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಸಿಂಹ, ಚಂದ್ರ–ಮಿಥುನ, ಕಟಕ, ಸಿಂಹ, ಕನ್ಯಾ, ಕುಜ–ಸಿಂಹ, ಬುಧ–ಸಿಂಹ, ಗುರು–ಮೇಷ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಉದ್ಯೋಗಿಗಳು ಹಿರಿಯ ಅಧಿಕಾರಿಗಳೊಂದಿಗಿನ ವಿವಾದಗಳನ್ನು ಬಗೆಹರಿಸಿಕೊಳ್ಳುತ್ತೀರಿ ಪ್ರತಿಷ್ಠಿತ ವ್ಯಕ್ತಿಗಳ ಜೊತೆ ಸಂಪರ್ಕ ಹೆಚ್ಚುವುದು. ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು. ವರಮಾನಕ್ಕಿಂತ ಖರ್ಚುಗಳು ಜಾಸ್ತಿ. ವ್ಯವಹಾರಗಳಿಗೆ ಸಕಾಲದಲ್ಲಿ ಸಾಲ ದೊರಕದೆ ಬೇಸರ. ಜನ್ಮಸ್ಥ ರಾಹು ಸಮಾಜ ವಿರೋಧಿ ಕೆಲಸಗಳಿಗೆ ಪ್ರೇರಣೆ ನೀಡುವನು. ಸಣ್ಣಪುಟ್ಟ ಅನಾರೋಗ್ಯ ಕಾಡುವುದು.
ಶ್ರೀ ಸುಬ್ರಹ್ಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಮನೆಯ ಹೊರಗೆ ನಿಮ್ಮದೇ ಮೇಲುಗೈ ಸಾಧಿಸುತ್ತೀರಿ. ಹೊಸ ಹೂಡಿಕೆಗಳನ್ನು ತುಂಬಾ ಎಚ್ಚರಿಕೆಯಿಂದ ಮಾಡಿ. ಮನೆಗೆ ಬರುವ ಅತಿಥಿಗಳೊಂದಿಗೆ ಭೋಜನ ಮತ್ತು ಮನೋರಂಜನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತೀರಿ. ವಾರ ಮಧ್ಯೆ ಕೈಗೊಂಡ ಕಾರ್ಯಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಅವಕಾಶಗಳು ದೊರೆಯುತ್ತವೆ.
ಶ್ರೀದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ' ಎಂಬಂತೆ ಎಲ್ಲವೂ ಸಾಗಿದೆ. ತಾಳ್ಮೆಯಿಂದ ವೈಯಕ್ತಿಕ ಹಾಗೂ ಸಾಮಾಜಿಕ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಐಹಿಕ, ಸುಖಭೋಗಗಳು ನಿಮ್ಮನ್ನು ಅರಸಿ ಬರುವುದು. ನಿಮ್ಮ ಪ್ರತಿಜ್ಞೆಯನ್ನು ಪಾಲನೆ ಮಾಡಿ. ಮೆಚ್ಚುಗೆಗೆ ಪಾತ್ರರಾಗುವಿರಿ. ಮನೆಯಲ್ಲಿ ಪ್ರೀತಿ ವಾತ್ಸಲ್ಯದಿಂದ ಸಮಯ ಸಾಗುವುದು. ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ–5.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡು' ಎಂಬ ದಾಸರ ಪದದಂತೆ ಮುಂದೆ ಸಾಗಿ, ನಿರ್ದಿಷ್ಟ ಸಮಯಕ್ಕೆ ಹಣ ಕೈಗೆ ಬರುತ್ತದೆ. ಸುಖಲೋಲುಪ್ತತೆಯಲ್ಲೇ ಕಾಲಹರಣ ಮಾಡಬೇಡಿ. ನಂಬಲರ್ಹರಲ್ಲದವರೊಡನೆ ವ್ಯವಹರಿಸಬೇಡಿ. ಅಷ್ಟಮ ಶನಿ ಇರುವ ಕಾರಣ ದುರ್ಘಟನೆ ಸ್ಥಳ, ವೇಳೆ ಹೇಳದೆ ಜರುಗಿಬಿಡುತ್ತದೆ. ಅಪಚನದಿಂದ ಆರೋಗ್ಯದಲ್ಲಿ ವ್ಯತ್ಯಯ.
ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ–9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಈ ವಾರವೆಲ್ಲಾ ಗುರುಬಲದ ಜೊತೆಗೆ ಚಂದ್ರ ಸಂಚಾರವೂ ಚೆನ್ನಾಗಿದೆ. ಕಾಲ, ಕರ್ಮ, ಕಾರಣಗಳು ಕೂಡಿ ಬಂದಾಗ ಅಲಭ್ಯ ಯೋಗಗಳು ಘಟಿಸುತ್ತವೆ. ಹೊಸ ಯೋಜನೆಗಳನ್ನು ಪ್ರಾರಂಭಿಸಲು ಸಮಯ ಶುಭವಿದೆ. ಪೂರ್ವ ತಯಾರಿಯನ್ನು ಮಾಡಬಹುದು. ಸುದ್ದಿ ಸಂಚಾಲಕರಿಗೆ ಸರ್ಕಾರದಿಂದ ಪ್ರಶಸ್ತಿ, ಮನ್ನಣೆಗಳು ದೊರಕಬಹುದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–8.

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)
ನಿಮ್ಮ ಅದ್ಭುತ ಕ್ರಿಯಾಶಕ್ತಿ ಗುರುಬಲದ ಕೊರತೆಯಿಂದ ಮನೋವಿಕಾರಗಳಿಂದಾಗಿ ಸಾಧನೆಗೆ ಅಡ್ಡಿಯಾಗುತ್ತದೆ. ಶಿಕ್ಷಣಾರ್ಥಿಗಳಿಗೆ ವಿದ್ಯೆಯಲ್ಲಿ ಕುಂಠಿತವಾಗುತ್ತದೆ. ವಾರಮಧ್ಯಾನಂತರ ವ್ಯಾವಹಾರಿಕವಾಗಿ ಉಂಟಾಗಿದ್ದ ಎಡರು–ತೊಡರುಗಳು ನಿವಾರಣೆ ಆಗುತ್ತದೆ. ಭೂ ಸಂಪತ್ತು ಗಳಿಸುವ ಅವಕಾಶವಿದೆ. ಖಯಾಲಿ ಪ್ರವಾಸಗಳು ಸಂಕಷ್ಟಕ್ಕೆ ಗುರಿ ಮಾಡುವುದು. ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ ಎಂಬಂತೆ ಗೃಹ ನಿರ್ಮಾಣ ಕಾರ್ಯಗಳಿಗೆ ಬ್ಯಾಂಕ್ ಸಾಲದ ಪ್ರಯತ್ನ ಸಫಲವಾಗುವುದು. ಸಣ್ಣಪುಟ್ಟ ಅಡೆತಡೆಗಳು ಎದುರಾದರೂ ಪರಿಶ್ರಮದಿಂದ ಜಯಿಸುತ್ತೀರಿ. ವ್ಯಾಪಾರಿಗಳಿಗೆ ಸಾಮಾನ್ಯವಾದ ಲಾಭ. ಕುಟುಂಬ ಸದಸ್ಯರೊಂದಿಗೆ ಶುಭ ಕಾರ್ಯಗಳಲ್ಲಿ ಭಾಗವಹಿಸುವಿರಿ. ಹಿಂದೆ ಮಾಡಿದ್ದ ಹೂಡಿಕೆಗಳು ಈಗ ಲಾಭಪ್ರದವಾಗಲಿದೆ. ನಿಃಶಕ್ತಿ ಕಾಡಿಸುತ್ತದೆ.
ಶ್ರೀದೇವೀ ಉಪಾಸನೆ. ಶುಭ ಸಂಖ್ಯೆ–7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ
ನಿಮ್ಮ ಗುಪ್ತ ವಿಚಾರಗಳು ಸಾರ್ವಜನಿಕವಾಗುವುದರಿಂದ ನಿಮ್ಮ ಸ್ವಾಭಿಮಾನಕ್ಕೆ ಧಕ್ಕೆ ಆಗುವುದು. ಶತ್ರು ಜನರು ಮೇಲುಗೈ ಸಾಧಿಸುವರು. ಪ್ರಯಾಣದಲ್ಲಿ ಅಡಚಣೆಗಳು ಉಂಟಾಗುವುದು. ವಾರ ಮಧ್ಯೆ ಸುಖ, ಸಂತೋಷಗಳು, ಭೂಮಿ, ಸೈಟು ವಿಚಾರಗಳು ನಿಮ್ಮ ಪರ ಇರುವುದು. ಸುಖ ಸಂತೋಷ ಬಯಸುವಿರಾದರೆ ಅಡ್ಡ ಮಾರ್ಗಗಳನ್ನು ಹಿಡಿಯಬೇಡಿ. ಮಕ್ಕಳ ಚಲನವಲನದ ಮೇಲೆ ನಿಗಾ ಇಡಿ.
ಶ್ರೀ ನೃಸಿಂಹ ದರ್ಶನ. ಶುಭ ಸಂಖ್ಯೆ–4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಆಪ್ತರ ಜೊತೆಗಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಪ್ರತಿಸ್ಪರ್ಧಿಗಳು ಹಿಂದೆ ಸರಿಯುವರು. ಉದ್ಯೋಗದಲ್ಲಿನ ಸಮಸ್ಯೆಗಳು ಬರೆಹರಿಯುತ್ತವೆ. ಗೃಹ ನಿರ್ಮಾಣ ಪ್ರಯತ್ನಗಳು ಸಕಾರಾತ್ಮಕವಾಗಿ ಸಾಗುವುದು. ವಾರ ಮಧ್ಯೆ ಆಸ್ತಿ ವಿವಾದಗಳಿಂದ ಮಾನಸಿಕ ಕಿರಿಕಿರಿ. ಪ್ರಯಾಣ ಕಾಲದಲ್ಲಿ ಎಚ್ಚರಿಕೆ ಇರಲಿ. ಶ್ರೀ ದತ್ತಾತ್ರೇಯ ಸ್ತುತಿ. ಶುಭ ಸಂಖ್ಯೆ–9.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ಜೀವನದ ಪ್ರಮುಖ ವಿಷಯಗಳಿಗೆ ಪ್ರಮುಖ ವ್ಯಕ್ತಿಗಳಿಂದ ಮಹತ್ವದ ಸಲಹೆ ದೊರೆಯುತ್ತದೆ. ಹಠಾತ್ ಧನಲಾಭ ಹೊಂದುವ ಅವಕಾಶವಿದೆ. ಕೆಲವು ಕ್ಷೇತ್ರಗಳಲ್ಲಿ ಕೈಗೊಳ್ಳುವ ಕೆಲಸಗಳಲ್ಲಿ ಅಡೆತಡೆಗಳು ಉಂಟಾಗಲು ಸಾಡೇಸಾತ್ ಶನಿಯೇ ಕಾರಣ. ವಿವಾಹ ವಿಚಾರಗಳು ಮುಂದೂಡಲ್ಪಡುತ್ತವೆ. ಜಲಾಶಯ, ಜಲಪಾತಗಳ ಹತ್ತಿರ ಹುಡುಗಾಟ ಕೂಡದು. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
'ಪ್ರಯತ್ನ ಪುರುಷಾಧೀನ, ಫಲ ದೈವಾಧೀನ' ಕೆಲವು ವ್ಯವಹಾರಗಳಲ್ಲಿ ಸ್ವಂತ ವಿಚಾರಗಳು ಅಷ್ಟಾಗಿ ಕೂಡಿ ಬರುವುದಿಲ್ಲ. ಸಹೋದರರೊಂದಿಗೆ ಭಿನ್ನಾಭಿಪ್ರಾಯಗಳು ಅಂತ್ಯ ಕಾಣದೆ ಮನಸ್ಸಿಗೆ ಬೇಸರ. ಆಫೀಸಿನ ಜವಾಬ್ದಾರಿಗಳು ಉಸಿರುಗಟ್ಟಿಸುತ್ತವೆ. ಸಣ್ಣ ಕೈಗಾರಿಕೆದಾರರಿಗೆ ನಿರೀಕ್ಷೆಗೂ ಮೀರಿ ಧನಲಾಭವಾಗುವುದು. ವಾಯು, ಕಫ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸ್ಥಿರಾಸ್ತಿಗೆ ಸಂಬಂಧಿಸಿದ ಒಪ್ಪಂದಗಳು ಧನಾತ್ಮಕವಾಗಿರುತ್ತದೆ. ಯಾವುದೇ ಕೆಲಸ ಕೈಗೆತ್ತಿಕೊಂಡರೂ ಯಶಸ್ವಿಯಾಗಿ ಪೂರ್ಣಗೊಳಿಸಿಕೊಳ್ಳಲು ಗುರುಗ್ರಹದ ಅನುಗ್ರಹವಿದೆ. ಬಂಧುಗಳಿಂದ ಶುಭ ಕಾರ್ಯಕ್ಕೆ ಆಹ್ವಾನಗಳು ಬರುತ್ತವೆ. ಹಣಕಾಸಿನ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಆಗುವುದು. ಸರ್ಕಾರಿ ಅಧಿಕಾರಿಗಳೊಂದಿಗೆ ಜಟಾಪಟಿ ನಿಮಗೇ ನಷ್ಟವನ್ನು ತರುವುದು. ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–1.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಭಾನುವಾರ 13 ಆಗಸ್ಟ್ 2023

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಬೃಂದಾವನ ಬಡಾವಣೆ, ಸಾಯಿ ಓಂ ಅಪಾರ್ಟ್‌ಮೆಂಟ್, ನಂ. 24 ಎಫ್–2 ರಲ್ಲಿ ವಾಸವಾಗಿರುವ ಮುಕ್ತೇಶ್ ಕೆ.ಜಿ. ರವರ ಧರ್ಮಪತ್ನಿಯಾದ ಶ್ರೀಮತಿ ಮಮತ ಕರಣಂ ರವರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಟೌನ್, ಗಂಜಾಂ, ಖುರಾದ್ ಬೀದಿಯಲ್ಲಿರುವ ಮನೆಯಲ್ಲಿ ವಾಸವಾಗಿರುವ ಆಶಾ ಕೋಂ ಲೇಟ್ ನಾಗೇಶ್, ಮನೋಹರ್ ಎನ್., ಬಿನ್ ಲೇಟ್ ನಾಗೇಶ್ ಹಾಗೂ ಮಾನಸ ಎನ್., ಬಿನ್ ಲೇಟ್ ನಾಗೇಶ್ ರವರುಗಳಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ, ಈ ಸಂಬಂಧವಾಗಿ ನಮ್ಮ ಕಕ್ಷಿದಾರರು ದಿನಾಂಕ 16–07–2021 ರಂದು ನೋಂದಾಯಿತ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಆದ್ದರಿಂದ, ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಂಟೆ ತಕರಾರುಗಳು ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಈ ದಿನದಿಂದ ಏಳು (07) ದಿನಗಳ ಒಳಗಾಗಿ ನಮ್ಮ ಕಕ್ಷಿದಾರರ ವಕೀಲರ ಕಛೇರಿಯ ವಿಳಾಸದಲ್ಲಿ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮೇಳಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 129/4 ತರಿ ವಿಸ್ತೀರ್ಣ 1 ಎಕರೆ 30 ಗುಂಟೆ ಜಮೀನಿಗೆ ಚಕ್ಕುಬಂದಿ:

ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಲಕ್ಷ್ಮೀಗೌಡರವರ ಜಮೀನು ; ಉತ್ತರಕ್ಕೆ: ಮರಿಸಿದ್ದಯ್ಯ ರವರ ಜಮೀನು ; ದಕ್ಷಿಣಕ್ಕೆ: ಕರಿಯಪ್ಪ ರವರ ಜಮೀನು.

Sd/- Ningappa M., Advocate
No. 1, 2nd Floor, 2nd Main,
3rd Cross, New Ramamandira
Temple Building, Jayanagar,
Mysuru-570 014.
Mob: 9945236899

ಸ್ಥಳ: ಮೈಸೂರು

ಹಣಕಾಸು ವ್ಯವಹಾರ ವೈಷಮ್ಯ: ಮಿತ್ರನನ್ನೇ ಮುಗಿಸಲು ಸುಪಾರಿ

ಮದ್ದೂರು ಹೊಳೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಕೂದಲೆಳೆ ಅಂತರದಲ್ಲಿ ಪಾರಾದ ಜೆಡಿಎಸ್ ನಾಯಕ

● ಲಾಂಗ್, ಡ್ರ್ಯಾಗರ್‌ನಿಂದ ದಾಳಿ ನಡೆಸಿದ ಆರು ಮಂದಿ ದುಷ್ಕರ್ಮಿಗಳು ● ಪೊಲೀಸ್ ಪೇದೆಯ ಸಮಯಪ್ರಜ್ಞೆಯಿಂದ ಪಾರಾದ ಅಪ್ಪು ಗೌಡ; ಸಣ್ಣಪುಟ್ಟ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ● ಘಟನೆ ನಡೆದ ಕೆಲವೇ ಗಂಟೆಯಲ್ಲಿ ದಾಳಿ ನಡೆಸಿದವರು, ಸುಪಾರಿ ಕೊಟ್ಟವನ ಸೆರೆ


ಮದ್ದೂರು, ಆ. 12– ಮದ್ದೂರಿನ ಹೊಳೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಜೆಡಿಎಸ್ ಮುಖಂಡ ಅಪ್ಪು ಪಿ.ಗೌಡರ ಮೇಲೆ ದುಷ್ಕರ್ಮಿಗಳ ಗುಂಪೊಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆಗೆ ಯತ್ನಿಸಿದ್ದು, ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಪೊಲೀಸರು ಹತ್ಯೆಗೆ ಯತ್ನಿಸಿದ ಆರು ಮಂದಿ ಜೊತೆಗೆ ಅಪ್ಪು ಪಿ.ಗೌಡ ಹತ್ಯೆಗೆ ಸುಪಾರಿ ನೀಡಿದ್ದ ಆತನ ಸ್ನೇಹಿತನನ್ನು ಬಂಧಿಸಿದ್ದಾರೆ.

ಮಾರಣಾಂತಿಕ ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿರುವ ಅಪ್ಪು ಗೌಡರಿಗೆ ಮಂಡ್ಯ ಮಿಮ್ಸ್ ಆಸ್ಪತ್ರೆ ಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪ್ಪು ಪಿ.ಗೌಡರ ವ್ಯವಹಾರಗಳಲ್ಲಿ ಈ ಹಿಂದೆ ಪಾಲುದಾರನಾಗಿದ್ದ ಮದ್ದೂರು ತಾಲೂಕು ಕೋಣ ಸಾಲೆ ಗ್ರಾಮದ ಮಧು, ಬೆಂಗಳೂರು ಹಾಗೂ ತುಮಕೂರಿನವರಾದ ಮನು ಅಲಿಯಾಸ್ ಹುಲಿ(24), ಮನೋಜ್ ಅಲಿಯಾಸ್ ಮಂಡೇಲಾ (25), ಮನೋಜ್ ಅಲಿಯಾಸ್ ಪಾಪಣ್ಣಿ(28), ಬೆಂಗಳೂರಿನ ಲಗ್ಗೆರೆ ನಿವಾಸಿ ಅಜಯ್ ಅಲಿಯಾಸ್ ಕ್ಯಾಟ್(25), ಬೆಸಗರ ಹಳ್ಳಿಯ ಅನಿಲ್ ಅಲಿಯಾಸ್ ತುಪಾಕಿ(30) ಮತ್ತು ನಂಜನಗೂಡಿನ ನಿಶ್ಚಿತ್ ಅಲಿಯಾಸ್ ಮಲ್ಲಿ(25) ಬಂಧಿತ ಆರೋಪಿಗಳು. ಇವರಲ್ಲಿ ತುಮಕೂರು ಮೂಲದ ಮೂವರೂ ದುಷ್ಕರ್ಮಿಗಳು ಕೊಲೆ ಹಾಗೂ ಕೊಲೆ ಯತ್ನ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಕೆಲ ಠಾಣೆಗಳಲ್ಲಿ ಕೇಸ್‌ಗಳು ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿವರ: ರಿಯಲ್ ಎಸ್ಟೇಟ್ ಉದ್ಯಮಿಯೂ ಆದ ಜೆಡಿಎಸ್ ಮುಖಂಡ ಅಪ್ಪು ಪಿ.ಗೌಡ ಇಂದು ಬೆಳಗ್ಗೆ 9 ಗಂಟೆ ಸುಮಾರಿಗೆ ಹೊಳೆ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಆಗಮಿಸಿ ಆವರಣದಲ್ಲಿ ನಿಂತು ದೇವರಿಗೆ ಕೈ ಮುಗಿಯುತ್ತಿದ್ದ ವೇಳೆ ಆರು ಮಂದಿಯ ದುಷ್ಕರ್ಮಿಗಳ ತಂಡ ಅವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಗೆ ಮುಂದಾಗಿದೆ. ಈ ಸಂದರ್ಭದಲ್ಲಿ ದೇವಸ್ಥಾನದಲ್ಲಿದ್ದ ಕಾನ್‌ಸ್ಟೇಬಲ್ ಕುಮಾರಸ್ವಾಮಿ ಇದನ್ನು ಗಮನಿಸಿ ದುಷ್ಕರ್ಮಿಗಳ ಮೇಲೆ ಹೂವಿನ ಕುಂಡವನ್ನು ಎಸೆದು ಅಪ್ಪುವನ್ನು ರಕ್ಷಿಸಲು ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ಅಪ್ಪು ತಪ್ಪಿಸಿಕೊಂಡು ತನ್ನ ಕಾರಿನತ್ತ ಓಡುತ್ತಿದ್ದ ವೇಳೆ ಆ ಮಾರ್ಗದಲ್ಲೇ ನಿಂತಿದ್ದ ಇಬ್ಬರು ದುಷ್ಕರ್ಮಿಗಳು ಅವರ ಮೇಲೆ ಡ್ರ್ಯಾಗರ್ ಹಾಗೂ ಲಾಂಗ್‌ನಿಂದ ದಾಳಿ ಮಾಡಿದ್ದಾರೆ. ಈ ವೇಳೆ ದೇವಸ್ಥಾನದಿಂದ ಭಕ್ತರು ಕೂಗಾಡುತ್ತಾ ಅವರತ್ತ ಓಡಿ ಬಂದಾಗ ದುಷ್ಕರ್ಮಿಗಳು ತಾವು ಬಂದಿದ್ದ ಟಾಟಾ ಸುಮೋ ಹತ್ತಿ ಪರಾರಿಯಾಗಿದ್ದಾರೆ.


ಮಧು


ಮನು


ಮನೋಜ್


ಪಾಪಣ್ಣಿ


ಅಜಯ್


ಅನಿಲ್


ನಿಶ್ಚಿತ್


ಹಲ್ಲೆಗೊಳಗಾದ ಅಪ್ಪು ಪಿ.ಗೌಡ

ಕಾನ್‌ಸ್ಟೇಬಲ್ ಕುಮಾರಸ್ವಾಮಿ ಬೈಕ್‌ನಲ್ಲಿ ದುಷ್ಕರ್ಮಿಗಳ ಟಾಟಾ ಸುಮೋ ಬೆನ್ನತ್ತಿದ್ದಲ್ಲದೇ, ಕಂಟ್ರೋಲ್ ರೂಂಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಕಾರ್ಯಾಚರಣೆ ಗಿಳಿದ ಪೊಲೀಸರು ಟಾಟಾ ಸುಮೋ ಹಲಗೂರು ಮಾರ್ಗವಾಗಿ ತೆರಳಿದ್ದರಿಂದ ಅಲ್ಲಿನ ಪೊಲೀಸರಿಗೂ ಮಾಹಿತಿ ನೀಡಿ ಸುಮೋವನ್ನು ಬೆನ್ನತ್ತಿದ್ದಾರೆ. ಕೊನೆಗೆ ಹಲಗೂರು ಸಮೀಪ ಅಲ್ಲಿನ ಪೊಲೀಸರ ಸಹಕಾರದೊಂದಿಗೆ ಟಾಟಾ ಸುಮೋ ಮತ್ತು ಅದರಲ್ಲಿದ್ದ ಆರು ಮಂದಿ ದುಷ್ಕರ್ಮಿಗಳನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆಗೊಳಪಡಿಸಿದಾಗ, ಹಾಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ರೌಡಿ ಜಗದೀಶ್ ಎಂಬಾತನ ಮೂಲಕ ಅಪ್ಪು ಪಿ. ಗೌಡರ ಹತ್ಯೆಗೆ ಮಧು ಸುಪಾರಿ ನೀಡಿದ್ದ ಎಂಬುದು ತಿಳಿಯು ತ್ತಿದ್ದಂತೆಯೇ ಆತನನ್ನೂ ಕೂಡ ಬಂಧಿಸಿದ್ದಾರೆ.

ಹಿನ್ನೆಲೆ: ಅಪ್ಪು ಪಿ.ಗೌಡ ಮತ್ತು ಮಧು ಹಲವಾರು ವರ್ಷಗಳಿಂದ ಒಟ್ಟಿಗೇ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಇತ್ತೀಚೆಗೆ ಮಹಿಳೆಯೊಬ್ಬರಿಗೆ ಸೇರಿದ ನಿವೇಶನಕ್ಕೆ ಸಂಬಂಧಪಟ್ಟಂತೆ ಇವರಿಬ್ಬರ ಮಧ್ಯೆ ವೈಷಮ್ಯ ಉಂಟಾಗಿದೆ. ಕೆಲ ದಿನಗಳ ಹಿಂದೆ ಮಧುವಿನ ತಾಯಿ ಮತ್ತು ಪತ್ನಿಯ ವಿರುದ್ಧ ಅಪ್ಪು ಪಿ. ಗೌಡ ಚೆಕ್ ಬೌನ್ಸ್ ಕೇಸ್ ಹಾಕಿದ್ದರು ಎಂದು ಹೇಳಲಾಗಿದ್ದು ಇದರಿಂದ ಕೆರಳಿದ ಮಧು, ಹೇಗಾದರೂ ಮಾಡಿ ಅಪ್ಪುಗೌಡನನ್ನು ಮುಗಿಸಲು ಸಂಚು ರೂಪಿಸಿದ್ದಾನೆ. ಬಿಬಿಎಂಪಿ ಮಾಜಿ ಕಾರ್ಪೊರೇಟರ್ ಹತ್ಯೆ ಪ್ರಕರಣದಲ್ಲಿ ಜೈಲು ಸೇರಿರುವ ರೌಡಿಶೀಟರ್ ಜಗದೀಶ್‌ನನ್ನು ಸಂಪರ್ಕಿಸಿದ್ದ ಮಧು, ಅಪ್ಪು ಹತ್ಯೆಗೆ ಸುಪಾರಿ ನೀಡಿದ್ದಾನೆ. ಜೈಲಿನಲ್ಲೇ ಕುಳಿತು ಸ್ಕೆಚ್ ಹಾಕಿದ್ದ ಜಗದೀಶ್, ತನ್ನ ಸಹಚರರ ಮೂಲಕ ಅಪ್ಪು ಹತ್ಯೆಗೆ ಮುಂದಾಗಿದ್ದಾನೆ.

ಪ್ರತಿ ಮಂಗಳವಾರ ಮತ್ತು ಶನಿವಾರ ಅಪ್ಪು ಪಿ. ಗೌಡ ಮದ್ದೂರಿನ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನ ಮತ್ತು ಮದ್ದೂರಮ್ಮನ ದೇವಸ್ಥಾನಕ್ಕೆ ಹೋಗುವುದು ವಾಡಿಕೆಯಾಗಿಟ್ಟುಕೊಂಡಿದ್ದ. ಅಪ್ಪುವಿಗೆ ಈ ಹಿಂದೆ ಸ್ನೇಹಿತನಾಗಿದ್ದು, ಅವರ ಚಲನವಲನದ ಬಗ್ಗೆ ಸಂಪೂರ್ಣ ಮಾಹಿತಿ ಅರಿತಿದ್ದ ಮಧು, ಈ ವಿಚಾರವನ್ನು ಜಗದೀಶ್ ಕಳುಹಿಸಿದ್ದ ದುಷ್ಕರ್ಮಿಗಳಿಗೆ ತಿಳಿಸಿದ್ದನಲ್ಲದೇ ಅಪ್ಪುವನ್ನು ತೋರಿಸಿ ಅವರು ಸಂಚರಿಸುವ ಕಾರಿನ ಬಗ್ಗೆಯೂ ಸಮಗ್ರ ಮಾಹಿತಿ ನೀಡಿದ್ದ ಎನ್ನಲಾಗಿದೆ. ಕೆಲ ದಿನಗಳ ಹಿಂದೆ ಮದ್ದೂ ರಮ್ಮನ ದೇವಸ್ಥಾನದ ಬಳಿ ಅಪ್ಪು ಗೌಡನನ್ನು ಹತ್ಯೆ ಮಾಡಲು ದುಷ್ಕರ್ಮಿಗಳು ಪ್ರಯತ್ನಿಸಿದ್ದರೆಂದು ಹೇಳಲಾಗಿದ್ದು, ಆಗ ದೇವಸ್ಥಾನದ ಬಳಿ ಜನಜಂಗುಳಿ ಹೆಚ್ಚಾಗಿದ್ದ ಕಾರಣ ಹಿಂತಿರುಗಿದ್ದಾರೆ.

ಟಾಟಾ ಸುಮೋದಲ್ಲಿ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಗೆ ಬೆಳಗ್ಗೆ 8.25ಕ್ಕೆ ಬಂದ ಆರು ಮಂದಿ ದುಷ್ಕರ್ಮಿಗಳು ದೇವಸ್ಥಾನ ಸಮೀಪವಿರುವ ಅಂಗಡಿಯೊಂದರ ಬಳಿ ಸುಮೋ ನಿಲ್ಲಿಸಿಕೊಂಡು ಟೀ ಕುಡಿದಿದ್ದಾರೆ. ಸುಮಾರು 20 ನಿಮಿಷ ಕಾದಿದ್ದ ಅವರು, ಅಪ್ಪು ಗೌಡರ ಕಾರು ದೇವಸ್ಥಾನದ ಆವರಣ ಪ್ರವೇಶಿಸುತ್ತಿದ್ದಂತೆಯೇ ಅಲರ್ಟ್ ಆಗಿ ಅತ್ತ ತೆರಳಿದ್ದಾರೆ. ಈ ದೃಶ್ಯಾವಳಿಗಳು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿವೆ.

ಅಪ್ಪು ಗೌಡರ ಹಿನ್ನೆಲೆ: ಮದ್ಯ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿಯಾಗಿರುವ ಅಪ್ಪು ಗೌಡರು ಶ್ರೀರಾಮುಲು ಅವರ ಬಿಎಸ್‌ಆರ್ ಕಾಂಗ್ರೆಸ್ ಮೂಲಕ ರಾಜಕೀಯ ಪ್ರವೇಶ ಮಾಡಿದ್ದು, ಪತ್ನಿ ಪ್ರಿಯಾಂಕಾ ಜೊತೆಗೂಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ನಂತರ ಕಾಂಗ್ರೆಸ್ ಸೇರ್ಪಡೆಗೊಂಡ ಅವರು, ಕೊರೊನಾ ಸಮಯದಲ್ಲಿ ಮದ್ದೂರು ತಾಲೂಕಿನಾದ್ಯಂತ ಸಾರ್ವಜನಿಕರ ನೆರವಿಗೆ ನಿಂತಿದ್ದರು. ಕೊರೊನಾದಿಂದ ಮೃತಪಟ್ಟವರ ಅಂತ್ಯಸಂಸ್ಕಾರವನ್ನೂ ಕೂಡ ಮಾಡಿ ಗಮನ ಸೆಳೆದಿದ್ದರು.

ವಿಧಾನಸಭಾ ಚುನಾವಣೆಗೆ ಗುರುಚರಣ್ ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ಕಾರಣದಿಂದಾಗಿ ಅಪ್ಪು ಗೌಡರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಇವರ ಪತ್ನಿ ಪ್ರಿಯಾಂಕಾ ಮದ್ದೂರು ಪುರಸಭೆಯ ಹಾಲಿ ಸದಸ್ಯೆಯಾಗಿದ್ದಾರೆ.

> ಅಪ್ಪು ಗೌಡರ ಹತ್ಯೆ ಪ್ರಯತ್ನ ರಾಜಕೀಯ ವೈಷಮ್ಯದಿಂದ ನಡೆದದ್ದಲ್ಲ. ಅಪ್ಪು ಗೌಡ ಮತ್ತು ಮಧು ನಡುವೆ ಹಣಕಾಸಿನ ವಿಚಾರಕ್ಕೆ ಗಲಾಟೆ ನಡೆದಿದೆ. ಅಪ್ಪು ಗೌಡರಿಂದ ತನಗೆ ನಷ್ಟವಾಗಿದೆ ಎಂದು ಮಧು ಹತ್ಯೆಗೆ ಸಂಚು ರೂಪಿಸಿದ್ದಾನೆ. ಅಪ್ಪುಗೌಡರನ್ನು ಹತ್ಯೆ ಮಾಡಲು ಬೆಂಗಳೂರಿನಿಂದ ಹುಡುಗರನ್ನು ಕರೆಸಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಎಲ್ಲಾ ಆರು ಮಂದಿಯನ್ನು ಬಂಧಿಸಲಾಗಿದ್ದು, ಅವರೆಲ್ಲಾ ಬೆಂಗಳೂರಿನಲ್ಲಿ ಸಣ್ಣಪುಟ್ಟ ಉದ್ಯೋಗದಲ್ಲಿದ್ದಾರೆ. ಅಪ್ಪುಗೌಡರ ಹತ್ಯೆಗೆ ಸುಪಾರಿ ನೀಡಿದ್ದ ಮಧುವನ್ನೂ ಬಂಧಿಸಲಾಗಿದೆ.
> –ಎನ್.ಯತೀಶ್, ಮಂಡ್ಯ ಜಿಲ್ಲಾ ಎಸ್ಪಿ



‘ಪೇಸಿಎಸ್’ ಪೋಸ್ಟರ್ ಹಿಡಿದು ಬಿಜೆಪಿ ಧರಣಿ



ಮಂಡ್ಯ, ಆ.12– ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ರಾಜೀನಾಮೆಗೆ ಒತ್ತಾಯಿಸಿ ಜಿಲ್ಲಾ ಬಿಜೆಪಿ ಘಟಕ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ನಡೆಸುತ್ತಿರುವ ಪ್ರತಿಭಟನಾ ಧರಣಿ ಎರಡನೇ ದಿನಕ್ಕೆ ಕಾಲಿಟ್ಟಿದ್ದು, ಮಾಜಿ ಸಚಿವ ಕೆ.ಗೋಪಾಲಯ್ಯ ನೇತೃತ್ವದಲ್ಲಿ ಪೇಸಿಎಸ್ ಪೋಸ್ಟರ್ ಹಿಡಿದು ಚಲುವರಾಯಸ್ವಾಮಿ ವಿರುದ್ಧ ಬಿಜೆಪಿ ಕಾರ್ಯಕರ್ತರು ಘೋಷಣೆ ಕೂಗಿದರು.

ಶಾಸಕ ಕೆ.ಗೋಪಾಲಯ್ಯ ಮಾತನಾಡಿ, ಕಾಂಗ್ರೆಸ್ ಮುಂಬರುವ ಲೋಕಸಭಾ ಚುನಾವಣೆಗೆ ಹಣ ಕೂಡಿಡುತ್ತಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ದೇಶದಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದೆ. ಕೃಷಿ ಸಚಿವರ ವಿರುದ್ಧ ಪತ್ರ ಬರೆದಿರುವ ವಿಚಾರ ಬಹಳ ಗಂಭೀರವಾಗಿದ್ದು, ಲೋಕಾಯುಕ್ತ ತನಿಖೆಗೆ ಆದೇಶಿಸದೇ ಸಿಓಡಿ ತನಿಖೆಗೆ ಸಿಎಂ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಈ ಕೂಡಲೇ ಸಚಿವ ಚಲುವರಾಯಸ್ವಾಮಿ ರಾಜೀನಾಮೆ ಕೊಡಬೇಕೆಂದು ಆಗ್ರಹಿಸಿದರು.

ಮಂಡ್ಯದಲ್ಲಿ ಬಿಜೆಪಿ ಪಕ್ಷದಿಂದ ಅಹೋರಾತ್ರಿ ಧರಣಿ ನಡೆಯುತ್ತಿದೆ. ಪ್ರತಿಭಟನೆಗೆ ನಮ್ಮ ನಾಯಕರು ಬೆಂಬಲ ಕೊಟ್ಟಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದು 3 ತಿಂಗಳು ಕಳೆದಿಲ್ಲ. ಆಗಲೇ ಲೂಟಿ ಹೊಡೆಯುತ್ತಿದೆ. ಜಿಲ್ಲೆಯ ಕೃಷಿ ಅಧಿಕಾರಿಗಳು ದೂರು ಕೊಟ್ಟಿದ್ದಾರೆ. ಸರ್ಕಾರಿ ಅಧಿಕಾರಿಗಳು ರಾಜ್ಯಪಾಲರಿಗೆ ದೂರು ಸಲ್ಲಿಸಿರುವುದು ಇತಿಹಾಸದಲ್ಲಿ ನಡೆದಿಲ್ಲ. ಲೋಕಸಭಾ ಚುನಾವಣೆ ಮುನ್ನಾ ಸಾವಿರಾರು ಕೋಟಿ ಹಣ ಸಂಗ್ರಹಿಸಲು ಕಾಂಗ್ರೆಸ್ ಮುಂದಾಗಿದೆ. ಇದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಎಂದರು.

ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ಒಳಪಡಿಸಬೇಕು. ರಾಜ್ಯಪಾಲರು ಸಚಿವರ ರಾಜೀನಾಮೆ ಪಡೆಯಬೇಕು. ಸೋಮವಾರ ಬೆಂಗಳೂರಿನ ಗಾಂಧಿ ಪ್ರತಿಮೆಯಿಂದ ಹೊರಟು ಗೌರ್ವನರ್‌ಗೆ ದೂರು ನೀಡಲು ನಿರ್ಧರಿಸಿದ್ದು, ಇಡೀ ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ ಬಗ್ಗೆ ಗೌರ್ವನರ್ ಗಮನ ಸೆಳೆಯುತ್ತೇವೆ. ನಮ್ಮ ಸರ್ಕಾರದಲ್ಲಿ ಗುತ್ತಿಗೆದಾರರಿಗೆ ತೊಂದರೆ ಕೊಟ್ಟಿಲ್ಲ. ಆದರೆ ಇದೀಗ ಗುತ್ತಿಗೆದಾರರು ಡಿಸಿಎಂ ವಿರುದ್ಧ ಆರೋಪಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಧರಣಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್, ಮುಖಂಡರಾದ ಸಚ್ಚಿದಾನಂದ, ಡಾ.ಇಂದ್ರೇಶ್, ಅಶೋಕ್ ಜಯರಾಂ, ಸಿ.ಟಿ.ಮಂಜುನಾಥ್, ಸಿದ್ದರಾಜು, ಶಿವಕುಮಾರ್ ಆರಾಧ್ಯ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಬಿಜೆಪಿ, ಜೆಡಿಎಸ್ ವಿರುದ್ಧ ಕಾಂಗ್ರೆಸ್ ಅಹೋರಾತ್ರಿ ಧರಣಿ



ಮಂಡ್ಯ, ಆ.12– ಚಲುವರಾಯಸ್ವಾಮಿ ರಾಜೀನಾಮೆಗೆ ಬಿಜೆಪಿ ಅಹೋರಾತ್ರಿ ಧರಣಿ ನಡೆಸುತ್ತಿದ್ದರೆ, ಆ ಧರಣಿ ಪಕ್ಕದಲ್ಲೇ ಜಿಲ್ಲಾ ಕಾಂಗ್ರೆಸ್, ಶಾಸಕ ಗಣಿಗ ರವಿಕುಮಾರ್ ನೇತೃತ್ವದಲ್ಲಿ ಬಿಜೆಪಿ, ಜೆಡಿಎಸ್ ವಿರುದ್ಧ ಅಹೋರಾತ್ರಿ ಧರಣಿ ಆರಂಭಿಸಿದೆ.

ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ನಡೆಯುತ್ತಿರುವ ಪ್ರತಿಭಟನಾ ಧರಣಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರ, ಬಿಜೆಪಿ ದಲಿತ, ಕಾರ್ಮಿಕ, ಮಹಿಳೆಯರ ಮತ್ತು ಸಂವಿಧಾನ ವಿರೋಧಿ ಎಂದು ಆಕ್ರೋಶ ವ್ಯಕ್ತಪಡಿಸಿ, ಬಿಜೆಪಿ, ಜೆಡಿಎಸ್ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಧಿಕ್ಕಾರ ಕೂಗಿದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಸಚಿವ ಚಲುವರಾಯಸ್ವಾಮಿ ವಿರುದ್ಧ ಸುಳ್ಳು ಆರೋಪ ಮಾಡಿ ಅವರ ವ್ಯಕ್ತಿತ್ವಕ್ಕೆ ಕಳಂಕ ತರಲು ಪ್ರತಿಪಕ್ಷಗಳು ಹುನ್ನಾರ ನಡೆಸಿವೆ. ಕೃಷಿ ಇಲಾಖೆ ಅಧಿಕಾರಿಗಳ ಹೆಸರಿನಲ್ಲಿ ರಾಜ್ಯಪಾಲರಿಗೆ ದೂರು ಸಲ್ಲಿಸಿರುವುದು ಸುಳ್ಳು ದೂರು ಎಂಬುದು ಈಗಾಗಲೇ ಗೊತ್ತಾಗಿದೆ. ಪ್ರಕರಣ ಕುರಿತು ಸಿಐಡಿ ತನಿಖೆ ಚುರುಕುಗೊಂಡಿದ್ದು, ಸದ್ಯದಲ್ಲೇ ನಕಲಿ ದೂರಿನ ವಾಸ್ತವ ಬಯಲಾಗಲಿದೆ ಎಂದರು.

ಎಂಎಲ್‌ಸಿ ದಿನೇಶ್ ಗೂಳಿಗೌಡ ಮಾತನಾಡಿ, ಚಲುವರಾಯಸ್ವಾಮಿ ಮೇಲಿನ ಆರೋಪ ಸತ್ಯಕ್ಕೆ ದೂರವಾದದು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದಲೂ ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್‌ನವರು ಹೆಜ್ಜೆ ಹೆಜ್ಜೆಗೂ ಅಡ್ಡಿ ಪಡಿಸುತ್ತಾ ಬಂದಿದ್ದಾರೆ. ಜನಪರ ಕಾರ್ಯಕ್ರಮಗಳನ್ನು ಸಹಿಸದೇ ಜನರ ಗಮನವನ್ನು ಬೇರೆ ಕಡೆಗೆ ಎಳೆಯಲು ವಿರೋಧ ಪಕ್ಷಗಳು ಒಂದಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧರಣಿಯಲ್ಲಿ ಎಂಎಲ್‌ಸಿ ಮಧು ಜಿ. ಮಾದೇಗೌಡ, ಮಾಜಿ ಶಾಸಕ ಹೆಚ್.ಬಿ. ರಾಮು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಸೇರಿದಂತೆ ಇತರರಿದ್ದರು.

ಕೊಳತ್ತೂರು ಗ್ರಾಪಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ



ತಿ.ನರಸೀಪುರ.ಆ.12–ತಾಲೂಕಿನ ಕೊಳತ್ತೂರು ಗ್ರಾಮ ಪಂಚಾಯತಿಯ ಆಡಳಿತ ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಬಿದ್ದಿದ್ದು, ನೂತನ ಅಧ್ಯಕ್ಷರಾಗಿ ಕೆ.ಪಿ.ರವಿಪ್ರಸಾದ್, ಉಪಾಧ್ಯಕ್ಷರಾಗಿ ಸೀಗೋಡಿಪುರದ ಸಿ.ಎಂ.ಯಶೋಧ ಶಿವಮೂರ್ತಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 17 ಮಂದಿ ಸದಸ್ಯ ಬಲವುಳ್ಳ ಕೊಳತ್ತೂರು ಗ್ರಾಮ ಪಂಚಾಯತಿಗೆ ಪ.ಜಾತಿಗೆ ಮೀಸಲಾದ ಅಧ್ಯಕ್ಷ ಸ್ಥಾನಕ್ಕೆ ಕೆ.ಪಿ.ರವಿಪ್ರಸಾದ್, ಸಾಮಾನ್ಯ ಮಹಿಳೆಗೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ ಸಿ.ಎಂ.ಯಶೋಧ ಶಿವಮೂರ್ತಿ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು.

ಸಿಡಿಪಿಓ ಹಾಗೂ ಚುನಾವಣಾಧಿಕಾರಿ ಗೋವಿಂದೇಗೌಡ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು. ಚುನಾವಣೆ ಸಭೆಯಲ್ಲಿ ಸದಸ್ಯರಾದ ಎಂ.ಕುಮಾರಸ್ವಾಮಿ, ಕೆ.ಟಿ.ನಂಜುಂಡಸ್ವಾಮಿ, ಸರಸ್ವತಿ, ಮಹದೇವಮ್ಮ, ನಂಜುಂಡೇಗೌಡ, ಸಿದ್ದಮ್ಮ, ಶಾಂತರಾಜು, ಎಚ್.ಬಿ. ಶೀಲಾ, ನಾಗೇಶ್, ಮೀನಾಕ್ಷಿ ಹಾಜರಿದ್ದು ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಉಳಿದಂತೆ ಗೀತಾ, ಆರ್.ಎಸ್. ರೂಪ, ಮಹೇಶ್, ಲಕ್ಷ್ಮಮ್ಮ ಹಾಗೂ ಮಂಗಳಮ್ಮ ಗೈರು ಹಾಜರಾಗಿದ್ದರು.

ಸಹಾಯಕ ಚುನಾವಣಾಧಿಕಾರಿಯಾಗಿ ಭವ್ಯಶ್ರೀ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ನಾಗರಾಜು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ಈ ವೇಳೆ ಮಾತನಾಡಿದ ನೂತನ ಅಧ್ಯಕ್ಷ ಕೆ.ಪಿ.ರವಿಪ್ರಸಾದ್ ಪಂಚಾಯ್ತಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಒಟ್ಟಾಗಿ ನನ್ನ ಮೇಲೆ ವಿಶ್ವಾಸವಿಟ್ಟು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದಾರೆ. ಸದಸ್ಯರ ನಂಬಿಕೆಯನ್ನು ಹುಸಿಗೊಳಿಸದೇ ಪಂಚಾಯ್ತಿಯ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಹಾಗೂ ಪಂಚಾಯ್ತಿಯ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ಪಡೆದು ಸರ್ಕಾರದಿಂದ ಪಂಚಾಯ್ತಿಗೆ ದೊರಕಬಹುದಾದ ಅನುದಾನ ತಂದು ಗ್ರಾಮಗಳ ಮೂಲಭೂತ ಸಮಸ್ಯೆ ಬಗೆಹರಿಸಲು ಹಾಗೂ ಅಭಿವೃದ್ಧಿ ಕೈಗೊಳ್ಳಲು ಮುಂದಡಿ ಇಡುತ್ತೇನೆ ಎಂದರು. ಉಪಾಧ್ಯಕ್ಷೆ ಯಶೋಧ ಶಿವಮೂರ್ತಿ ತಮ್ಮ ಆಯ್ಕೆಗೆ ಸಹಕರಿಸಿದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ಜಿಪಂ ಮಾಜಿ ಸದಸ್ಯ ಹೊನ್ನ ನಾಯಕ, ಕಿಯೋನಿಕ್ಸ್ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಸೋಸಲೆ ಗ್ರಾಪಂ ಮಾಜಿ ಅಧ್ಯಕ್ಷರಾದ ಮಹೇಶ್, ಸೋಮಣ್ಣ, ಡೈರಿ ಗುರುಮೂರ್ತಿ, ಮಹೇಶ್, ಗದ್ದೆಮೋಳೆ ಸಿದ್ದರಾಜು, ಕೇಬಲ್ ಮಲ್ಲೇಶ್, ನಾರಾಯಣ್, ಸೋಸಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಕೊಳತ್ತೂರು ಕೆ.ಎನ್.ಕುಮಾರ್,ಚಿದರವಳ್ಳಿ ನವೀನ್, ಮಾಯಪ್ಪ, ಬೂದಹಳ್ಳಿ ಸಿದ್ದರಾಜು, ಹಲವಾರ ಪರಮೇಶ್, ಮಹದೇವಸ್ವಾಮಿ, ಮಾಧು,ಯಜಮಾನ್ ರಾಜೇಂದ್ರ, ಚಿನ್ನಸ್ವಾಮಿ, ಹಲವಾರ ಗಿರಿ, ಚಂದ್ರು,ನಂಜಯ್ಯ, ಕಿರಣ್, ಸಂತೋಷ್, ಕೆ.ಎಸ್.ಮಧು, ರವಿ, ವೀರಭದ್ರ, ನಾಗಲಗೆರೆ ನಂಜಯ್ಯ, ಕಬಾಬ್ ಶಂಕರ್, ಅಂಗಡಿ ಸಿದ್ದರಾಜು ಮತ್ತಿತರರಿದ್ದರು.

ಬೆಟ್ಟದಪುರದ ಸಂತೆ ಸುಂಕ ವಸೂಲಾತಿ ಹರಾಜು

ಬೆಟ್ಟದಪುರದ, ಆ.12– ಬೆಟ್ಟದಪುರ ಗ್ರಾಮ ನೂತನ ಅಧ್ಯಕ್ಷ ಬಿಸಿ ಗಿರೀಶ್ ಅವರ ಅಧ್ಯಕ್ಷತೆಯಲ್ಲಿ ಬೆಟ್ಟದಪುರದ ಪ್ರಸಿದ್ಧ ಪಡೆದ ಪ್ರತಿ ಭಾನುವಾರದ ಸಂತೆ ಹರಾಜು ಕಾರ್ಯಕ್ರಮ ನಡೆಯಿತು.

ಹರಾಜಿನಲ್ಲಿ ಭಾಗವಹಿಸಿದ್ದ ಬೆಟ್ಟದಪುರದ ಪಾಪಣ್ಣ ಎಂಬುವರು 4 ಲಕ್ಷ 80 ಸಾವಿರದಕ್ಕೆ ಬೆಟ್ಟದಪುರದ ಸಿಡ್ಲು ಮಲ್ಲಿಕಾರ್ಜುನ ಸ್ವಾಮಿ ಜಾತ್ರೆ ಸಂದರ್ಭದಲ್ಲಿ ಮೂರು ಸಂತೆಯನ್ನು ಹೊರತುಪಡಿಸಿ ಉಳಿದ ಸಂತೆಗಳ ಸುಂಕ ವಸೂಲಿಯನ್ನು ಸರ್ಕಾರಿ ಆದೇಶದಂತೆ ಪಾಪಣ್ಣ ಅವರಿಗೆ ವಹಿಸಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ವೀಣಾ ಮಲ್ಲೇಶ್ ಸದಸ್ಯರಾದ ಗಿರಿಗೌಡ ಶ್ವೇತಾ ಮಂಜುಳಾ ಚನ್ನಕೇಶವ ಮಾಜಿ ಉಪಾಧ್ಯಕ್ಷೆ ಸೌಮ್ಯ ಸಂತೋಷ್ ಮುಖಂಡರಾದ ಮಲ್ಲೇಶ್ ಹಾಗೂ ಗ್ರಾಮ ಪಂಚಾಯತಿ ಪಿಡಿಓ ದಿವಾಕರ್ ಕಾರ್ಯದರ್ಶಿ ಶ್ರೀನಿಧಿ ನೌಕರರಾದ ದೀಪು ದೇವರಾಜು ಮೈಲಾರಿ ಕರ ವಸಲಿಗಾರ ಅಣ್ಣೇಗೌಡ ಸೇರಿದಂತೆ ಇತರರು ಹಾಜರಿದ್ದರು.

ನಗರಸಭೆ ಆಯುಕ್ತೆ ಮಾನಸ ಅಧಿಕಾರ ಸ್ವೀಕಾರ



ಹುಣಸೂರು.ಆ.12– ಹುಣಸೂರು ನಗರಸಭೆ ಆಯುಕ್ತರಾಗಿ ಎಂ.ಮಾನಸ ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡರು.

ಕಳೆದ ಚುನಾವಣಾ ಪೂರ್ವದಲ್ಲಿ ಸ್ವ-ಕ್ಷೇತ್ರದ ಕಾರಣಕ್ಕೆ ಇಲ್ಲಿಂದ ಬೇರೆಡೆಗೆ ವರ್ಗಾವಣೆಗೊಂಡಿದ್ದ ಮುಖ್ಯಾಧಿಕಾರಿ–1 ಶ್ರೇಣಿಯ ಎಂ.ಮಾನಸರನ್ನು ಮತ್ತೆ ಹುಣಸೂರು ನಗರಸಭೆ ಪೌರಾಯುಕ್ತರನ್ನಾಗಿ ವರ್ಗಾವಣೆ ಮಾಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ. ಮಂಜುನಾಥ್ ಅವರು ಆದೇಶಿಸಿದ್ದಾರೆ. ಅದರಂತೆ ಎಂ.ಮಾನಸ ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡು ಜಿಲ್ಲಾಧಿಕಾರಿಗಳ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಕಚೇರಿಯಲ್ಲಿ ವರದಿ ಮಾಡಿಕೊಂಡು ಶನಿವಾರ ಹುಣಸೂರಿಗೆ ಬಂದು ಅಧಿಕಾರ ವಹಿಸಿಕೊಂಡು ಕರ್ತವ್ಯ ನಿರ್ವಹಿಸಿದರು.

ಗುಜರಿ ಗೋಡೌನ್‌ಗೆ ಬೆಂಕಿ; ಚಿಂದಿ ವಸ್ತುಗಳು ಭಸ್ಮ

ನಂಜನಗೂಡು, ಆ.12– ಗುಜರಿ ಗೋಡೌನ್‌ಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಚಿಂದಿ ವಸ್ತುಗಳು ಸುಟ್ಟು ಹೋಗಿರುವ ಘಟನೆ ನಗರದ ಹೊರವಲಯದಲ್ಲಿರುವ ಡಿ.ದೇವರಾಜ ಅರಸು ಸೇತುವೆ ಬಳಿಯ ಕತ್ವಾಡಿಪುರ ಮುಖ್ಯ ರಸ್ತೆಯಲ್ಲಿ ಜರುಗಿದೆ. ಮೈಸೂರಿನ ತನ್ವೀರ್ ಎಂಬುವರಿಗೆ ಸೇರಿದ ಗುಜರಿ ಗೋಡೌನ್‌ನಲ್ಲಿ ಯಾವುದೇ ಅನುಮತಿ ಪಡೆಯದೆ ಕಾರ್ಖಾನೆಯ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಬೇರ್ಪಡಿಸಿಗೊಳಿಸಿ ಅಕ್ರಮವಾಗಿ ಗುಜರಿ ಗೋಡೌನ್ ನಡೆಸುತ್ತಿದ್ದರು ಎನ್ನಲಾಗಿದೆ. ಶನಿವಾರ ಮಧ್ಯಾಹ್ನದ ವೇಳೆ ಆಕಸ್ಮಿಕವಾಗಿ ಗುಜರಿ ಗೋಡೌನ್‌ಗೆ ಬೆಂಕಿ ಬಿದ್ದಿದ್ದು ಗೋಡೌನ್ ಒಳಗೆ ಇದ್ದ ತ್ಯಾಜ್ಯ ವಸ್ತುಗಳು ಸುಟ್ಟು ಹೋಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿ, ಬೆಂಕಿಯನ್ನು ನಂದಿಸಿದ ಪರಿಣಾಮ ಯಾವುದೇ ಹಾನಿಯುಂಟಾಗದೆ, ಅಕ್ಕಪಕ್ಕದ ನಿವಾಸಿಗಳು ಅಪಾಯದಿಂದ ಪಾರಾಗಿದ್ದಾರೆ.

ಪೊಲೀಸ್ ಠಾಣೆ ಸಮೀಪದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಹಾಡಹಗಲೇ ಕಳವು



ಹೆಚ್.ಡಿ.ಕೋಟೆ, ಆ.12– ಪಟ್ಟಣದ ಹೌಸಿಂಗ್ ಬೋರ್ಡ್ ಮುಖ್ಯ ರಸ್ತೆ ಪಟ್ಟಣ ಪೊಲೀಸ್ ಠಾಣೆ ಸಮೀಪವೇ ಇರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರ ಹಾಡಹಗಲೇ ಕಳ್ಳತನವಾಗಿದೆ.

ಶುಕ್ರವಾರವಾಗಿದ್ದರಿಂದ ವಿಶೇಷ ಪೂಜೆಗಾಗಿ ದೇವರಿಗೆ ಬೆಳ್ಳಿ,ಚಿನ್ನ ಆಭರಣಗಳನ್ನು ತಾಯಿ ಚಾಮುಂಡೇಶ್ವರಿಗೆ ಅಲಂಕಾರ ಮಾಡಿ ಬೆಳಗ್ಗಿನಿಂದಲೇ ವಿಶೇಷ ಪೂಜೆ ನೆರವೇರಿಸಲಾಗಿತ್ತು. ಬೆಳಗ್ಗೆ 11ಕ್ಕೆ ದೇವಾಲಯದ ಅರ್ಚಕ ಸತೀಶ್ ಅವರು ದೇವಸ್ಥಾನಕ್ಕೆ ಬೀಗ ಹಾಕಿ ಮನೆಗೆ ತೆರಳಿದ್ದಾರೆ ಎನ್ನಲಾಗಿದೆ.

ಎಂದಿನಂತೆ ಸಂಜೆ 6 ಗಂಟೆಗೆ ಸಾಯಂಕಾಲದ ಪೂಜೆಗೆ ಆಗಮಿಸಿದ ಅರ್ಚಕರು ಬೀಗ ತೆಗೆಯಲು ಹೋದ ಸಂದರ್ಭದಲ್ಲಿ ಕಬ್ಬಿಣದ ಗೇಟಿನಲ್ಲಿ ಬೀಗ ಇಲ್ಲದಿರುವುದು ಕಂಡುಬಂದಿತು. ನಂತರ ಗಾಬರಿಗೊಂಡ ಅರ್ಚಕ ಒಳಗೆ ಬಂದು ನೋಡಿದಾಗ ದೇವಿಗೆ ತೊಡಿಸಿದ್ದ ಬೆಳ್ಳಿಯ ಮುಖವಾಡ ಮತ್ತು 5 ಗ್ರಾಂ ತೂಗುವ 2 ಚಿನ್ನದ ತಾಳಿ ಹಾಗೂ ಎರಡು ಜೊತೆ ಉದ್ದರಣೆ ಪಂಚಪಾತ್ರೆ ಕಳ್ಳತನವಾಗಿರುವುದು ಕಂಡು ಬಂದಿತು.

ನಂತರ ಅರ್ಚಕ ಸತೀಶ್ ಗಾಬರಿಗೊಂಡು ಅಕ್ಕ ಪಕ್ಕದವರಿಗೆ ತಿಳಿಸಿದರು. ಪಟ್ಟಣದ ಠಾಣೆಗೆ ದೂರು ನೀಡಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ದೇವಾಲಯವು ಠಾಣೆಯ ಹತ್ತಿರವೇ ಇದ್ದರೂ ಸಹ ಕಳ್ಳರು ಕೈಚಳಕ ತೋರಿರುವುದು ಆಶ್ಚರ್ಯಕ್ಕೆಡೆಮಾಡಿಕೊಟ್ಟಿದೆ.

ಹುಲ್ಲಹಳ್ಳಿ: ಚಿರತೆ ದಾಳಿಗೆ ಕುರಿ ಬಲಿ

ಹುಲ್ಲಹಳ್ಳಿ, ಆ.12– ಹಾಡಹಗಲೇ ಚಿರತೆ ಯೊಂದು ಕುರಿಗಳ ಹಿಂಡಿನ ಮೇಲೆ ದಾಳಿ ನಡೆಸಿ ಕುರಿಯನ್ನು ಬಲಿ ಪಡೆದಿದೆ ಮಂಗಳೂರು ಸಮೀಪದ ರವಿಶಂಕರ್ ಎಂಬುವರಿಗೆ ಸೇರಿದ ಜಮೀನಿನಲ್ಲಿ ಜವರೇಗೌಡರು ದನ ಕರು ಕುರಿಗಳನ್ನು ಮೇಯಲು ಬಿಟ್ಟಿದ್ದರು. ಮಧ್ಯಾಹ್ನ ಸುಮಾರು 12 ಗಂಟೆ ಸಮಯದಲ್ಲಿ ಚಿರತೆಯು ಕುರಿಗಳ ಮೇಲೆ ದಿಢೀರ್ ದಾಳಿ ಮಾಡಿ ಒಂದು ಕುರಿಯನ್ನು ಬಲಿ ಪಡೆದಿದೆ. ಈ ಪ್ರದೇಶ ದಲ್ಲಿ ಚಿರತೆಗಳ ಹಾವಳಿ ಜಾಸ್ತಿಯಾಗಿದ್ದು, ಆಗಾಗ ದನ–ಕರುಗಳ, ಕುರಿಗಳ ಮೇಲೆ ದಾಳಿ ಮಾಡುತ್ತಿವೆ. ಈ ಬಗ್ಗೆ ಹಲವಾರು ಬಾರಿ ಅರಣ್ಯ ಇಲಾಖೆಯವರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಅರಣ್ಯ ಇಲಾಖೆಯವರು ಚಿರತೆ ಸೆರೆ ಹಿಡಿಯುವಂತೆ ಆಗ್ರಹಿಸುತ್ತಿದ್ದಾರೆ.

ಆಳುವ ಸರ್ಕಾರಗಳಿಂದ ಕಾರ್ಮಿಕರಿಗೆ ಅನ್ಯಾಯ

ಪ್ರಚಾರಾಂದೋಲನ ಜಾಥಾದಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರ ಆಕ್ರೋಶ



ಹುಣಸೂರು, ಆ.12– ಕಾಯಕವೇ ಕೈಲಾಸ ಎಂದು ನಂಬಿರುವ ಮತ್ತು ದೇಶದ ಮುನ್ನಡೆಗೆ ಕಾರಣವಾಗಿರುವ ರಾಷ್ಟ್ರೀಯ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರನ್ನು ಇಂದು ಗುತ್ತಿಗೆ, ಹೊರಗುತ್ತಿಗೆ ದಿನಗೂಲಿ ಮತ್ತು ಗೌರವಧನ ಆಧಾರದಲ್ಲಿ ದುಡಿಸಿಕೊಂಡು ಆಳುವ ಸರ್ಕಾರಗಳು ಕಾರ್ಮಿಕರಿಗೆ ಮೋಸ ಮಾಡುತ್ತಿವೆ ಎಂದು ಸಿಐಟಿಯು ಜಿಲ್ಲಾಧ್ಯಕ್ಷರಾದ ಕಾಮ್ರೇಡ್ ಜಿ.ಜಯರಾಮು ಆರೋಪಿಸಿದರು.

77ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಸಂವಿಧಾನ ರಕ್ಷಣೆಗಾಗಿ ಸಿಐಟಿಯು ಮತ್ತು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಆಗಸ್ಟ್ ಒಂದರಿಂದ ಆ.14ರವರೆಗೆ ರೈತ ಕಾರ್ಮಿಕರ ಪ್ರಶ್ನೆಗಳ ಮೇಲೆ ದೇಶಾದ್ಯಂತ ಕರೆ ನೀಡಿರುವ ಪ್ರಚಾರಾಂದೋಲನ ಜಾಥಾಕ್ಕೆ ಹಳೆ ಬಸ್ಟ್ಯಾಂಡ್ ಮುಂಬಾಗದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದ ನಿರ್ಮಾಣಕ್ಕೆ ಕೊಡುಗೆ ನೀಡುತ್ತಿರುವ ಕಾರ್ಖಾನೆಗಳಲ್ಲಿ ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿ ಕಾರ್ಮಿಕರು, ಅಗರಬತ್ತಿ ಪ್ಲಾಂಟೇಶನ್, ಆಟೋ ರಿಕ್ಷಾ ಡ್ರೈವರ್, ಖಾಸಗಿ ಟೆಂಪೊ ಡ್ರೈವರ್, ಹೋಟೆಲ್ ಶಾಪಿಂಗ್ ಮಾಲ್, ಖಾಸಗಿ ಆಸ್ಪತ್ರೆ, ಪೆಟ್ರೋಲ್ ಬಂಕ್, ಸಣ್ಣ ಕಾರ್ಖಾನೆ, ಗ್ರಾಪಂ ಅಡುಗೆ ತಯಾರಿಸುವವರು, ಕಲ್ಯಾಣ ಮಂಟಪ ಸ್ವಚ್ಛತೆಗಾರರು, ಪೌರಕಾರ್ಮಿಕರು ಸೇರಿದಂತೆ 39 ಕೋಟಿ ಹೆಚ್ಚು ಜನರ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ ಎಂದರು. ಪ್ರಚಾರಾಂದೋಲನದಲ್ಲಿ ಸಿಐಟಿ ಯು ಮುಖಂಡರಾದ ಶಿವರಾಂ, ರವಿ, ಯೋಗೇಶ್, ಸೋಮಶೇಖರ್, ವಿಮಾ ಪ್ರತಿನಿಧಿಗಳ ಸಂಘದ ಅಧ್ಯಕ್ಷ ರಾಧಾಕೃಷ್ಣ, ನಿಂಗರಾಜು ಮುಂತಾದವರು ಭಾಗವಹಿಸಿದ್ದರು.

ಕಾಳಿಸಿದ್ದನಹುಂಡಿಯಲ್ಲಿ ದೇವಸ್ಥಾನ ಸ್ವಚ್ಛತೆ



ಕಾಳಿಸಿದ್ದನಹುಂಡಿ, ಆ.12– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ವತಿಯಿಂದ ಮೇಳಾಪುರ ವಲಯದ ಕಾಳಿಸಿದ್ದನಹುಂಡಿ ಕಾರ್ಯ ಕ್ಷೇತ್ರದ ಶ್ರೀಸಿದ್ದರಾಮೇಶ್ವರ ದೇವಸ್ಥಾನ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ದೇವಾಲಯದ ಸುತ್ತಮುತ್ತಲು ಬೆಳೆದಿದ್ದ ಗಿಡಗಳನ್ನು ತೆಗೆಯಲಾಯಿತು. ದೇವಾಲಯಗಳ ಬಳಿ ಗುಡಿಸಿ ಸ್ವಚ್ಛಗೊಳಿಸಿ ರಂಗೋಲಿಯನ್ನು ಹಾಕಲಾಯಿತು ಹಾಗೂ ಸದಸ್ಯರಿಗೆಲ್ಲರಿಗೂ ಪ್ರಸಾದ ವಿತರಣೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ದೇವಸ್ಥಾನದ ಪುರೋಹಿತರು ಒಕ್ಕೂಟದ ಅಧ್ಯಕ್ಷರು ಮೇಲ್ವಿಚಾರಕರಾದ ಆಶಾರಾಣಿ, ಸೇವಾ ಪ್ರತಿನಿಧಿಯರು ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು.

6 ತಿಂಗಳಲ್ಲಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ಪೂರ್ಣ

ಕಾಮಗಾರಿ ಪರಿಶೀಲಿಸಿದ ಶಾಸಕ ದರ್ಶನ್ ಧ್ರುವನಾರಾಯಣ್



ನಂಜನಗೂಡು, ಆ.12– ಮುಂದಿನ 6 ತಿಂಗಳ ಅವಧಿಯಲ್ಲಿ ನಗರದ ಅಪೋಲೋ ವೃತ್ತದ ಬಳಿ ನಿರ್ಮಿಸಲಾಗುತ್ತಿರುವ ರೈಲ್ವೆ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ರೈಲ್ವೆ ಮೇಲ್ಸೇತುವೆ ಕಾಮ ಗಾರಿಯ ಪ್ರಗತಿ ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದರು. ಮೈಸೂರು ಚಾಮರಾಜನಗರ ನಡುವೆ ರೈಲುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ನಂಜನಗೂಡು ನಗರದಲ್ಲಿ ರೈಲು ಬರುವಾಗ ಸಾಕಷ್ಟು ಸಂಚಾರ ದಟ್ಟಣೆ ಅಧಿಕವಾಗಿತ್ತು. ಸಂಚಾರ ದಟ್ಟಣೆಯನ್ನು ತಪ್ಪಿಸುವ ಸಲುವಾಗಿ ಸುಜಾತಪುರಂ ಬಳಿ ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು ದಿ.ಧ್ರುವನಾರಾಯಣ್ ಅವರು ಸಂಸದರಾಗಿದ್ದ ವೇಳೆ ವಿಶೇಷ ಆಸಕ್ತಿ ವಹಿಸಿ ಸೇತುಬಂಧ ಯೋಜನೆ ಅಡಿಯಲ್ಲಿ ಮೂರೂ ಮೇಲ್ಸೇತುವೆ ಮಂಜೂರಾತಿ ಮಾಡಿಸಿದ್ದರು ಎಂದರು.

ನಗರದ ಸುಜಾತಾಪುರಂ ಬಳಿ ಸುಮಾರು 37 ಕೋಟಿ ವೆಚ್ಚದಲ್ಲಿ 1.2 ಕಿಮೀ ಉದ್ದದ ರೈಲ್ವೆ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ ಕಾಮಗಾರಿ ಆರಂಭಗೊಂಡು ಸುಮಾರು ಒಂದು ವರ್ಷ ಕಳೆದಿದ್ದರು ಸಹ ಕುಂಟುತ್ತಾ ಸಾಗಿತ್ತು. ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಶೀಘ್ರದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಅಲ್ಲದೆ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ತಿಳಿಸಲಾಗಿದೆ. ಕಾಮಗಾರಿಯಲ್ಲಿ ಶೇಕಡ 90 ಭಾಗ ಗ್ರಾವಲ್ ಅಳವಡಿಸುವ ಕಾರ್ಯ ಮುಕ್ತಾಯಗೊಂಡಿದೆ ಶೀಘ್ರದಲ್ಲೇ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು. ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿಎಂ ಶಂಕರ್, ಶ್ರೀಕಂಠನಾಯಕ, ಮಾಜಿ ಸದಸ್ಯ ಕೆಮಾರುತಿ, ಮುಖಂಡರಾದ ಮನೋಹರ್‌ಗೌಡ, ಕರಳಪುರ ನಾಗರಾಜು, ಮಹೇಶ್, ಓಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್, ರಾಜು, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಬಸವರಾಜು ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಅಸ್ವಸ್ಥತೆಯಿಂದ ಸಾಕಾನೆ ಸುಬ್ರಮಣಿ ಸಾವು



ಮೈಸೂರು, ಆ.12(ಎಸ್‌ಬಿಡಿ)– ಆನೆ ಚೌಕೂರು ವನ್ಯಜೀವಿ ವಲಯದ ಮತ್ತಿಗೋಡು ಸಾಕಾನೆ ಶಿಬಿರದ ಕ್ರಾಲ್‌ನಲ್ಲಿ ಪಳಗಿಸಲಾಗುತ್ತಿದ್ದ ಸುಬ್ರಮಣಿ ಹೆಸರಿನ 50 ವರ್ಷದ ಗಂಡಾನೆ ಅನಾರೋಗ್ಯದಿಂದ ಮೃತಪಟ್ಟಿದೆ.

ಸುಬ್ರಮಣಿಯನ್ನು ಜು.20ರಂದು ಕ್ರಾಲ್‌ನಿಂದ ಹೊರಗೆ ಕರೆತಂದು ಹೆಚ್ಚಿನ ತರಬೇತಿ ನೀಡಲಾಗುತ್ತಿತ್ತು. ಆ.11ರಂದು ಬೆಳಗ್ಗೆ ಅಸ್ವಸ್ಥಗೊಂಡು ಮಲಗಿದ್ದ ಆನೆಗೆ ಪಶುವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿದರಾದರೂ ಮೇಲೇಳಲಿಲ್ಲ. ಚಿಕಿತ್ಸೆ ಹಾಗೂ ಆರೈಕೆ ಮಾಡಿದರೂ ಪ್ರಯೋಜನವಾಗಲಿಲ್ಲ. ಬಳಿಕ ಕ್ರೇನ್ ಸಹಾಯದಿಂದ ಎದ್ದು ನಿಲ್ಲಿಸುವ ಪ್ರಯತ್ನವೂ ವಿಫಲವಾಗಿತ್ತು. ಅನಿವಾರ್ಯವಾಗಿ ಅದೇ ಸ್ಥಳದಲ್ಲಿ ಚಿಕಿತ್ಸೆ ಮುಂದುವರೆಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಮಧ್ಯಾಹ್ನ ಆನೆ ಮೃತಪಟ್ಟಿದ್ದಾಗಿ ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಹುಣಸೂರು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ್ ಚಿಕ್ಕನರಗುಂದ, ಹುಣಸೂರು ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದಯಾನಂದ್, ದುಬಾರೆ ಸಾಕಾನೆ ಶಿಬಿರದ ಪಶುವೈದ್ಯಾಧಿಕಾರಿ ಡಾ.ಚಿಟ್ಟಿಯಪ್ಪ, ಮೈಸೂರು ಲೀಲಾ ಪೆಟ್ ಆಸ್ಪತ್ರೆಯ ವೆಟರ್ನರಿ ಸರ್ಜನ್ ಡಾ.ಮದನ್ ಗೋಪಾಲ್, ಪಶುವೈದ್ಯಾಧಿಕಾರಿ ಹಾಗೂ ಇಲಾಖಾ ಆನೆಗಳ ಪ್ರಭಾರಕ ಡಾ.ಹೆಚ್.ರಮೇಶ, ವಲಯ ಅರಣ್ಯಾಧಿಕಾರಿಗಳು, ಆನೆ ಶಿಬಿರದ ಸಿಬ್ಬಂದಿ ಸಮ್ಮುಖದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ಆನೆ ಕಳೇಬರವನ್ನು ಹೂಳಲಾಯಿತು. ಸುಬ್ರಮಣಿ ಆನೆ ಬಹು ಅಂಗಾಂಗಗಳ ವೈಫಲ್ಯ, ಸಂಧಿವಾತ ಹಾಗೂ ಸೆಪ್ಟಿ ಸೆಮಿಯಾ ಸೋಂಕಿನಿಂದ ಬಳಲುತ್ತಿತ್ತು ಎಂದು ಮರಣೋತ್ತರ ಪರೀಕ್ಷೆ ನಡೆಸಿದ ಪಶುವೈದ್ಯಾಧಿಕಾರಿಗಳ ತಂಡ ಮಾಹಿತಿ ನೀಡಿದೆ ಎಂದು ಅರಣ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್‌ಸಿಇಆರ್‌ಟಿ ಪಠ್ಯ ಪುಸ್ತಕ ಸಮಿತಿಗೆ ಸುಧಾಮೂರ್ತಿ, ಶಂಕರ್ ಮಹಾದೇವನ್ ನೇಮಕ



ನವದೆಹಲಿ: ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಪಠ್ಯಪುಸ್ತಕ ಪರಿಷ್ಕರಣೆ ಸಂಬಂಧ ರಚಿಸಿರುವ ನೂತನ ಸಮಿತಿಗೆ ಇನ್ಫೋಸಿಸ್ ಫೌಂಡೇಶನ್‌ನ ಸುಧಾಮೂರ್ತಿ, ಸಂಗೀತ ನಿರ್ದೇಶಕ ಶಂಕರ್ ಮಹಾದೇವನ್ ಸೇರಿದಂತೆ 19 ಸದಸ್ಯರನ್ನು ನೇಮಕ ಮಾಡಲಾಗಿದೆ.

ಅರ್ಥಶಾಸ್ತ್ರಜ್ಞ ಸಂಜೀವ್ ಸನ್ಯಾಲ್ ಮತ್ತು ಇತರ 16 ಮಂದಿ, ಎನ್‌ಸಿಇಆರ್‌ಟಿ ಹೊಸ ಪಠ್ಯಕ್ರಮದ ಪ್ರಕಾರ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲು ರಚಿಸಿರುವ ಹೊಸ ಸಮಿತಿಯ ಭಾಗವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆ ಕುಲಪತಿ ಎಂ.ಸಿ.ಪಂತ್ ನೇತೃತ್ವದಲ್ಲಿ 19 ಸದಸ್ಯರ ರಾಷ್ಟ್ರೀಯ ಪಠ್ಯಕ್ರಮ ಮತ್ತು ಬೋಧನಾ ಕಲಿಕಾ ಸಾಮಗ್ರಿ ಸಮಿತಿ ರಚಿಸಲಾಗಿದೆ. ಈ ಸಮಿತಿ 3ರಿಂದ 12ನೇ ತರಗತಿಗಳಿಗೆ ಪಠ್ಯಪುಸ್ತಕಗಳನ್ನು ಅಂತಿಮಗೊಳಿಸಲಿದೆ.

ಪಠ್ಯಪುಸ್ತಕಗಳು ಮತ್ತು ಇತರ ಬೋಧನಾ ಕಲಿಕಾ ಸಾಮಗ್ರಿಗಳ ಬಗ್ಗೆ ಈ ಸಮಿತಿ ತೀರ್ಮಾನ ಕೈಗೊಳ್ಳಲಿದ್ದು, ಇವುಗಳನ್ನು ಎನ್‌ಸಿಇಆರ್‌ಟಿ ನಿಯಮಗಳ ಪ್ರಕಾರ ಪ್ರಕಟಿಸಿ ಬಳಸಲಾಗುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.



ಮೈಸೂರಿನ ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ ಮತ್ತು ಪದ್ಮಶ್ರೀ ಪುರಸ್ಕೃತ, ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್.ರಂಗನಾಥ್ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಗ್ರಂಥಪಾಲಕಿ ಡಾ.ಹೆಚ್.ಆರ್.ರೇಖಾ, ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ, ಅಧ್ಯಾಪಕರಾದ ಪ್ರೊ.ಸಿ.ಹೇಮಾವತಿ, ಮಹದೇವಸ್ವಾಮಿ, ಮೋಹನ್, ಲತಾ ಇತರರಿದ್ದರು.

ಕಬಿನಿ ಜಲಾಶಯದಿಂದ ಮುಂಗಾರು ಹಂಗಾಮಿಗೆ ಕಟ್ಟು ನೀರು ಪದ್ಧತಿಯಡಿ ನೀರು

● ಕಬಿನಿ ನೀರಾವರಿ ಸಲಹಾ ಸಮಿತಿ ಸಭೆ ನಿರ್ಧಾರ ● ಆ.25ರವರೆಗೆ ನಾಲೆಗೆ ನೀರು ಹರಿಯಲಿದೆ

ಮೈಸೂರು,ಆ.12(ಎಸ್‌ಬಿಡಿ)–ಕಬಿನಿ ಜಲಾಶಯದ ಅಚ್ಚುಕಟ್ಟು ಪ್ರದೇಶಗಳಿಗೆ 'ಕಟ್ಟು ನೀರು ಪದ್ಧತಿ'ಯಲ್ಲಿ ಮುಂಗಾರು ಹಂಗಾಮಿನ ನೀರು ಒದಗಿಸಲು ಕಬಿನಿ ನೀರಾವರಿ ಸಲಹಾ ಸಮಿತಿ ನಿರ್ಧರಿಸಿದೆ.

ಮೈಸೂರಿನ ಕಾಡಾ ಕಟ್ಟಡದಲ್ಲಿರುವ ನೀರಾವರಿ ಇಲಾಖೆ ದಕ್ಷಿಣ ವಲಯ ಮುಖ್ಯ ಇಂಜಿನಿಯರ್ ಕಚೇರಿಯಲ್ಲಿ ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಕಬಿನಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಕಬಿನಿ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರಿನ ಮಟ್ಟ, ಒಳಹರಿವಿನ ಪ್ರಮಾಣ, ಕುಡಿಯುವ ನೀರಿಗೆ ಬಳಕೆಯಾಗುವ ಪ್ರಮಾಣದ ಬಗ್ಗೆ ಅವಲೋಕಿಸಿ, ಸದ್ಯ ಜಲಾಶಯಕ್ಕೆ ಒಳಹರಿವು ವಾಡಿಕೆಗಿಂತ ಕಡಿಮೆ ಇರುವ ಹಿನ್ನೆಲೆಯಲ್ಲಿ ಅರೆ ನೀರಾವರಿ ಮಾದರಿಯಲ್ಲಿ ನೀರು ಒದಗಿಸಲು ತೀರ್ಮಾನಿಸಲಾಯಿತು. ಅಚ್ಚುಕಟ್ಟು ಪ್ರದೇಶದ ನಾಲೆಗಳಿಗೆ ಕಟ್ಟು ನೀರು ಪದ್ಧತಿ (ತಿಂಗಳಲ್ಲಿ 15 ದಿನ ನೀರು ಹರಿಸಿ, 15 ದಿನ ನಿಲ್ಲಿಸುವುದು) ಯಲ್ಲಿ ಶನಿವಾರದಿಂದಲೇ ನೀರು ಒದಗಿಸಲು ಸೂಚಿಸಲಾಯಿತು. ಇದರನ್ವಯ ಮೊದಲ ಹಂತದಲ್ಲಿ ಆ.25ರವರೆಗೆ ನಾಲೆಗೆ ನೀರು ಹರಿಸಲಾಗುತ್ತದೆ.

ಈ ಹಿಂದಿನ ವರ್ಷಗಳಲ್ಲಿ ಜಲಾಶಯಕ್ಕೆ ಹರಿದು ಬಂದಿರುವ ಕನಿಷ್ಠ ಒಳಹರಿವಿನ ಶೇ.50ರಷ್ಟು ನೀರು ಅಣೆಕಟ್ಟೆ ಸೇರಿದರೆ ಕಟ್ಟು ನೀರು ಪದ್ಧತಿಯನ್ನು ಅಕ್ಟೋಬರ್ 16ವರೆಗೆ ನೀರು ಒದಗಿಸಬಹುದು. ಕನಿಷ್ಠ ಒಳಹರಿವು ಲಭ್ಯವಾದರೆ ನವೆಂಬರ್ 15ರವರೆಗೆ ಅಥವಾ ಉತ್ತಮ ಮಳೆಯಾದರೆ ಡಿಸೆಂಬರ್‌ವರೆಗೂ ವಿಸ್ತರಿಸುವ ಅವಕಾಶವಿದೆ. ಆದರೆ ಈ ಲೆಕ್ಕಾಚಾರವನ್ನು ಮಳೆ ನಿರ್ಧರಿಸಲಿದೆ.

ರೈತರು ಸಹಕರಿಸಬೇಕು: ಮುಂಗಾರು ಬೆಳೆಗೆ ಸಮರ್ಪಕವಾಗಿ ನೀರು ಒದಗಿಸುವ ಮೂಲಕ ರೈತರ ಹಿತ ಕಾಯಬೇಕೆಂಬುದು ನಮ್ಮೆಲ್ಲರ ಬಯಕೆ. ಆದರೆ ಸರಿಯಾಗಿ ಮಳೆಯಾಗಿಲ್ಲ. ಕಬಿನಿ ಜಲಾಶಯಕ್ಕೆ ನೀರು ಹರಿದು ಬರುವ ಪ್ರದೇಶದಲ್ಲಿ ಕಳೆದ ಜೂನ್‌ನಿಂದ ಈವರೆಗಿನ ವಾಡಿಕೆ ಮಳೆಯಲ್ಲಿ ಶೇ.52ರಷ್ಟು ಕೊರತೆಯಾಗಿದೆ. ಕಳೆದ ವರ್ಷ ಶೇ.9ರಷ್ಟು ಮಾತ್ರ ಕೊರತೆಯಾಗಿತ್ತು. ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡುವುದು ಅನಿವಾರ್ಯ. ಹಾಗಾಗಿ ಜಲಾಶಯದಲ್ಲಿರುವ ನೀರು, ಒಳಹರಿವಿನ ಪ್ರಮಾಣ ಹಾಗೂ ಕುಡಿಯುವ ನೀರಿಗೆ ಬಳಸುವ ನೀರಿನ ಪ್ರಮಾಣ ಅವಲೋಕಿಸಿ, ಸದ್ಯದ ಪರಿಸ್ಥಿತಿಯಲ್ಲಿ ಕಟ್ಟು ನೀರು ಪದ್ಧತಿಯಲ್ಲಿ ನಾಲೆಗಳಲ್ಲಿ ನಿರಂತರವಾಗಿ ನೀರು ಹರಿಸುವುದು ಕಷ್ಟ, ಹಾಗಾಗಿ ಕಟ್ಟು ನೀರು ಪದ್ಧತಿಯಲ್ಲಿ ನೀರು ಒದಗಿಸಲು ನಿರ್ಧರಿಸಲಾಗಿದ್ದು, ಇದಕ್ಕೆ ರೈತರು ಸಹಕರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದರು.

45 ದಿನ ನೀರು ಕೊಡಿ: ಸಭೆಗೆ ಮುನ್ನ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿಯಾದ ರೈತ ಮುಖಂಡರು, ಕೃಷಿ ಇಲಾಖೆಯಿಂದ ಈಗಾಗಲೇ ಭತ್ತದ ಬಿತ್ತನೆ ಬೀಜ ವಿತರಿಸಲಾಗಿದ್ದು, ರೈತರು ವ್ಯವಸಾಯಕ್ಕೆ ಸಜ್ಜಾಗಿದ್ದಾರೆ. ಮುಂಗಾರು ಬೆಳೆ ತುಂಬಾ ಮುಖ್ಯ. ಇದು ಕೈಕೊಟ್ಟರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಹಾಗಾಗಿ ಭತ್ತ ಬೆಳೆಯಲು ನಿರಂತರವಾಗಿ 45 ದಿನ ನೀರು ಹರಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಧ್ವನಿಗೂಡಿಸಿದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರೈತರು ಭತ್ತ ಬೆಳೆಯದಿದ್ದರೆ ಮುಂದಿನ ದಿನಗಳಲ್ಲಿ ಅಕ್ಕಿಗೆ ಭಾರೀ ಕೊರತೆಯಾಗುತ್ತದೆ. ಹಾಗಾಗಿ 40 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತ ಬೆಳೆಯಲು ನೀರು ಕಲ್ಪಿಸಿ ಎಂದರು.

ನಮ್ಮ ರೈತರು ಮೊದಲು: ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಸದ್ಯದ ಪರಿಸ್ಥಿತಿಗೆ ಅನುಗುಣವಾಗಿ ನೀರಾವರಿ ಸಲಹಾ ಸಮಿತಿಯ ನಿರ್ಧಾರವನ್ನು ಒಪ್ಪುವುದು ಅನಿವಾರ್ಯ. ಆದರೆ ತಮಿಳುನಾಡಿಗೆ ನೀರು ಹರಿಸುವುದಕ್ಕಿಂತ ನಮ್ಮ ರೈತರಿಗೆ ನೀರು ಕೊಡುವುದು ಆದ್ಯತೆಯಾಗಿರಬೇಕು. ಈಗಾಗಲೇ ಭತ್ತದ ಬಿತ್ತನೆ ಬೀಜ ವಿತರಿಸಲಾಗಿದೆ. ಬಹುತೇಕ ರೈತರು ಜ್ಯೋತಿ ಭತ್ತ ಬೆಳೆಯಲು ಸಿದ್ಧರಾಗಿದ್ದಾರೆ. ನಾಲೆಗೆ ನೀರು ಬಿಡುವಂತೆ ಒತ್ತಾಯಿಸಿದ್ದಾರೆ. ಈ ಬಗ್ಗೆ ನೀರಾವರಿ ಸಲಹಾ ಸಮಿತಿಯಲ್ಲಿ ತೀರ್ಮಾನಿಸಲಾಗುವುದು ಎಂದು ಸಮಾಧಾನಪಡಿಸಿದ್ದರಿಂದ ಪ್ರತಿಭಟನೆ ನಡೆಸಲಿಲ್ಲ. ನೀರು ಕೊಡದಿದ್ದರೆ ನಾವು ಉತ್ತರ ಕೊಡಬೇಕಾಗುತ್ತದೆ. ಕೊಳ್ಳೇಗಾಲ ಭಾಗದಲ್ಲಿ ನೀರಾವರಿ ಇಲಾಖೆಯ ಹಲವು ಹುದ್ದೆಗಳು ಖಾಲಿಯಿದ್ದು, ಸಮರ್ಪಕವಾಗಿ ಕಾರ್ಯ ನಿರ್ವಹಣೆ ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.

ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ಹನೂರು ಶಾಸಕ ಎಂ.ಆರ್.ಮಂಜುನಾಥ್, ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ, ನಾಲೆಗಳ ಹೂಳು ತೆಗೆದು ಸೂಕ್ತ ನಿರ್ವಹಣೆ ಮಾಡಲಾಗುತ್ತಿಲ್ಲ. ನೀರು ಒದಗಿಸುವಲ್ಲಿಯೂ ಸಮರ್ಪಕ ನಿರ್ವಹಣೆ ಇಲ್ಲ. ಕೆರೆಗಳಿಗೆ ನೀರು ಹರಿಸಲಾಗಿದೆ ಎನ್ನುತ್ತಾರೆ ಆದರೆ ಕೆರೆಯಲ್ಲಿ ನೀರು ಹೆಚ್ಚಿಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ನೀರು ನಿರ್ವಹಣೆ ತುಂಬಾ ಮುಖ್ಯ. ಕೊನೆವರೆಗೂ ನೀರು ತಲುಪಿಸಬೇಕು. ಅಗತ್ಯವಿದ್ದರೆ ಪೊಲೀಸರ ಸಹಕಾರ ಪಡೆಯಿರಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ಶೇ.45ರಷ್ಟು ಮಾತ್ರವೇ ಬಿತ್ತನೆಯಾಗಿದೆ. ನೀರಿಗಾಗಿ ರೈತರು ಕಾಯುತ್ತಿದ್ದಾರೆ. ಸರಣಿ ಪ್ರತಿಭಟನೆಗಳೂ ನಡೆಯುತ್ತಿವೆ ಎಂದರು. ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲೆಯ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದರಲ್ಲದೆ, ಭತ್ತದ ಬದಲು ಅರೆ ನೀರಾವರಿಗೆ ಹೊಂದುವ ಪರ್ಯಾಯ ಬೆಳೆಗೆ ರೈತರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ನೀರಾವರಿ ಇಲಾಖೆ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ಆರ್.ಎಲ್.ವೆಂಕಟೇಶ್, ಕಬಿನಿ ಮತ್ತು ವರುಣ ನಾಲಾ ವೃತ್ತದ ಅಧೀಕ್ಷಕ ಇಂಜಿನಿಯರ್ ಶಿವಮಹದೇವಯ್ಯ ಸಭೆಗೆ ಅಗತ್ಯ ಮಾಹಿತಿ ನೀಡಿದರು. ನೀರಾವರಿ ಸಲಹಾ ಸಮಿತಿ ಸದಸ್ಯರು, ಇಲಾಖೆಯ ಹಲವು ಅಧಿಕಾರಿಗಳು ಸಭೆಯಲ್ಲಿದ್ದರು.



ಕಬಿನಿ ನೀರಾವರಿ ಸಲಹಾ ಸಮಿತಿ ಸಭೆಗೆ ಮುನ್ನ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ರೈತರ ಅಹವಾಲು ಆಲಿಸಿದರು. ಶಾಸಕರಾದ ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಸಿ.ಎನ್.ಮಂಜೇಗೌಡ ಚಿತ್ರದಲ್ಲಿದ್ದಾರೆ.

ಕಬಿನಿ ಜಲಾಶಯದ ಸದ್ಯದ ಪರಿಸ್ಥಿತಿ

ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಸದ್ಯ 2281 ಅಡಿ ನೀರಿದೆ. ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 19.516 ಟಿಎಂಸಿ. ಇದರಲ್ಲಿ ಉಪಯುಕ್ತ ಸಂಗ್ರಹಣಾ ಸಾಮರ್ಥ್ಯವು 9.71 ಟಿಎಂಸಿ. ಶನಿವಾರದವರೆಗೆ ಒಟ್ಟಾರೆ 18.04 ಟಿಎಂಸಿ ಸಂಗ್ರಹವಿದೆ. ಈಗಾಗಲೇ ಕೆರೆಕಟ್ಟೆಗಳನ್ನು ತುಂಬಿಸಲು ನಿತ್ಯ 1,500 ಕ್ಯುಸೆಕ್‌ನಂತೆ 1.29 ಟಿಎಂಸಿ ನೀರು ಹರಿಸಲಾಗಿದೆ. ಈ ಜಲಾಶಯದಿಂದ 1.08 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬೇಕಾಗಿದೆ. ಕಬಿನಿ ಬಲ ಹಾಗೂ ಎಡದಂಡೆ ನಾಲೆಗಳಲ್ಲಿ 2,390 ಕ್ಯುಸೆಕ್ ಹಾಗೂ ಕುಡಿಯುವ ಮತ್ತು ಅಣೆಕಟ್ಟು ನಾಲೆಗೆ 900 ಕ್ಯುಸೆಕ್‌ನಂತೆ 120 ದಿನಗಳವರೆಗೆ ಹರಿಸಲು 30 ಟಿಎಂಸಿ ನೀರು ಅಗತ್ಯವಿದೆ. ಕಾವೇರಿ ನ್ಯಾಯಾಧೀಕರಣ ಅಂತಿಮ ತೀರ್ಪಿನಂತೆ ಕಬಿನಿ ನಾಲೆಗಳಿಗೆ 11.99 ಟಿಎಂಸಿ ಹಾಗೂ ಅಣೆಕಟ್ಟು ನಾಲೆಗಳಿಗೆ 2.86 ಟಿಎಂಸಿ ಸೇರಿ ಒಟ್ಟು 14.85 ಟಿಎಂಸಿ ಹಂಚಿಕೆಯಾಗಿದೆ. ಪ್ರಸ್ತುತ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಕುಂಠಿತವಾಗಿದ್ದು, ಸಂಗ್ರಹ ಪ್ರಮಾಣವೂ ಗಣನೀಯವಾಗಿ ಕಡಿಮೆಯಾಗುತ್ತಿದೆ. ಪ್ರಸಕ್ತ ತಿಂಗಳಿಂದ ಬೆಂಗಳೂರು, ಮೈಸೂರು ಹಾಗೂ ಇತರೆ ತಾಲೂಕು ವ್ಯಾಪ್ತಿಗೆ ಕುಡಿಯುವ ನೀರು ಆದ್ಯತೆಗೆ 6.13 ಟಿಎಂಸಿ ನೀರು ನೀಡಬೇಕಿದೆ. ಈಗಿನ ಪರಿಸ್ಥಿತಿಯಲ್ಲಿ ಕಟ್ಟು ನೀರು ಪದ್ಧತಿಯಡಿ ಅಕ್ಟೋಬರ್‌ವರೆಗೆ ಕಾಲುವೆಗಳಿಗೆ ನೀರು ಹರಿಸಬಹುದು ಎಂದು ಕಬಿನಿ–ವರುಣ ನಾಲಾ ವೃತ್ತದ ಅಧೀಕ್ಷಕ ಇಂಜಿನಿಯರ್ ಮಾಹಿತಿ ನೀಡಿದರು.

ಆ.17ರಿಂದ ಮೂರು ದಿನ ಮೈಸೂರಲ್ಲಿ ಬೃಹತ್ ರಕ್ತದಾನ ಶಿಬಿರ

ಮೈಸೂರು, ಆ.12– ಮೈಸೂರಿನ ವಿವಿಧ ಸ್ಥಳಗಳಲ್ಲಿ ಆ.17ರಿಂದ 3 ದಿನ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್, ರೋಟರಿ ಕ್ಲಬ್ ಆಫ್ ವಿಜಯನಗರ, ರೋಟರಿ ಮೈಸೂರು ಹಾಗೂ ಜಿಎಸ್‌ಎಸ್ ಯೋಗ ಫೌಂಡೇಷನ್ ಸಹಯೋಗದಲ್ಲಿ ಅಮೂಲ್ಯ ಜೀವ ರಕ್ಷಣೆಗಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆ.17ರಂದು ಮೈಸೂರಿನ ಇನ್ಫೋಸಿಸ್ ಆವರಣ, ಆ.18ರಂದು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಪತ್ರಿಕೋದ್ಯಮ ವಿಭಾಗ ಹಾಗೂ ಎಟಿಎಂಇ ಕಾಲೇಜು ಆವರಣ, ಆ.19ರಂದು ಐಡಿಯಲ್ ಜಾವಾ ರೋಟರಿ ಶಾಲೆ, ವಿಜಯನಗರದ ಎನ್‌ಪಿಎಸ್ ಇಂಟರ್‌ನ್ಯಾಷನಲ್, ಅಶೋಕ ರಸ್ತೆಯ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ಲಾಂಟ್ ಪ್ಲಾನೆಟ್ ಕ್ಲಬ್ ಆಫ್ ಡಾಸ್‌ನ ಸಸ್ಯಶಾಸ್ತ್ರ ವಿಭಾಗ, ಕುವೆಂಪುನಗರದ ಜಿಎಸ್‌ಎಸ್ ಕಚೇರಿ, ಬಿಲ್ಡರ್ಸ್ ಅಸೋಸಿಯೇಷನ್ ಕಚೇರಿ, ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಎಸ್‌ಡಿಎಂ–ಐಎಂಡಿ ಕಚೇರಿಯಲ್ಲಿ ರಕ್ತದಾನ ಶಿಬಿರ ನಡೆಯಲಿದೆ. ಅಮೂಲ್ಯವಾದ ಜೀವ ಉಳಿಸಲು ರಕ್ತದ ಅವಶ್ಯಕತೆ ತುಂಬಾ ಇದೆ. ಆರೋಗ್ಯವಂತರಾಗಿರುವ ಎಲ್ಲರೂ ರಕ್ತದಾನ ಮಾಡಬಹುದು. ಯುವಕರು ಸೇರಿದಂತೆ ಸಾರ್ವಜನಿಕರು ಶಿಬಿರದಲ್ಲಿ ಪಾಲ್ಗೊಂಡು, ರಕ್ತದಾನ ಮಾಡುವ ಮೂಲಕ ಜೀವ ರಕ್ಷಣೆಗೆ ನೆರವಾಗಬೇಕು ಎಂದು ಜಿಎಸ್‌ಎಸ್ ಯೋಗ ಫೌಂಡೇಷನ್‌ನ ಅಧ್ಯಕ್ಷ ಶ್ರೀಹರಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಜಾನುವಾರುಗಳ ಸಾಗಣೆ ತಾತ್ಕಾಲಿಕ ನಿಷೇಧ

ಮೈಸೂರು,ಆ.12– ಕೇರಳ ರಾಜ್ಯದಲ್ಲಿ ಜಾನುವಾರುಗಳಿಗೆ ಕಾಲುಬಾಯಿ ಜ್ವರ ರೋಗೋದ್ರೇಕ ಕಾಣಿಸಿಕೊಂಡಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಕೇರಳ ರಾಜ್ಯದಿಂದ ಜಿಲ್ಲೆಯ ಗಡಿ ಭಾಗದ ಮೂಲಕ ಬರುವ, ಜಾನುವಾರುಗಳ ಸಾಗಣೆಯನ್ನು ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ನಿಷೇಧಿಸಲಾಗಿದೆ.

ವಿವಿಧ ಸೇವಾ ಕಾರ್ಯಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯರ ಜನ್ಮದಿನದ ಅರ್ಥಪೂರ್ಣ ಆಚರಣೆ



ಮಾರಶೆಟ್ಟಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಸ್ಕೂಲ್ ಬ್ಯಾಗ್ ಹಾಗೂ ಪುಸ್ತಕಗಳನ್ನು ವಿತರಣೆ ಮಾಡಲಾಯಿತು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಕೃಷ್ಣಕುಮಾರ್ ಸಾಗರ್ ನೇತೃತ್ವದಲ್ಲಿ ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿ 101 ತೆಂಗಿನ ಕಾಯಿ ಒಡೆಯಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಕೊಪ್ಪಲ್ ರಾಜಣ್ಣ, ಬಂಡೀಪಾಳ್ಯ ಸಂಜುಕುಮಾರ್, ಎಸ್. ಶಂಕರ್, ರಮೇಶ್, ಮಣಿ, ಪುನೀತ್, ಕುಮಾರ, ಲೋಕೇಶ್, ರಾಜಶೇಖರ್, ರಾಜಣ್ಣ, ಉಮೇಶ್ ಇನ್ನಿತರರಿದ್ದರು.



ನಂಜನಗೂಡು ತಾಲೂಕು ಬದನವಾಳು ಗ್ರಾಮದಲ್ಲಿ ಶನಿವಾರ ಖಾದಿ ಗ್ರಾಮೋದ್ಯೋಗ ಕೇಂದ್ರ ಮಹಿಳಾ ಕಾರ್ಮಿಕರಿಗೆ ಸೀರೆಗಳನ್ನು ವಿತರಣೆ ಮಾಡಲಾಯಿತು.

ಮೈಸೂರು,ಆ.12(ಪಿಎಂ)– ವರುಣಾ ಮಹೇಶ್ ಅಭಿಮಾನಿಗಳ ಬಳಗದ ವತಿಯಿಂದ ವಿವಿಧ ಸೇವಾ ಕಾರ್ಯಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರ 76ನೇ ಜನ್ಮದಿನವನ್ನು ಶನಿವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮಾರಶೆಟ್ಟಿಹಳ್ಳಿ ಗ್ರಾಮದ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಸ್ಕೂಲ್ ಬ್ಯಾಗ್ ಮತ್ತು ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಬಳಿಕ ಗೌರಿಶಂಕರನಗರದಲ್ಲಿ ಸಾರ್ವಜನಿಕರಿಗೆ ಬೆಡ್‌ಶೀಟ್‌ಗಳನ್ನು ವಿತರಿಸಲಾಯಿತು. ನಂತರ ಬೋಗಯ್ಯನಹುಂಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸ್ಕೂಲ್ ಬ್ಯಾಗ್ ಮತ್ತು ಪುಸ್ತಕಗಳನ್ನು ವಿತರಣೆ ಮಾಡಲಾಯಿತು.


ನಂತರ ನಂಜನಗೂಡು ತಾಲೂಕಿನ ಬದನವಾಳು ಗ್ರಾಮದಲ್ಲಿ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಇಲ್ಲಿನ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಬಳಿಕ ಕೇಂದ್ರ ಮಹಿಳಾ ಕಾರ್ಮಿಕರಿಗೆ ಸೀರೆಗಳನ್ನು ವಿತರಿಸಲಾಯಿತು.

ಇದೇ ವೇಳೆ ಮಾತನಾಡಿದ ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ರಾಜ್ಯ ಕಂಡ ಧೀಮಂತ ನಾಯಕರು. ಬಡವರು, ದೀನ ದಲಿತರು ಹಾಗೂ ಶೋಷಿತರ ಬಗ್ಗೆ ಅತೀವ ಕಳಕಳಿ ಹೊಂದಿರುವ ಸಿದ್ದರಾಮಯ್ಯನವರ 76ನೇ ಜನ್ಮದಿನದ ಪ್ರಯುಕ್ತ ಶನಿವಾರ ಹಲವು ಸೇವಾ ಕಾರ್ಯಕ್ರಮಗಳನ್ನು ಮಾಡಿದ್ದೇವೆ ಎಂದು ಹೇಳಿದರು.

ಅವರಿಗೆ ತಾಯಿ ಚಾಮುಂಡೇಶ್ವರಿ ದೀರ್ಘಾಯಸ್ಸು ಮತ್ತು ಆರೋಗ್ಯ ನೀಡಲಿ. ಜೊತೆಗೆ ರಾಜ್ಯದ ಅಭಿವೃದ್ಧಿ ಹಾಗೂ ನಾಡಿನ ಜನತೆಯ ಶ್ರೇಯೋಭಿವೃದ್ಧಿಗೆ ಅವರು ಇನ್ನು ಹೆಚ್ಚಿನ ಕಲಸ ಮಾಡುವ ಶಕ್ತಿಯನ್ನೂ ನೀಡಲಿ ಎಂದು ಪ್ರಾರ್ಥಿಸುವುದಾಗಿ ವರುಣಾ ಮಹೇಶ್ ಹೇಳಿದರು.

ಭಾರತ್ ಜೋಡೋ ಯಾತ್ರೆ ವೇಳೆ ಈ ಗ್ರಾಮಕ್ಕೆ ರಾಹುಲ್ ಗಾಂಧಿಯವರು ಭೇಟಿ ನೀಡಿದ್ದರು. ಆಗ ಸಿದ್ದರಾಮಯ್ಯನವರೂ ಜೊತೆಗೆ ಬಂದಿದ್ದರು. ಇದೇ ವೇಳೆ ತಾವು ಮುಖ್ಯಮಂತ್ರಿ ಆದಲ್ಲಿ ಈ ಬದನವಾಳು ಗ್ರಾಮದ ಖಾದಿ ಕೇಂದ್ರಕ್ಕೆ ಮತ್ತೆ ಎರಡು ಸೊಸೈಟಿ ರಚಿಸಿ, ಎರಡು ಕೋಟಿ ರೂ. ಅನುದಾನ ಕಲ್ಪಿಸುತ್ತೇನೆ ಎಂದು ಸಿದ್ದರಾಮಯ್ಯನವರು ಭರವಸೆ ನೀಡಿದ್ದರೆಂದು ಇಲ್ಲಿನ ಮಹಿಳಾ ಕಾರ್ಮಿಕರು ಇದೀಗ ತಿಳಿಸಿದರು. ಈ ಭರವಸೆಯನ್ನು ಆದಷ್ಟು ಶೀಘ್ರದಲ್ಲಿ ಈಡೇರಿಸಬೇಕೆಂದು ಅವರಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮಾರಶೆಟ್ಟಿಹಳ್ಳಿ ರಂಗಪ್ಪ, ರವಿ (ಕಾಳಿ), ಕುಮಾರ್, ಶಿವಣ್ಣ, ಹನುಮನಪುರ ಮಧು, ಅಂಕುಶಯಪುರ ಮಾದಪ್ಪ, ಕಲ್ಕುಂದ ರತ್ನಶೇಖರ್, ಕುಪ್ಪರವಳ್ಳಿ ಚಂದ್ರು, ಭೋಗಯ್ಯನಹುಂಡಿ ಬಸವರಾಜು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಇತ್ತೀಚೆಗೆ ಮೈಸೂರಿಗೆ ಆಗಮಿಸಿದ್ದ ಕ್ರೀಡಾ ಸಚಿವ ಬಿ.ನಾಗೇಂದ್ರ ಅವರು ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ ಅವರ ಮನೆಗೆ ಭೇಟಿ ನೀಡಿದ್ದರು. ಈ ವೇಳೆ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು, ಎಸ್.ಸಿ. ಬಸವರಾಜು, ಚಿಕ್ಕವೀರ ನಾಯಕ, ಜಿಪಂ ಮಾಜಿ ಸದಸ್ಯರಾದ ಮಂಜುನಾಥ, ದ್ಯಾವಪ್ಪ ನಾಯಕ, ರಾಹುಲ್, ರಘು ಇನ್ನಿತರರಿದ್ದರು.

ಹಸಿರು ನಮ್ಮ ಉಸಿರು

2ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಪತ್ನಿ, ವನಜಾಕ್ಷಿ, ಮಗಳು–ಅಳಿಯ ಮೊಮ್ಮಕ್ಕಳು ಮತ್ತು ಸಹೋದರರು, ಗೌರಿಶಂಕರ ನಗರ, ಮೈಸೂರು

ಶ್ರೀ ವಿ.ನಾಗರಾಜುರವರು

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ಶ್ರೀ ನಿಂಗಪ್ಪನವರು

ನಿಧನ : 13.08.2020

ದುಃಖತಪ್ತರು: ಕುಟುಂಬವರ್ಗ

10ನೇ ವರ್ಷದ ಸವಿನೆನಪು



ವಿ. ಮುರುಳಿ

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಕುಟುಂಬವರ್ಗದವರು

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪ ನಿರ್ದೇಶಕರ ಕಾರ್ಯಾಲಯ, ನಗರ ಕೇಂದ್ರ ಗ್ರಂಥಾಲಯ, ಮಲೆ ಮಹದೇಶ್ವರ ರಸ್ತೆ, ಪೀಪಲ್ಸ್ ಪಾರ್ಕ್ ಮೈಸೂರು–570 001. ದೂರವಾಣಿ: 2423678, 2430343, ಇಮೇಲ್:ddcclmys@gmail.com

ಸಂ.ನಕೇಗ್ರಂ.ಮೈ/ತಾ.ವಿ–1/ಕು.ಸಂ.ಗ್ರಂ.ವಾ.ಕ/01/2023–24 ದಿನಾಂಕ:10.08.2023

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000 ರನ್ವಯ ಸರ್ಕಾರದಿಂದ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಯವರು 2023–24ನೇ ಸಾಲಿಗೆ ಈ ಕಚೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರನ್ನು ಒದಗಿಸಲು ಕೆಪಿಪಿ ಪೋರ್ಟಲ್ **https://kppp.karnataka.gov.in** ವೆಬ್‌ಸೈಟ್ ಮುಖಾಂತರ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಹಾಗೂ ಟೆಂಡರ್‌ಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಈ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಮತ್ತು ಈ ಕಚೇರಿಯಲ್ಲಿ ಪಡೆಯಬಹುದು.

ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ. 1. ಟೆಂಡರ್ ಕರೆದ ವಿವರ: ಹೊರಗುತ್ತಿಗೆ ಆಧಾರದ ಮೇಲೆ ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರನ್ನು ಪೂರೈಸುವ ಕುರಿತು. 2. ಟೆಂಡರ್‌ನಲ್ಲಿ ಕಾಯ್ದಿರಿಸಲಾಗಿರುವ ಅಂದಾಜು ಮೊತ್ತ **ರೂ.2,75,000.00**. 3. ಇ.ಎಂ.ಡಿ ಮೊತ್ತ **ರೂ.7,000.00**. 4. ಇ–ಟೆಂಡರ್‌ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ ಮತ್ತು ಸಮಯ **10.08.2023** ಸಂಜೆ 5–00 ರಿಂದ. 5. ಇ–ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ಸಂಬಂಧಿತ ಕುಂದು–ಕೊರತೆ ವಿಚಾರಿಸಲು ದಿನಾಂಕ ಮತ್ತು ಸಮಯ **08.09.2023** ಸಂಜೆ 5–30 ಗಂಟೆಯ ವರೆಗೆ. 6. ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ **11.09.2023** ಸಂಜೆ 5–00 ಗಂಟೆಯ ವರೆಗೆ. 7. ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **13.09.2023** ಬೆಳಿಗ್ಗೆ 11.00 ಗಂಟೆಗೆ. 8. ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **15.09.2023** ಬೆಳಿಗ್ಗೆ 11.00 ಗಂಟೆಗೆ.

ಸಹಿ/– ಉಪ ನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಮೈಸೂರು

DIPR/MYS/KAVITA/197/2023-24

ಹಾರಂಗಿ ಸಾಕಾನೆ ಶಿಬಿರದಲ್ಲಿ ಪ್ರಥಮ ಬಾರಿಗೆ ವಿಶ್ವ ಆನೆ ದಿನಾಚರಣೆ

ಆನೆಗಳ ಸಂರಕ್ಷಣೆಗೆ ವಿಶೇಷ ಕಾಳಜಿ ಅಗತ್ಯ



ಕುಶಾಲನಗರ, ಆ.12– ಪರಿಸರ ಸಂರಕ್ಷಣೆಯಂತೆ ಆನೆಗಳ ಸಂರಕ್ಷಣೆ ಕೂಡ ಆಗಬೇಕು. ಈ ನಿಟ್ಟಿನಲ್ಲಿ ಆನೆ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ಡಿಎಫ್‌ಒ ಎ.ಟಿ.ಪೂವಯ್ಯ ತಿಳಿಸಿದರು.

ಸಮೀಪದ ಹಾರಂಗಿ ಸಾಕಾನೆ ಶಿಬಿರದಲ್ಲಿ ಅರಣ್ಯ ಇಲಾಖೆ ವತಿಯಿಂದ ಶನಿವಾರ ಏರ್ಪಡಿಸಿದ್ದ ವಿಶ್ವ ಆನೆ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯ ಪ್ರಮುಖ ಪ್ರವಾಸಿ ಕೇಂದ್ರ ದುಬಾರೆಯಲ್ಲಿ ಕಳೆದ ಅನೇಕ ವರ್ಷಗಳಿಂದ ವಿಶ್ವ ಆನೆ ದಿನಾಚರಣೆ ಆಚರಿಸಿಕೊಂಡು ಬರಲಾಗುತ್ತಿತ್ತು. ಇದೀಗ ಹೊಸ ಶಿಬಿರ ಹಾರಂಗಿಯಲ್ಲಿ ಇದೇ ಪ್ರಥಮ ಬಾರಿಗೆ ಆನೆ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಕೊಡಗಿನಲ್ಲಿ ಆನೆ–ಮಾನವ ಸಂಘರ್ಷದ ಕಾರಣ ಹಲವರು ಆನೆಗಳ ಬಗ್ಗೆ ದ್ವೇಷ ಹೊಂದಿರುವುದು ಸಹಜ. ಆದರೆ ಇತರೆ ವನ್ಯಜೀವಿಗಳಂತೆ ಆನೆಗಳು ಕೂಡ ಪರಿಸರದ ಅವಿಭಾಜ್ಯ ಅಂಗವಾಗಿದ್ದು, ಆನೆಗಳ ಸಂರಕ್ಷಣೆಗೆ ಪ್ರತಿಯೊಬ್ಬರೂ ವಿಶೇಷ ಕಾಳಜಿ ವಹಿಸಬೇಕು ಎಂದು ಮನವಿ ಮಾಡಿದರು.

ಹಾರಂಗಿ ಶಿಬಿರದಲ್ಲಿ ಪ್ರವಾಸಿಗರು, ಮಾವುತರು, ಕಾವಾಡಿಗರಿಗೆ ಹೆಚ್ಚಿನ ಮೂಲಭೂತ ಸೌಲಭ್ಯ ಕಲ್ಪಿಸುವುದರೊಂದಿಗೆ ಶಿಬಿರಕ್ಕೆ ಮತ್ತಷ್ಟು ಆನೆಗಳನ್ನು ತಂದು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೂಡುಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ್ ನಾಯಕ್ ಮಾತನಾಡಿ, ಹಾರಂಗಿ ಶಿಬಿರವನ್ನು ಮತ್ತಷ್ಟು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಯೋಜನೆಗಳನ್ನು ರೂಪಿಸಬೇಕಿದೆ ಎಂದು ಆಗ್ರಹಿಸಿದರು.

ಆನೆ ದಿನಾಚರಣೆ: ತಾಲೂಕಿನ ಹಾರಂಗಿ ಸಾಕಾನೆ ಶಿಬಿರದಲ್ಲಿ ಅರಣ್ಯ ಇಲಾಖೆಯಿಂದ ವಿಶ್ವ ಆನೆ ದಿನಾಚರಣೆ ಆಚರಿಸಲಾಯಿತು. ಶಿಬಿರದ ಸಾಕಾನೆಗಳಿಗೆ ಪೂಜೆ ಸಲ್ಲಿಸಿ ಬೆಲ್ಲ, ಕಬ್ಬು, ಹಲಸು, ಸಿಹಿಗೆಣಸು, ಬಾಳೆ ದಿಂಡು, ಕುಂಬಳಕಾಯಿ, ಸೌತೆಕಾಯಿ ಮತ್ತಿತರ ಹಣ್ಣು ಹಂಪಲುಗಳನ್ನು ತಿನ್ನಿಸಲಾಯಿತು.

ದಿನದ ಅಂಗವಾಗಿ ಶಿಬಿರದ ಸಾಕಾನೆಗಳಾದ ಕರ್ಣ, ಸುಬ್ರಹ್ಮಣ್ಯ, ರಾಮ, ಈಶ್ವರ, ಲಕ್ಷ್ಮಣ, ವಿಕ್ರಂ, ಏಕದಂತ ಆನೆಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಶಿಬಿರಕ್ಕೆ ಆಗಮಿಸಿದ್ದ ಪ್ರವಾಸಿಗರು ಮಹಿಳೆಯರು, ಮಕ್ಕಳಾದಿಯಾಗಿ ಸಾಕಾನೆಗಳಿಗೆ ತಿನಿಸು ನೀಡಿ ಸಂಭ್ರಮಿಸಿದರು. ಇವರೊಂದಿಗೆ ಕೂಡಿಗೆ ಸೈನಿಕ ಶಾಲೆಯ ವಿದ್ಯಾರ್ಥಿಗಳು ಕೂಡ ಪಾಲ್ಗೊಂಡು ಆನೆಗಳಿಗೆ ತಿನಿಸು ನೀಡಿದರು.

ವನ್ಯಜೀವಿ ತಜ್ಞ ಡಾ.ಚಿಟ್ಟಿಯಪ್ಪ ಅವರು ಸೈನಿಕ ಶಾಲಾ ವಿದ್ಯಾರ್ಥಿಗಳಿಗೆ ಆನೆ ದಿನಾಚರಣೆ ಮತ್ತು ಆನೆಗಳ ಬಗ್ಗೆ ಮಾಹಿತಿ ಒದಗಿಸಿದರು. ಈ ಸಂದರ್ಭ ಕೂಡುಮಂಗಳೂರು ಗ್ರಾಮ ಪಂಚಾಯತಿ ಸದಸ್ಯ ಮಣಿಕಂಠ, ಗುಡ್ಡೆಹೊಸೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ರುಕ್ಮಿಣಿ, ಉಪಾಧ್ಯಕ್ಷ ಮಾದಪ್ಪ, ಸೋಮವಾರಪೇಟೆ ಎಸಿಎಫ್ ಗೋಪಾಲ್, ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್, ತಲಕಾವೇರಿ ವನ್ಯಜೀವಿ ಅರಣ್ಯ ವಿಭಾಗ ವಲಯ ಅರಣ್ಯಾಧಿಕಾರಿ ಕೊಟ್ರೇಶ್, ಪುಷ್ಪಗಿರಿ ವನ್ಯಜೀವಿ ಅರಣ್ಯ ವಿಭಾಗದ ವಲಯ ಅರಣ್ಯಾಧಿಕಾರಿ ವಿಮಲ್ ಬಾಬು, ಅತ್ತೂರು ಉಪ ವಲಯ ಅರಣ್ಯಾಧಿಕಾರಿ ಅನಿಲ್ ಡಿಸೋಜ, ದುಬಾರೆ ವಿಭಾಗದ ಉಪ ವಲಯ ಅರಣ್ಯಾಧಿಕಾರಿ ರಂಜನ್, ನಿಸರ್ಗಧಾಮದ ವಿಲಾಸ್ ಸೇರಿದಂತೆ ವಿವಿಧ ವಿಭಾಗದ ಅಧಿಕಾರಿ ವರ್ಗದವರು, ಸಿಬ್ಬಂದಿಗಳು ಹಾಜರಿದ್ದರು.

ವಿರಾಜಪೇಟೆ ಹೃದಯ ಭಾಗದಲ್ಲಿರುವ ತುಳಸಿ ಮಾರಿಯಮ್ಮ ದೇವಸ್ಥಾನದಲ್ಲಿ ಹುಂಡಿ ಕಳವು



ವಿರಾಜಪೇಟೆ,ಆ.12– ವಿರಾಜಪೇಟೆ ನಗರದ ಹೃದಯ ಭಾಗದಲ್ಲಿರುವ ತುಳಸಿ ಮಾರಿಯಮ್ಮ ದೇವಾಲಯ ಹುಂಡಿ ಒಡೆದು ಕಳ್ಳತನ ಮಾಡಿರುವ ಘಟನೆ ನಡೆದಿದೆ.

ಈ ಕುರಿತು ದೇವಾಲಯ ಆಡಳಿತ ಮಂಡಳಿ ವಿರಾಜಪೇಟೆ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಹುಂಡಿಯಿಂದ ಅಂದಾಜು ಸುಮಾರು 30 ಸಾವಿರ ನಗದು ಕಳ್ಳತನ ಮಾಡಲಾಗಿದೆ ಎಂದು ದೇವಾಲಯ ಆಡಳಿತ ಮಂಡಳಿ ತಿಳಿಸಿದೆ.

ಘಟನಾ ಸ್ಥಳಕ್ಕೆ ಶ್ವಾನ ದಳ ಆಗಮಿಸಿ ಕಳ್ಳರ ಜಾಡು ಪತ್ತೆಗೆ ಮುಂದಾಗಿದ್ದು, ಶ್ವಾನಗಳು ದೇವಾಲಯ ಸುತ್ತಲೂ ಓಡಾಡಿವೆ. ವಿರಾಜಪೇಟೆ ನಗರದ ಖಾಸಗಿ ಬಸ್ ನಿಲ್ದಾಣ ಸಮೀಪ ಪೌರಕಾರ್ಮಿಕರ ವಸತಿ ನಿಲಯಗಳಿದ್ದು, ಅಲ್ಲಿಯೇ ತುಳಸಿ ಮಾರಿಯಮ್ಮ ದೇವಾಲಯವಿದೆ. ದಿನದ ಬಹುತೇಕ ಸಮಯ ಈ ರಸ್ತೆಯಲ್ಲಿ ಜನ ಮತ್ತು ವಾಹನ ಸಂಚಾರವಿದ್ದು, ಯಾವ ಸಮಯದಲ್ಲಿ ಕಳ್ಳರು ತಮ್ಮ ಕೈಚಳಕ ತೋರಿದ್ದಾರೆ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದು, ಕಳ್ಳರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ರಾಜ್ಯಮಟ್ಟದ ಕೆಸರು ಗದ್ದೆ ಕ್ರೀಡಾಕೂಟ

ವಾಲಿಬಾಲ್, ಹಗ್ಗಜಗ್ಗಾಟ, ಥ್ರೋ ಬಾಲ್ ಆಡಿ ಗಮನ ಸೆಳೆದ ಸ್ಪರ್ಧಿಗಳು



ಮಡಿಕೇರಿ,ಆ.12– ರಾಜ್ಯ ಮಟ್ಟದ ಕೆಸರು ಗದ್ದೆ ಕ್ರೀಡಾಕೂಟ ಕಗ್ಗೋಡ್ಲು ಗ್ರಾಮದಲ್ಲಿ ಅದ್ದೂರಿಯಾಗಿ ನಡೆಯಿತು. ಕಗ್ಗೋಡ್ಲುವಿನ ಸಿ.ಡಿ. ಬೋಪಯ್ಯ ಅವರ ಭತ್ತದ ಗದ್ದೆಯಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಕೊಡಗು ಜಿಲ್ಲಾಡಳಿತ, ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕಗ್ಗೋಡ್ಲು ಗ್ರಾಮ ಪಂಚಾಯಿತಿ ವತಿಯಿಂದ 31ನೇ ವರ್ಷದ ಕೆಸರು ಗದ್ದೆ ಕ್ರೀಡಾಕೂಟವನ್ನು ವ್ಯವಸ್ಥಿತವಾಗಿ ಆಯೋಜಿಸಲಾಗಿತ್ತು.

ಕೆಸರಿನ ಗದ್ದೆಯಲ್ಲಿ ಸಿದ್ದಪಡಿಸಲಾಗಿದ್ದ ತಾತ್ಕಾಲಿಕ ಕೋರ್ಟ್‌ಗಳಲ್ಲಿ ವಾಲಿಬಾಲ್, ಹಗ್ಗಜಗ್ಗಾಟ, ಥ್ರೋ ಬಾಲ್ ಪಂದ್ಯಾವಳಿಗಳಿಗೆ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಚಾಲನೆ ನೀಡಿ ಶುಭ ಹಾರೈಸಿದರು. ಸಾರ್ವಜನಿಕ ಪುರುಷ, ಮಹಿಳೆಯರು, ಶಾಲಾ ಕಾಲೇಜುಗಳ ವಿವಿಧ ವಯೋಮಾನದ ಮಕ್ಕಳು, ಮಹಿಳಾ ಮತ್ತು ಯುವಕ ಸಂಘಗಳ ಸದಸ್ಯರು ಕೆಸರು ಗದ್ದೆ ಓಟ ಸೇರಿದಂತೆ ವಿವಿಧ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಮಡಿಕೇರಿ, ಸೋಮವಾರಪೇಟೆ, ಕೊಡ್ಲಿಪೇಟೆ, ಪೊನ್ನಂಪೇಟೆ, ವಿರಾಜಪೇಟೆ ಸೇರಿದಂತೆ ಹಾಸನ, ಸುಳ್ಯ ತಾಲೂಕುಗಳಿಂದ ಕ್ರೀಡಾಪಟುಗಳು ಮತ್ತು ಕ್ರೀಡಾ ತಂಡಗಳು ರಾಜ್ಯ ಮಟ್ಟದ ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದವು.

ಮಕ್ಕಳ ಸಂಭ್ರಮ: ಸದಾ ಕಾಲ ಶಾಲಾ ಸಮವಸ್ತ್ರಗಳಲ್ಲಿ ಶಾಲಾ ಮೈದಾನಗಳಲ್ಲಿ ಆಟವಾಡುತ್ತಿದ್ದ ಮಕ್ಕಳು ಕೆಸರು ಗದ್ದೆಯಲ್ಲಿ ಮಿಂದೆದ್ದು ಸಂಭ್ರಮಿಸಿದರು. ಕೆಸರಿನ ಗದ್ದೆಯಲ್ಲಿ ಓಡಿ ಅನುಭವ ಇಲ್ಲದಿದ್ದರೂ ಮುಕ್ತ ಓಟ ಸ್ಪರ್ಧೆಯಲ್ಲಿ ಪಾಲ್ಗೊಂಡು ಗುರಿ ಮುಟ್ಟುವ ತವಕದಲ್ಲಿ ಗದ್ದೆ ಮಧ್ಯೆದಲ್ಲೇ ಹಲವಾರು ಮಕ್ಕಳು ಮುಗ್ಗರಿಸಿ ಬಿದ್ದರೆ, ಮತ್ತೆ ಕೆಲವು ಮಕ್ಕಳು ನಿಗಧಿತ ಗುರಿ ಸಾಧಿಸಿದರು. ಕೆಸರಿನ ಗದ್ದೆಯಲ್ಲಿ ಬಿದ್ದೆದ್ದು, ಮಕ್ಕಳು ಸಂಭ್ರಮಿಸುತ್ತಿದ್ದರೆ, ವೀಕ್ಷಕರು ಚಪ್ಪಾಳೆ, ಸೀಟಿ ಹೊಡೆಯುವ ಮೂಲಕ ಮಕ್ಕಳನ್ನು ಪ್ರೋತ್ಸಾಹಿಸಿದರು. ಮಕ್ಕಳ ಓಟದ ಸ್ಪರ್ಧೆ ನೋಡುಗರಿಗೆ ಮುದ ನೀಡಿತು. ವಿವಿಧ ವಯೋಮಾನದ ವಿಭಾಗದಲ್ಲಿ ಓಟದ ಸ್ಪರ್ಧೆಗಳನ್ನು ವ್ಯವಸ್ಥಿತವಾಗಿ ಆಯೋಜಿಸಲಾಗಿತ್ತು.

ಜಿಲ್ಲೆಯ ಬಹುತೇಕ ಎಲ್ಲಾ ಶಾಲೆಗಳಿಂದ ಮಕ್ಕಳು ರಾಜ್ಯ ಮಟ್ಟದ ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಿದರು. ಜಿಲ್ಲೆಂತು ವಿವಿಧ ಭಾಗಗಳಿಂದ ಕ್ರೀಡಾಕೂಟ ವೀಕ್ಷಣೆಗೆ ನೂರಾರು ಮಂದಿ ಆಗಮಿಸಿ ಸಂಭ್ರಮಿಸಿದರು.

ವಿರಾಜಪೇಟೆಯಲ್ಲಿ ಗಾಂಜಾ ಮಾರುತ್ತಿದ್ದ ಮೂವರ ಬಂಧನ



ದಿನೇಶ್ ರಶೀದ್ ಚಂದ್ರು

ವಿರಾಜಪೇಟೆ,ಆ.12– ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸುವಲ್ಲಿ ವಿರಾಜಪೇಟೆ ಪಟ್ಟಣ ಠಾಣಾ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತರಿಂದ 4 ಕೆ.ಜಿ. 370 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಘಟನೆ ಕುರಿತು ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಜಪೇಟೆಯ ಪೆರುಂಬಾಡಿ ಚೆಕ್ ಪೋಸ್ಟ್ ಬಳಿ ಕೆಲವರು ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ವಿರಾಜಪೇಟೆ ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಸಂದರ್ಭ ಬೈಲುಕೊಪ್ಪ ನಿವಾಸಿ ಬಿ.ಕೆ.ದಿನೇಶ್(26), ಚಂದ್ರು(26) ಮತ್ತು ಪೊನ್ನಂಪೇಟೆ ಬೇಗೂರು ನಿವಾಸಿ ಎ.ಎ.ರಶೀದ್ ಎಂಬವರು ಮಾಲು ಸಹಿತ ಸೆರೆ ಸಿಕ್ಕಿದ್ದಾರೆ.

ಆರೋಪಿಗಳ ಬಳಿಯಿದ್ದ ಗಾಂಜಾವನ್ನು ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಮಡಿಕೇರಿ ಉಪವಿಭಾಗದ ಡಿವೈಎಸ್‌ಪಿ ಎಂ.ಜಗದೀಶ್, ವಿರಾಜಪೇಟೆ ಪಟ್ಟಣ ಠಾಣೆಯ ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರಪ್ಪ ಠಾಣಾಧಿಕಾರಿ ರವೀಂದ್ರ ಕಾರ್ಯಾಚರಣೆ ನಡೆಸಿದ್ದಾರೆ.

ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದ ಆರೋಪಿ ಬಂಧನ



ಮಡಿಕೇರಿ,ಆ.12– ಸೋಮವಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೂತಿ ಗ್ರಾಮ ನಿವಾಸಿ ಡಿ.ಡಿ.ತಮ್ಮಯ್ಯ(58) ಬಂಧಿತ ಆರೋಪಿ. ಕೂತಿ ಗ್ರಾಮದಲ್ಲಿ ಕಳ್ಳಭಟ್ಟಿ ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಸೋಮವಾರಪೇಟೆ ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಅದರಂತೆ ಕೂತಿ ಗ್ರಾಮದ ಡಿ.ಡಿ.ತಮ್ಮಯ್ಯ ಎಂಬವರ ಮನೆ ಮೇಲೆ ದಾಳಿ ನಡೆಸಿದ ಸಂದರ್ಭ ಕಳ್ಳಭಟ್ಟಿ ತಯಾರಿಸಲು ಬಳಸುವ 17 ಲೀಟರ್ ಪುಳಿಗಂಜಿ ದ್ರವ ಪತ್ತೆಯಾಗಿದ್ದು, ಸ್ಥಳದಲ್ಲೇ ಆರೋಪಿಯನ್ನು ಬಂಧಿಸಲಾಗಿದೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಠಾಣಾಧಿಕಾರಿ ರಾಮಚಂದ್ರ ನಾಯಕ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ. ಈ ಘಟನೆ ಕುರಿತು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಣ್ಣಂಗಾಲ ಗ್ರಾಪಂಗೆ ಗ್ರೀಷ್ಮ ಅಧ್ಯಕ್ಷೆ, ವನಿತ ಉಪಾಧ್ಯಕ್ಷೆ



ಗೋಣಿಕೊಪ್ಪಲು, ಆ.12– ಕಣ್ಣಂಗಾಲ ಗ್ರಾಮ ಪಂಚಾಯತ್‌ಗೆ 2ನೇ ಅವಧಿಗೆ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗ್ರೀಷ್ಮಾ ರಜು ಮತ್ತು ಉಪಾಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ರಜನಿ ಕುಟ್ಟಪ್ಪ ಆಯ್ಕೆಯಾಗಿದ್ದಾರೆ.

ಬಿಜೆಪಿ ಬೆಂಬಲಿತ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಮಂಡೇಪಂಡ ವನಿತಾ ಹಾಗೂ ಉಪಾಧ್ಯಕ್ಷ ಸ್ಥಾನದ ಟಿ.ವಿ. ಗಣೇಶ್ ಅವರ ವಿರುದ್ಧ ಕಾಂಗ್ರೆಸ್ ಬೆಂಬಲಿತರು 5–4 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಬಿಜೆಪಿ ಬೆಂಬಲಿತ ಸದಸ್ಯ ಲೋಕೇಶ್ ಗೈರು ಹಾಜರಾಗಿದ್ದರು.

ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಕಣ್ಣಂಗಾಲ ವಲಯ ಕಾಂಗ್ರೆಸ್ ಅಧ್ಯಕ್ಷ ಕೆ.ಎಸ್. ಗೋಪಾಲಕೃಷ್ಣ, ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಜಾನ್ಸನ್, ವಿರಾಜಪೇಟೆ ಪುರಸಭಾ ಸದಸ್ಯ ಡಿ.ಪಿ. ರಾಜೇಶ್, ಪರಿಶಿಷ್ಟ ಘಟಕ ಅಧ್ಯಕ್ಷ ಮಹಾದೇವ್, ಜೋಕಿಮ್, ಎ.ಜಿ.ಅಜಿತ್, ಕೆ.ಎಸ್.ದಿನೇಶ್, ಮಚ್ಚಾರಂಡ ಕಿರಣ್, ಬೇರೆರ ಕಿರಣ್, ಡಿಲ್ಲು, ಗ್ರಾಪಂ. ಸದಸ್ಯರಾದ ಜೀವನ್, ಕಲ್ಲೇಶ್, ಶಾಂತಿ ಹಾಜರಿದ್ದರು. ಕಣ್ಣಂಗಾಲ ವಲಯ ಕಾಂಗ್ರೆಸ್ ಅಧ್ಯಕ್ಷ ಕೆ.ಎಸ್. ಗೋಪಾಲಕೃಷ್ಣ ಅವರಿಗೆ ಇದು ಪ್ರತಿಷ್ಠೆಯ ಚುನಾವಣೆಯಾಗಿತ್ತು.

ಜನಸಂಖ್ಯೆ ಕಡಿಮೆ ಇರುವ ಸಮುದಾಯಗಳು

ಶೈಕ್ಷಣಿಕವಾಗಿ ಹಿಂದುಳಿಯಲು ಸರ್ಕಾರಗಳೇ ಕಾರಣ

ವಿಧಾನಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಬೇಸರ



> ಸಮುದಾಯದಲ್ಲಿ ಅನೇಕ ಉಪ ಪಂಗಡಗಳಿದ್ದು, 2ಎ ಪ್ರವರ್ಗದಲ್ಲಿ ಕೆಲವು ಉಪಪಂಗಡಗಳನ್ನು ಕೈ ಬಿಡಲಾಗಿದೆ. ಅದನ್ನು ಸೇರ್ಪಡೆ ಮಾಡಿ ಪ್ರಾತಿನಿಧ್ಯ ಕಲ್ಪಿಸಲು ಸರ್ಕಾರ ಗಮನ ಹರಿಸಬೇಕು. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳ ಜನರು ಆಡಳಿತದಲ್ಲಿ ಭಾಗಿಯಾಗಲು ಅವಕಾಶ ನೀಡಬೇಕು.
> –ವಿ.ಆರ್.ಸುದರ್ಶನ್,
> ವಿಧಾನ ಪರಿಷತ್ ಮಾಜಿ ಸಭಾಪತಿ.

ಚಾಮರಾಜನಗರ, ಆ.12– ಜನಸಂಖ್ಯೆ ಕಡಿಮೆ ಇರುವ ಸಮುದಾಯಗಳು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಹಿಂದುಳಿಯಲು ಸರ್ಕಾರಗಳೇ ಕಾರಣ ಎಂದು ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಬೇಸರ ವ್ಯಕ್ತಪಡಿಸಿದರು.

ನಗರದ ನಂದಿ ಭವನದಲ್ಲಿ ಜಿಲ್ಲಾ ಜ್ಯೋತಿಪಣ ಗಾಣಿಗರ ಸಂಘದಿಂದ ಶನಿವಾರ ನಡೆದ ಗುರುವಂದನಾ ಕಾರ್ಯಕ್ರಮ, ಜಿಲ್ಲಾ ಗಾಣಿಗರ ಸಮಾವೇಶ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಶಿವಜ್ಯೋತಿ ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಸಮುದಾಯಕ್ಕೆ ಸಂಘಟನೆ, ಜಾಗೃತಿ, ಹೋರಾಟ, ಶಿಕ್ಷಣ ಬಹಳ ಮುಖ್ಯ. ಆದರೆ ಕೆಲವು ಹಿಂದುಳಿದ ಸಮಾಜಗಳಿಗೆ ಎಲ್ಲಾ ಕ್ಷೇತ್ರಗಳಲ್ಲೂ ಹಿನ್ನಡೆ ಉಂಟಾಗಿದೆ. ಪ್ರಸ್ತುತ ಸಂವಿಧಾನದಲ್ಲಿ ಜಾತಿ ವ್ಯವಸ್ಥೆ ಇಲ್ಲದಿದ್ದರೂ, ವಸ್ತು ಸ್ಥಿತಿಯಲ್ಲಿ ಜಾತಿ ವ್ಯವಸ್ಥೆ ಜೀವಂತವಾಗಿದೆ. ಇದನ್ನು ಹೋಗಲಾಡಿಸಲು ಮತ್ತು ಸಮಸಮಾಜ ನಿರ್ಮಿಸಲು ಎಲ್ಲರೂ ಪ್ರಯತ್ನಿಸಬೇಕಿದೆ ಎಂದರು.

ಸಾನಿಧ್ಯ ವಹಿಸಿ ಮಾತನಾಡಿದ ಗಾಣಿಗರ ಮಹಾಸಂಸ್ಥಾನ ಮಠದ ಪೂರ್ಣಾನಂದಪುರಿ ಸ್ವಾಮೀಜಿ, ಸಂಪುಟ ದರ್ಜೆ ಸ್ಥಾನಮಾನದಲ್ಲಿದ್ದ ನಾನು ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಸಾಂಸಾರಿಕ ಜೀವನ ತ್ಯಜಿಸಿ, ಸನ್ಯಾಸ ಆಶ್ರಮ ಸ್ವೀಕರಿಸಿದ್ದೇನೆ. ಆ ಮೂಲಕ ನಮ್ಮ ಸಮಾಜಕ್ಕೆ ಗುರುಪೀಠ ಸ್ಥಾಪಿಸಿ ಅವರಿಗೆ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಹಾಗೂ ದಾಸೋಹ ನೀಡಲು ಹೆಜ್ಜೆ ಇರಿಸಿದ್ದೇನೆ. ಬೆಂಗಳೂರು ಸಮೀಪದ ನೆಲ ಮಂಗಲದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಸಹಕಾರದಿಂದ 8 ಎಕರೆ ಜಮೀನು ಪಡೆದು ಗುರುಪೀಠ, ಕಲ್ಯಾಣ ಮಂಟಪ, ಶಾಲೆ ಮತ್ತು ವಸತಿ ನಿಲಯಗಳನ್ನು ತೆರೆಯಲಾಗಿದೆ. ಸಮಾಜದ ಬಂಧುಗಳು ಇವುಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಶಿವಜ್ಯೋತಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳು, ಗಣ್ಯರು ಹಾಗೂ ಸಮಾಜದ ಹಿರಿಯ ಮುಖಂಡರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷ ರಾಜಶೇಖರ್, ಜಿಲ್ಲಾ ಅಧ್ಯಕ್ಷ ಅಂಕಶೆಟ್ಟಿ, ಪ್ರಧಾನ ಕಾರ್ಯದರ್ಶಿ ಜಯರಾಮಶೆಟ್ಟಿ, ಮುಖಂಡರಾದ ಪೂನಂ ಮಂಜುನಾಥ್, ಚಂದ್ರಮೋಹನ್, ನಾಗರಾಜ ಶೆಟ್ಟಿ, ರಂಗರಾಜು, ಕುಮಾರ್, ಬಸವರಾಜು, ವೇಣುಗೋಪಾಲ್, ವಿಜಯಕುಮಾರ್, ರಾಮಕೃಷ್ಣ, ದೇವಶೆಟ್ಟಿ, ಮಹದೇವಣ್ಣ, ನರಸಿಂಹಯ್ಯ ಇದ್ದರು.

ವಿವಿಧ ಸ್ಥಾಯಿ ಸಮಿತಿಗೆ ಶಾಸಕರ ನೇಮಕ



ಪುಟ್ಟರಂಗಶೆಟ್ಟಿ ಕೃಷ್ಣಮೂರ್ತಿ ಗಣೇಶಪ್ರಸಾದ್ ಮಂಜುನಾಥ್

ಚಾಮರಾಜನಗರ, ಆ.12– ರಾಜ್ಯ ಸರ್ಕಾರ ಜಿಲ್ಲೆಯ ನಾಲ್ವರು ಶಾಸಕರನ್ನು ವಿಧಾನ ಮಂಡಲ ಹಾಗೂ ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ನೇಮಕ ಮಾಡಿದೆ.

ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ, ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರನ್ನು ಸಾರ್ವಜನಿಕ ಉದ್ದಿಮೆಗಳ ಸಮಿತಿ ಹಾಗೂ ಹಕ್ಕು ಬಾಧ್ಯತೆಗಳ ಸಮಿತಿ ಸದಸ್ಯರನ್ನಾಗಿ, ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಅವರನ್ನು ಮಹಿಳಾ ಮತ್ತು ಮಕ್ಕಳ ಸಮಿತಿ ಸದಸ್ಯರನ್ನಾಗಿ, ಹನೂರು ಶಾಸಕ ಎಂ.ಆರ್.ಮಂಜುನಾಥ್ ಅವರನ್ನು ಸಭೆಯ ಮುಂದಿಡುವ ಕಾಗದ ಪತ್ರಗಳ ಸಮಿತಿ ಸದಸ್ಯರನ್ನಾಗಿ ರಾಜ್ಯ ಸರ್ಕಾರ ನೇಮಿಸಿದೆ.

ಶೆಟ್ಟರಿಗೆ ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಸಮಿತಿ ಜವಾಬ್ದಾರಿ: ಚಾಮರಾಜನಗರದಿಂದ ಸತತ 4ನೇ ಬಾರಿ ಗೆಲುವು ಸಾಧಿಸಿ ಕ್ಷೇತ್ರವನ್ನು 'ಕೈ' ಭದ್ರಕೋಟೆಯಾಗಿ ಉಳಿಸಿಕೊಂಡಿರುವ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಈ ಬಾರಿ ಸಚಿವ ಸ್ಥಾನ ಬಹುತೇಕ ಖಚಿತವಾಗಿತ್ತು. ಆದರೆ, ಸಚಿವ ಸಂಪುಟ ರಚನೆ ವೇಳೆ ಕೊನೆ ಗಳಿಗೆಯಲ್ಲಿ ನಡೆದ ರಾಜಕೀಯ ವಿದ್ಯಾಮಾನದಲ್ಲಿ ಅವರಿಗೆ ಸಚಿವ ಸ್ಥಾನ ಕೈತಪ್ಪಿತ್ತು. ಬಳಿಕ, ಅವರಿಗೆ ಉಪಸಭಾಪತಿ ಸ್ಥಾನ ನೀಡಲು ಸರ್ಕಾರ ಮುಂದಾಯಿತು. ಆದರೆ, ಅದು ಕೂಡ ಕೊನೆ ಕ್ಷಣದಲ್ಲಿ ರುದ್ರೇಶ್ ಲಮಾಣಿ ಪಾಲಾಯಿತು. ಹೀಗಾಗಿ, ಕ್ಷೇತ್ರದಲ್ಲಿ ಮತ್ತೆ ಎಂದಿನಂತೆ ತಮ್ಮ ಕಾರ್ಯಗಳನ್ನು ಮುಂದುವರೆಸಿರುವ ಪುಟ್ಟರಂಗಶೆಟ್ಟಿ ಅವರನ್ನು ಸರ್ಕಾರ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿದೆ.

ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಎಆರ್‌ಕೆ: ಶಾಸಕ ಎ.ಆರ್.ಕೃಷ್ಣಮೂರ್ತಿ ಅವರನ್ನು ಸಾರ್ವಜನಿಕ ಉದ್ದಿಮೆಗಳ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಶಾಸಕ ತನ್ವೀರ್ ಸೇಠ್ ಅಧ್ಯಕ್ಷರಾಗಿರುವ ಕರ್ನಾಟಕ ವಿಧಾನಸಭೆ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 211(2)ರ ಮೇರೆಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಬಿ.ಆರ್.ಪಾಟೀಲ್ ಅಧ್ಯಕ್ಷತೆಯ ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 211(2)ರ ಮೇರೆಗೆ ಹಕ್ಕು ಬಾಧ್ಯತೆಗಳ ಸಮಿತಿಯ ಸದಸ್ಯರನ್ನಾಗಿಯೂ ಎ.ಆರ್.ಕೃಷ್ಣಮೂರ್ತಿ ಅವರನ್ನು ನೇಮಕ ಮಾಡಲಾಗಿದ್ದು, ಎರಡೂ ಸಮಿತಿಗಳಿಗೆ ಸದಸ್ಯರಾಗಿ ನೇಮಕಗೊಂಡಿರುವುದಕ್ಕೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು, ಬೆಂಬಲಿಗರು ಸಂತಸ ವ್ಯಕ್ತಪಡಿಸಿದ್ದಾರೆ.

ಗಣೇಶಪ್ರಸಾದ್‌ಗೆ ಮಹಿಳಾ ಮತ್ತು ಮಕ್ಕಳ ಸಮಿತಿ: ಶಾಸಕ ಹೆಚ್.ಎಂ.ಗಣೇಶ ಪ್ರಸಾದ್ ಮೊದಲ ಬಾರಿ ಗೆದ್ದಿರುವ ಕಾರಣ ಮತ್ತು ಹಿರಿಯರಿಗೆ ಅವಕಾಶ ಸಿಗಬೇಕೆಂಬ ಉದ್ದೇಶದಿಂದ ಸಚಿವ ಸ್ಥಾನದ ನಿರೀಕ್ಷೆ ಮಾಡಲಿಲ್ಲ. ಇವರ ಬೆಂಬಲಿಗರು ಒತ್ತಾಯ ಮಾಡಿದಾಗಲೂ ಕೂಡ ಅವರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ ಎಂದು ಹೇಳಿರಲಿಲ್ಲ. ಇದೀಗ ಶಾಸಕ ಹೆಚ್.ಎಂ. ಗಣೇಶಪ್ರಸಾದ್‌ರನ್ನು ಮಹಿಳಾ ಮತ್ತು ಮಕ್ಕಳ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಮಂಜುನಾಥ್‌ಗೆ ಒಲಿದ ಕಾಗದ ಪತ್ರ ಸಮಿತಿ: ಹನೂರಿನಲ್ಲಿ ಮೊದಲ ಬಾರಿಗೆ ಗೆಲುವು ದಾಖಲಿಸಿ ಕುಟುಂಬ ರಾಜಕಾರಣ ಅಂತ್ಯವಾಡಿದ ಶಾಸಕ ಎಂ.ಆರ್.ಮಂಜುನಾಥ್ ಅವರನ್ನು ಸಭೆಯ ಮುಂದಿಡುವ ಕಾಗದ ಪತ್ರ ಸಮಿತಿ ಸದಸ್ಯರನ್ನಾಗಿ ನೇಮಿಸಲಾಗಿದೆ. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅಧ್ಯಕ್ಷರಾಗಿರುವ ಸಭೆಯ ಮುಂದಿಡುವ ಕಾಗದ ಪತ್ರ ಸಮಿತಿ ಸದಸ್ಯರಾಗಿ ಮಂಜುನಾಥ್ ನೇಮಕವಾಗಿರುವುದಕ್ಕೆ ಅವರ ಬೆಂಬಲಿಗರು ಹಾಗೂ ಜೆಡಿಎಸ್ ಪಕ್ಷದ ಮುಖಂಡರು ಸಂತಸ ವ್ಯಕ್ತಪಡಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಹುಟ್ಟುಹಬ್ಬ: ವಿಶೇಷ ಪೂಜೆ



ಚಾಮರಾಜನಗರ, ಆ.12– ಮುಖ್ಯಮಂತ್ರಿ ಸಿದ್ದರಾಮಯ್ಯನವರ 76ನೇ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಅಭಿಮಾನಿ ಬಳಗದ ಅಧ್ಯಕ್ಷ ಬೆಳ್ಳೀಗೌಡರ ನೇತೃತ್ವದಲ್ಲಿ ಶ್ರೀಚಾಮರಾಜೇಶ್ವರಸ್ವಾಮಿಗೆ ಪಂಚಾಮೃತ ಅಭಿಷೇಕ, ಎಳನೀರು ಅಭಿಷೇಕ ನೆರವೇರಿಸಿ ಸಿದ್ದರಾಮಯ್ಯನವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಅಲ್ಲದೇ ನಗರದ ದೀನಬಂಧು ಶಾಲೆಯಲ್ಲಿ ಮಧ್ಯಾಹ್ನ ಉಪಾಹಾರ ವ್ಯವಸ್ಥೆ ಮಾಡಲಾಯಿತು.

ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷ ಬೆಳ್ಳೀಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬ ಅಂಗವಾಗಿ ಶ್ರೀಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ದೇವರು ಅವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿಸಲಿ. ಐದು ವರ್ಷಗಳ ಕಾಲ ಅವರೇ ಮುಖ್ಯಮಂತ್ರಿಯಾಗಿರಲಿ ಎಂದು ಆಶಿಸಿದರು.

ಈ ವೇಳೆ ಬಳಗದ ಪ್ರಧಾನ ಕಾರ್ಯದರ್ಶಿ ಲಿಂಗಣ್ಣ, ಉಪಾಧ್ಯಕ್ಷ ಸೋಮಣ್ಣ, ಸಂಘಟನಾ ಕಾರ್ಯದರ್ಶಿ ನಾಗರಾಜು, ಪಿ. ರಾಮಸ್ವಾಮಿ, ರವಿಕುಮಾರ್, ನಟರಾಜು, ಮಹದೇವು, ಬಸವಣ್ಣ, ಹರೀಶ, ಕೆ.ಎಸ್. ರೇವಣ್ಣ, ನಾಗೇಶ್, ನಂದ ಕುಮಾರ್, ರೇವಣ್ಣ, ಕೇಶವಮೂರ್ತಿ, ಮಹೇಶ್, ಗುರುಸ್ವಾಮಿ, ಸ್ವಾಮಿ ಇತರರಿದ್ದರು.

ಪತ್ರಕರ್ತರು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿ

ಸಿವಿಲ್ ನ್ಯಾಯಾಧೀಶ ಎಂ. ಆಕರ್ಷ್ ಸಲಹೆ



ಯಳಂದೂರು, ಆ.12– ಪತ್ರಕರ್ತರು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸಿವಿಲ್ ನ್ಯಾಯಾಧೀಶ ಎಂ.ಆಕರ್ಷ್ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಕರ್ತರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಒಳಿತಿಗಾಗಿ ದುಡಿಯುವ ಪತ್ರಕರ್ತರು ಒತ್ತಡದಿಂದ ಹೊರಬರಲು ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದು ಅಗತ್ಯ. ವಿವಿಧ ಇಲಾಖೆಗಳ ಜೊತೆಗೂಡಿ ನಡೆಯುತ್ತಿರುವ ಕ್ರೀಡಾಕೂಟ ಮಾನಸಿಕ, ದೈಹಿಕ ಆರೋಗ್ಯಕ್ಕೆ ಸಹಕಾರಿಯಾಗಿದೆ. ವೃತ್ತಿ ಒತ್ತಡದಿಂದ ಹೊರಬಂದು ಇಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ನೆಮ್ಮದಿ ದೊರೆಯುವ ಜೊತೆಗೆ ಇತರೆ ಇಲಾಖೆಗಳ ಅಧಿಕಾರಿಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಯುತ್ತದೆ ಎಂದರು.

ಕೆಪಿಎಸ್ ಶಾಲೆ ಉಪಪ್ರಾಂಶುಪಾಲ ನಂಜುಂಡಯ್ಯ ಮಾತನಾಡಿ, ಯಳಂದೂರು ಚಿಕ್ಕ ತಾಲೂಕು. ತಾಲೂಕಿನಲ್ಲಿರುವ ಪತ್ರಕರ್ತರು ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಈ ವೇಳೆ ಕ್ರೀಡಾಕೂಟದಲ್ಲಿ ಪತ್ರಕರ್ತರು, ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಒಳಗೊಂಡ ತಂಡಗಳು ಪಾಲ್ಗೊಂಡವು. ಈ ಸಂದರ್ಭ ಎಸ್‌ಐ ಚಂದ್ರಹಾಸ ನಾಯಕ್, ದೈಹಿಕ ಪರಿವೀಕ್ಷಕ ಲಿಂಗರಾಜು, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎಂ.ವೀರಭದ್ರಸ್ವಾಮಿ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ವೈ.ಎಂ.ಮಂಜುನಾಥ್, ಖಜಾಂಚಿ ರಮೇಶ್, ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಮುರುಳಿ, ವೈದ್ಯಾಧಿಕಾರಿ ಡಾ.ನಾಗೇಶ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಭದ್ರನಾಯಕ, ಉಪಾಧ್ಯಕ್ಷ ವಿ.ನಾಗರಾಜು, ಕಾರ್ಯದರ್ಶಿ ಡಿ.ಪಿ.ಮಹೇಶ್, ಖಜಾಂಚಿ ನಾಗೇಂದ್ರ, ಪತ್ರಕರ್ತರಾದ ನಾಗೇಂದ್ರ, ಭಾನುಪ್ರಕಾಶ್, ಮಂಜು, ಪ್ರಸನ್ನಕುಮಾರ್, ಫೈರೋಜ್ ಖಾನ್, ನಾಗರಾಜು, ಲೋಕೇಶ್, ಪ್ರಕಾಶ್, ಇರ್ಫಾನ್ ಇತರರಿದ್ದರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಗುಂಡ್ಲುಪೇಟೆ, ಆ.12– ಪಟ್ಟಣದ ಜೆಎಸ್‌ಎಸ್ ಕಾಲೇಜಿನಲ್ಲಿ ಆ.13ರಂದು ಬೆಳಗ್ಗೆ 10 ಗಂಟೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ ಎಂದು ಪ್ರಾಂಶುಪಾಲೆ ಡಾ.ಮಹದೇವಮ್ಮ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನಮ್ಮ ಕಾಲೇಜಿನಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಈ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶಿಬಿರವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದ್ದಾರೆ.

ಡೈರಿ ಅಧ್ಯಕ್ಷ, ಗ್ರಾಪಂ ಅಧ್ಯಕ್ಷರಿಗೆ ಸನ್ಮಾನ



ಚಾಮರಾಜನಗರ, ಆ.12– ತಾಲೂಕಿನ ಕೋಡಿಮೋಳೆ ಹಾಲು ಉತ್ಪಾದಕರ ಸಂಘದ ನೂತನ ಅಧ್ಯಕ್ಷ ಗೋವಿಂದಶೆಟ್ಟಿ ಹಾಗೂ ಚಂದಕವಾಡಿ ಗ್ರಾಪಂ ನೂತನ ಅಧ್ಯಕ್ಷ ನಟರಾಜು ಅವರನ್ನು ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿಯಿಂದ ಸನ್ಮಾನಿಸಲಾಯಿತು.

ಕೋಡಿಮೋಳೆ ಗ್ರಾಮದಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಆಲೂರು ಮಲ್ಲು, ಉಪಾಧ್ಯಕ್ಷ ಜಿ.ಎಂ.ಶಂಕರ್ ನೇತೃತ್ವದಲ್ಲಿ ನೂತನ ಡೈರಿ ಅಧ್ಯಕ್ಷ, ಗ್ರಾಪಂ ನೂತನ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಮಂಜು, ಸುರೇಶ್, ಗ್ರಾಪಂ ಸದಸ್ಯರಾದ ಮಂಜು, ಮಹದೇವಶೆಟ್ಟಿ, ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಯಜಮಾನರಾದ ರಂಗಸ್ವಾಮಿ, ನಾಗರಾಜು, ರಾಜು, ಟೈಲರ್ ಪ್ರಭು, ಕೃಷ್ಣಶೆಟ್ಟಿ, ಶ್ರೀನಿವಾಸ, ಕಾಂತರಾಜು, ಸ್ವಾಮಿಗೌಡ, ಪುಟ್ಟನಪುರ ಪ್ರಕಾಶ್, ಬಾಬು ಇತರರಿದ್ದರು.

ಮೂರನೇ ಪುಟದಿಂದ

ವಕೀಲರ ಹಿತರಕ್ಷಣಾ ಕಾಯ್ದೆ ಮಂಡನೆ

ಮಾತನಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಂವಿಧಾನದ ಆಶಯ ತಿರುಚುವ ಸಂಚು ನಡೆಯುತ್ತಿದೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಸಂವಿಧಾನ ವಿರುದ್ಧದ ಅಂಶಗಳನ್ನು ತುಂಬುವ ಪ್ರಯತ್ನ ನಡೆಯುತ್ತಿದೆ. ಬಳಿಕ ಅಂತಹವರನ್ನೇ ನ್ಯಾಯಾಧೀಶರಾಗಿ ನೇಮಕ ಮಾಡುವ ಪ್ರಯತ್ನಗಳೂ ನಡೆಯುತ್ತಿರುವುದರಿಂದ ನ್ಯಾಯ ಸಮ್ಮತ ನ್ಯಾಯದಾನ ನಿರೀಕ್ಷಿಸಲು ಸಾಧ್ಯವೇ? ಈ ನಿಟ್ಟಿನಲ್ಲಿ ಸಂವಿಧಾನದ ರಕ್ಷಣೆ ಮಾಡಬೇಕಾದ ಕಾರ್ಯದಲ್ಲಿ ವಕೀಲರ ಜವಾಬ್ದಾರಿ ಹೆಚ್ಚಾಗಿದೆ. ಅವರೊಂದಿಗೆ ಜನರು ಕೈ ಜೋಡಿಸಬೇಕು. ತಳ ಸಮುದಾಯ, ಬಡ ಜನರು, ಶಕ್ತಿ ಇಲ್ಲದವರ ಮೇಲೆ ಅನುಕಂಪ, ಕನಿಕರ ತೋರುವ ಬದಲಿಗೆ ಸಹಾಯ ಮಾಡುವುದರೊಂದಿಗೆ ನ್ಯಾಯ ಒದಗಿಸಲು ಮುಂದಾಗಬೇಕು. ಸಮಾಜದಲ್ಲಿ ಇರುವ ಅಸಮಾನತೆ ತೊಡೆದು ಹಾಕಲು ಪ್ರಯತ್ನ ಮಾಡಬೇಕು. ಡಾ.ಅಂಬೇಡ್ಕರ್ ಅವರು ಮಾಡಿದ ಕೊನೆಯ ಐತಿಹಾಸಿಕ ಭಾಷಣವನ್ನು ಎಲ್ಲರೂ ಓದಿದರೆ ಸಾಮಾಜಿಕ ಜವಾಬ್ದಾರಿ ಹೆಚ್ಚಾಗುತ್ತದೆ. ಸಮಾಜ ನನಗೇನು ಮಾಡಿದೆ ಎನ್ನುವುದಕ್ಕಿಂತ ನಾವು ಸಮಾಜಕ್ಕೆ ಏನು ಮಾಡಿದ್ದೇವೆ ಎಂದು ಕೇಳಿಕೊಳ್ಳಬೇಕು. ಎಲ್ಲರೂ ಸಾಮಾಜಿಕ ಜವಾಬ್ದಾರಿಯಿಂದ ವರ್ತಿಸಬೇಕು ಎಂದು ಸಲಹೆ ನೀಡಿದರು.

ಮೇಲ್ಮಟ್ಟದ ನ್ಯಾಯಾಲಯದಲ್ಲಿ ಮೀಸಲಾತಿ ಅಗತ್ಯ: ತುಳಿತಕ್ಕೆ ಒಳಗಾದ ಸಮುದಾಯದಲ್ಲೂ ಪ್ರತಿಭಾನ್ವಿತರಿದ್ದು, ಅವರಿಗೂ ಅವಕಾಶ ಸಿಕ್ಕರೆ ಸಾಧನೆ ಮಾಡಲಿದ್ದಾರೆ. ಪ್ರಸ್ತುತ ಕೆಳ ನ್ಯಾಯಾಲಯಗಳಲ್ಲಿ ಮೀಸಲಾತಿ ಇದೆ. ಆದರೆ ಮೇಲ್ಮಟ್ಟದ ನ್ಯಾಯಾಲಯದಲ್ಲಿ ಮೀಸಲಾತಿ ಜಾರಿಗೊಳಿಸಿಲ್ಲ. ಅಲ್ಲೂ ಮೀಸಲಾತಿ ಜಾರಿಯಾದರೆ ಉಪಯುಕ್ತವಾದ ನ್ಯಾಯದಾನ ನೀಡಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.

ನ್ಯಾಯದಾನದಲ್ಲೂ ಸಮಾನತೆ: ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲು ನ್ಯಾಯದಾನದ ವ್ಯವಸ್ಥೆ ವಿಭಿನ್ನವಾಗಿತ್ತು. ಬ್ರಿಟಿಷರ ಕಾಲ, ರಾಜರ ಆಳ್ವಿಕೆ ಅವಧಿಯಲ್ಲಿ ಜಾತಿ ವ್ಯವಸ್ಥೆಗೆ ಅನುಗುಣವಾಗಿ ಶಿಕ್ಷೆ ನೀಡಲಾಗುತ್ತಿತ್ತು. ಒಂದೇ ತರದ ಅಪರಾಧಕ್ಕೆ ಬೇರೆ ಬೇರೆ ರೀತಿಯ ಶಿಕ್ಷೆ ನೀಡಲಾಗುತ್ತಿದೆ ಜಾತಿ ವ್ಯವಸ್ಥೆ ಬಲವಾಗಿದ್ದರಿಂದ ಶೋಷಣೆ ಮಾಡಲಾಗುತ್ತಿತ್ತು. ಬಡವರು, ಶ್ರೀಮಂತರು, ಶೋಷಿತರಿಗೆ ಬೇರೆ ಪ್ರಮಾಣದ ಶಿಕ್ಷೆ ನೀಡುವ ಪದ್ಧತಿ ಜಾರಿಯಲ್ಲಿತ್ತು. ಆದರೆ, ದೇಶಕ್ಕೆ ಡಾ.ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಆರ್ಟಿಕಲ್ 14ರಲ್ಲಿ ಸಮಾನ ಶಿಕ್ಷೆ ವ್ಯವಸ್ಥೆ ಜಾರಿಗೆ ಬಂತು. ಈ ನಿಯಮಾನುಸಾರ ತಪ್ಪು ಮಾಡಿದವ ಎಷ್ಟೇ ದೊಡ್ಡ ವ್ಯಕ್ತಿಯಾಗಲೀ ಅಥವಾ ತಳ ಸಮುದಾಯದ ವ್ಯಕ್ತಿಯಾಗಲೀ ಒಂದೇ ಪ್ರಮಾಣದ ಶಿಕ್ಷೆ ಅನುಭವಿಸುವ ಪದ್ಧತಿ ಜಾರಿಗೆ ಬಂದಿದೆ ಎಂದು ವಿವರಿಸಿದರು.

ಯಾರು ದಡ್ಡರೂ ಅಲ್ಲ, ಬುದ್ಧಿವಂತರೂ ಅಲ್ಲ: ಎಲ್ಲರಿಗೂ ಸಮಾನ ನ್ಯಾಯ ದೊರಕಬೇಕೆಂದು ನಮ್ಮ ಸಂವಿಧಾನದಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಕರ್ನಾಟಕ ರಾಜ್ಯ ವಕೀಲರ ಸಂಘವು ಹಲವು ಮಂದಿ ಪ್ರತಿಭಾನ್ವಿತ ವಕೀಲರನ್ನು ಸುಪ್ರೀಂಕೋರ್ಟ್‌ಗೆ ಕಳುಹಿಸಿಕೊಟ್ಟಿದೆ. ಹಲವು ಮಂದಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ, ಕಾನೂನು ತಜ್ಞರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕದಲ್ಲಿ ಪ್ರತಿಭಾವಂತ ವಕೀಲರಿಗೆ ಕೊರತೆ ಇಲ್ಲ. ಸಮಾಜದಲ್ಲಿ ಯಾರು ದಡ್ಡರೂ ಅಲ್ಲ, ಬುದ್ಧಿವಂತರೂ ಅಲ್ಲ. ಯಾರಿಗೆ ಅವಕಾಶ ಸಿಗುತ್ತದೋ ಅವರು ಬುದ್ಧಿವಂತರಾಗುತ್ತಾರೆ. ಅವಕಾಶದಿಂದ ವಂಚಿತರಾದವರು ಸಮಾಜದ ದೃಷ್ಟಿಯಲ್ಲಿ ದಡ್ಡರಾಗುತ್ತಾರೆ. ಆದರೆ ಸಂವಿಧಾನದಲ್ಲಿ ಎಲ್ಲರಿಗೂ ಅವಕಾಶ ದೊರೆತಿರುವುದರಿಂದ ಕೆಳವರ್ಗದವರೂ ಕೂಡ ಉನ್ನತ ಸ್ಥಾನಗಳಿಗೆ ಹೋಗಲು ಸಾಧ್ಯವಾಗುತ್ತದೆ ಎಂದರು.

ಪಟ್ಟಭದ್ರ ಹಿತಾಸಕ್ತಿಗಳು ಎಲ್ಲಾ ಕಾಲದಲ್ಲೂ ಇದ್ದಾರೆ: ಪಟ್ಟಭದ್ರ ಹಿತಾಸಕ್ತಿಗಳು ಎಲ್ಲ ಸಂದರ್ಭದಲ್ಲಿ, ಕಾಲದಲ್ಲೂ ಇದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಬರೋಡಾ ಮಹಾರಾಜರು ವಿದೇಶಕ್ಕೆ ತೆರಳಲು ಅವಕಾಶ ನೀಡದೆ ಹೋಗಿದ್ದರೆ, ಇಂಥ ಸಂವಿಧಾನ ಸಿಗುತ್ತಿರಲಿಲ್ಲ. ಸಂವಿಧಾನವನ್ನು ವಿರೋಧಿಸುವವರೂ ಇದ್ದಾರೆ ಸಮಾಜದಲ್ಲಿ. ವಿದ್ಯಾರ್ಥಿ ದೆಸೆಯಲ್ಲಿಯೇ ಮಕ್ಕಳ ತಲೆ ಕೆಡಿಸುವ ಕೆಲಸ ಮಾಡುತ್ತಿದ್ದಾರೆ. ಎಳೆ ವಯಸ್ಸಿನಲ್ಲಿ ಸಂವಿಧಾನದ ವಿರುದ್ಧ ದಾರಿತಪ್ಪಿಸುತ್ತಾರೆ. ಬಡವರಿಗೆ, ದಲಿತರಿಗೆ, ಅವಕಾಶ ವಂಚಿತರಿಗೆ ನ್ಯಾಯ ಸಿಗಬೇಕು. ಸಂವಿಧಾನದ ವಿರುದ್ಧ ಇರುವವರಿಂದ ನ್ಯಾಯ, ಬಡವರಿಗೆ ರಕ್ಷಣೆ ಸಿಗಲು ಸಾಧ್ಯವೇ? ಈ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಬೇಕಿದೆ. ಇಂಥ ಸಮಾವೇಶಗಳನ್ನು ಮಾಡುವಾಗ ಈ ವಿಚಾರಗಳ ಬಗ್ಗೆ ಚರ್ಚಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ವಕೀಲರ ಸಂಘದ ಅಧ್ಯಕ್ಷ ಹೆಚ್.ಎಲ್.ವಿಶಾಲ್ ರಘು ಮಾತನಾಡಿ, ಕರ್ನಾಟಕದಲ್ಲಿ ವಕೀಲರ ಹಿತರಕ್ಷಣೆ ಕಾಯ್ದೆ ಜಾರಿಗೊಳಿಸಬೇಕು. ಅವರ ಕಲ್ಯಾಣ ಕಾಯ್ದೆಗೆ ತಿದ್ದುಪಡಿ ತರಬೇಕು. ವಕೀಲರ ಕಲ್ಯಾಣಕ್ಕಾಗಿ ಪ್ರತಿ ವರ್ಷ ಬಜೆಟ್‌ನಲ್ಲಿ ಮ್ಯಾಚಿಂಗ್ ಗ್ರಾಂಟ್ ನೀಡಬೇಕು. ರಾಜ್ಯ ವಕೀಲರ ಪರಿಷತ್ ಕಟ್ಟಡಕ್ಕೆ ನಿವೇಶನ ನೀಡಬೇಕು. ವಕೀಲರು ಹಾಗೂ ಕುಟುಂಬದ ಸದಸ್ಯರಿಗೆ ವಿಮೆ ಯೋಜನೆ ಜಾರಿಗೆ ತರಬೇಕು. ಕಾರ್ಯ, ಕಲಾಪಕ್ಕೆ ಹೋಗುವ ವಕೀಲರ ವಾಹನಗಳಿಗೆ ಹೆದ್ದಾರಿ ಟೋಲ್‌ನಲ್ಲಿ ವಿನಾಯಿತಿ ನೀಡಬೇಕು. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ವಕೀಲರ ಭವನ ನಿರ್ಮಾಣ ನಿವೇಶನ ಕಾಯ್ದಿರಿಸಬೇಕು. ಗೃಹ ನಿರ್ಮಾಣಕ್ಕೆ ವಿಶೇಷ ಕ್ರಮ ಕೈಗೊಳ್ಳಬೇಕು. ವಕೀಲರಿಗೆ ಪಿಂಚಣಿ ಯೋಜನೆ ಜಾರಿಗೊಳಿಸಬೇಕು. ಪದವೀಧರರು ಹಾಗೂ ಶಿಕ್ಷಕರ ಕ್ಷೇತ್ರದಂತೆ ವಕೀಲರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯತ್ವ ಕ್ಷೇತ್ರ ಸ್ಥಾಪಿಸಬೇಕು ಎಂದು ರಾಜ್ಯದ ವಕೀಲರ ಪರವಾಗಿ ಮನವಿ ಸಲ್ಲಿಸಿದರು.

ವಕೀಲರ ಸಮ್ಮೇಳನದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಪ್ರಸನ್ನ ಬಿ. ವರಾಲೆ, ನ್ಯಾ.ಕೆ.ಸೋಮಶೇಖರ್, ಕೇಂದ್ರದ ವಕೀಲರ ಸಂಘದ ಅಧ್ಯಕ್ಷ ಮನನ್ ಕುಮಾರ್ ಮಿಶ್ರ, ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಮೈಸೂರು ಬಾರ್ ಕೌನ್ಸಿಲ್ ಅಧ್ಯಕ್ಷ ಮಹದೇವಸ್ವಾಮಿ ಸೇರಿದಂತೆ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ರಾಜ್ಯ ಹಾಗೂ ವಿವಿಧ ಜಿಲ್ಲೆಗಳ ವಕೀಲರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸೀನಿಯರ್ ಹೇಳಿದ ಪುಸ್ತಕದ ಸಾಲಿನ ಕಥೆ

ಲಾಯರ್‌ಗಿರಿ ಪ್ರಾಕ್ಟೀಸ್ ಮಾಡಲು ಬಂದಾಗ ನನಗೆ ಕೆಲವು ಸೀನಿಯರ್‌ಗಳು ವಕೀಲರ ಕಚೇರಿಯ ರ್‍ಯಾಕ್‌ನಲ್ಲಿ ಜೋಡಿಸಿದ್ದ ಪುಸ್ತಕಗಳ ಬಗ್ಗೆ ನನಗೆ ವಿವರಿಸಿದರು. ರ್‍ಯಾಕ್‌ನಲ್ಲಿ ಮೊದಲ ಸಾಲಿನಲ್ಲಿ ಜೋಡಿಸಿರುವ ದಪ್ಪ ದಪ್ಪ ಪುಸ್ತಕ ಓದಿ ವಾದ ಮಾಡಿದರೆ 100ಕ್ಕೆ 100ರಷ್ಟು ಕೇಸ್ ಗೆಲ್ಲಬಹುದು. ಎರಡನೇ ಲೈನ್‌ನಲ್ಲಿರುವ ಪುಸ್ತಕ ಓದಿ ವಾದ ಮಾಡಿದರೆ ಕೇಸ್ ಗೆಲ್ಲಲೂಬಹುದು ಅಥವಾ ಗೆಲ್ಲದೇ ಇರಲೂಬಹುದು. ಕೊನೆ ಲೈನ್‌ನಲ್ಲಿರುವ ಪುಸ್ತಕ ಓದಿ ವಾದ ಮಾಡಿದರೆ ಸೋಲು ಗ್ಯಾರಂಟಿ ಎಂದಿದ್ದರು ಎಂದು ಸಿಎಂ ಸಿದ್ದರಾಮಯ್ಯ ಹೇಳುತ್ತಿದ್ದಂತೆ ಸಮ್ಮೇಳನದಲ್ಲಿದ್ದವರು ನಗೆಗಡಲಲ್ಲಿ ತೇಲಿದರು.

ಆ.29 ಇಲ್ಲವೇ 30ರಂದು ಚಾಲನೆ

ಜೊತೆ ಸಮಾಲೋಚನೆ ನಡೆಸುತ್ತೇನೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಆಗಿರುವ 40 ಪರ್ಸೆಂಟ್ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ನಡೆಸಲು ನಾಲ್ಕು ಟೀಂಗಳನ್ನು ರಚಿಸಲಾಗಿದೆ. ಕೆಲವು ಕಾಮಗಾರಿಗಳು ಮೂರು ವರ್ಷದ ಹಿಂದೆಯೇ ಮುಗಿದಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ ಕೆಲಸದ ಬಿಲ್ ಬಗ್ಗೆ ಅಂದಿನಿಂದ ಮೌನವಾಗಿದ್ದು, ಈಗ ಆತುರ ಮಾಡಿದರೆ ಹೇಗೆ ಎಂದು ಗುತ್ತಿಗೆದಾರರನ್ನೇ ಪ್ರಶ್ನಿಸಿದರು. ಕಾಮಗಾರಿಗಳ ಬಗ್ಗೆ ಸರ್ಕಾರ ನೇಮಿಸಿರುವ ತನಿಖಾ ತಂಡದ ವರದಿ ಕೈ ಸೇರದೆ ಬಿಲ್ ನೀಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಸರಿಯಾಗಿ ಕೆಲಸ ಮಾಡುವವರಿಗೆ ಯಾವುದೇ ಭಯ ಬೇಡ. ಅವರಿಗೆ ಬಿಲ್ ದೊರೆಯುವುದು ಖಚಿತ. ಆದರೆ ಚೆನ್ನಾಗಿ ಕೆಲಸ ಮಾಡದೆ ಭ್ರಷ್ಟಾಚಾರ ಎಸಗಿರುವವರಿಗೆ ತೊಂದರೆ ಆಗುತ್ತದೆ ಎಂದು ಸಿದ್ದರಾಮಯ್ಯ ಎಚ್ಚರಿಸಿದರು.

ಗುತ್ತಿಗೆದಾರರಿಂದ 'ಕಮಿಷನ್' ಆರೋಪ

ತನಿಖೆ ಮಾಡಿ ಪ್ರಾಮಾಣಿಕವಾಗಿ ಕೆಲಸ ಮಾಡಿರುವವರಿಗೆ ಬಿಲ್ ಪಾವತಿ ಮಾಡಲಾಗುವುದು. ಯಾವುದೇ ಗುತ್ತಿಗೆದಾರರಿಗೆ ಕಿರುಕುಳ ನೀಡುವುದು ನಮ್ಮ ಉದ್ದೇಶವಲ್ಲ.

ಕೆಂಪಣ್ಣ ಮಾತ್ರ ಅಲ್ಲ, ಇತರೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸರ್ಕಾರದ ಯಾವುದೇ ಸಚಿವರು ಲಂಚ ಕೇಳಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆದರೆ ಈ ವಿಚಾರದಲ್ಲಿ ರಾಜಕೀಯ ಮಾಡಿ, ಗುತ್ತಿಗೆದಾರರನ್ನು ಬಳಸಿಕೊಂಡು ಅಶೋಕ್, ಡಾ. ಅಶ್ವತ್ಥನಾರಾಯಣ, ಗೋಪಾಲಯ್ಯ ಅವರು ತಮ್ಮ ತಿಮಿಂಗಿಲಗಳ ರಕ್ಷಣೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರು ಮಾತ್ರ ಈ ಆರೋಪ ಮಾಡುತ್ತಿದ್ದಾರೆ. ಅವರಿಗೆ ನಮ್ಮ ಐದು ಗ್ಯಾರಂಟಿ ಯೋಜನೆಗಳನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಕಿಡಿಕಾರಿದರು.

ಲೋಡ್‌ಶೆಡ್ಡಿಂಗ್ ನೆರಳು!

ತೀರ್ಮಾನಿಸಿರುವುದರಿಂದ ಜಲ ವಿದ್ಯುತ್ ಉತ್ಪಾದನೆಯು ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ರಾಜ್ಯ ಸರ್ಕಾರ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಅನುಷ್ಠಾನದ ನಂತರ ವಿದ್ಯುತ್ ಉತ್ಪಾದನೆಯಲ್ಲಿ ನಾನಾ ರೀತಿ ಅಡಚಣೆಯಾಗಿರುವುದರಿಂದ ಅನಧಿಕೃತ ವಾಗಿ ಲೋಡ್‌ಶೆಡ್ಡಿಂಗ್ ಮಾಡಲಾಗುತ್ತಿದೆ. ಬೇಡಿಕೆಗೆ ಅಗತ್ಯ ವಿರುವ ವಿದ್ಯುತ್ ಅನ್ನು ನೆರೆರಾಜ್ಯ ಗಳಿಂದ ಖರೀದಿಸಲು ಯಾವುದೇ ತೀರ್ಮಾನ ಕೈಗೊಳ್ಳದಿರುವುದರಿಂದ ಪ್ರಸರಣ ನಿಗಮಗಳು ಅನಧಿಕೃತ ಲೋಡ್ ಶೆಡ್ಡಿಂಗ್ ಮಾಡುತ್ತಿವೆ. ರಾಜ್ಯ ಸರ್ಕಾರವು ಈ ಬಗ್ಗೆ ಯಾವುದೇ ಅಧಿಕೃತ ಪ್ರಕಟಣೆಯನ್ನು ನೀಡಿಲ್ಲ. ಇರುವ ವಿದ್ಯುತ್‌ನಲ್ಲೇ ಸರಿ ದೂಗಿಸಲು ಅಧಿಕಾರಿಗಳು ಪರದಾಡುತ್ತಿದ್ದಾರೆ.

ತಾಪಂ, ಜಿಪಂ ಚುನಾವಣೆ

ಸುಪ್ರಿಂಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಹೊರಗಿಟ್ಟು ಕೇಂದ್ರ ಚುನಾವಣಾ ಆಯೋಗಕ್ಕೆ ಆಯುಕ್ತರನ್ನು ನೇಮಕ ಮಾಡುತ್ತಿರುವ ಕೇಂದ್ರ ಸರ್ಕಾರದ ತೀರ್ಮಾನದ ಹಿಂದೆ ಷಡ್ಯಂತ್ರವಿದೆ ಎಂದು ಕಿಡಿಕಾರಿದ ಸಿದ್ದರಾಮಯ್ಯ, ತಮಗೆ ಬೇಕಾದವರನ್ನು ಚುನಾವಣಾ ಆಯೋಗಕ್ಕೆ ಆಯುಕ್ತರಾಗಿ ನೇಮಕ ಮಾಡುವುದು ಇದರ ಹಿಂದಿರುವ ಉದ್ದೇಶ ಎಂದರು. ಐಪಿಸಿ ಸೇರಿದಂತೆ ಕೆಲವು ಕಾನೂನುಗಳನ್ನು ಕೇಂದ್ರ ಸರ್ಕಾರದವರು ತಿದ್ದುಪಡಿ ಮಾಡುತ್ತಿದ್ದಾರೆ. ಐಪಿಸಿ 1861 ರಲ್ಲಿ ರಚನೆಯಾದ ಕಾನೂನು. ಒಟ್ಟಾರೆ ದೇಶಕ್ಕೆ ಅನ್ವಯವಾಗುವ ಕಾನೂನು ರೂಪಿಸಬೇಕು ಎಂಬುದಷ್ಟೆ ನಮ್ಮ ಅಭಿಪ್ರಾಯ ಎಂದು ಸಿದ್ದರಾಮಯ್ಯ ಹೇಳಿದರು.

ಮೈಸೂರು ಜಿಲ್ಲಾ-ನಗರ ಕಾಂಗ್ರೆಸ್ ವತಿಯಿಂದ

ಸಸಿಗಳ ನೆಟ್ಟು ಸಿಎಂ ಸಿದ್ದರಾಮಯ್ಯರ ಜನ್ಮದಿನ ಆಚರಣೆ

ಸಿದ್ದರಾಮಯ್ಯರ ಆಡಳಿತ ದೇಶಕ್ಕೆ ಮಾದರಿ ; ಮಾಜಿ ಶಾಸಕ ಎಂ.ಕೆ.ಸೋಮಶೇಖರ್





ಮೈಸೂರು, ಆ.12(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 76ನೇ ಜನ್ಮದಿನದ ಪ್ರಯುಕ್ತ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಜಂಟಿ ಆಶ್ರಯದಲ್ಲಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಶನಿವಾರ ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮತ್ತು ನಗರಾಧ್ಯಕ್ಷ ಆರ್.ಮೂರ್ತಿ ನೇತೃತ್ವದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ವಿವಿಧ ಜಾತಿಯ ಸಸಿಗಳನ್ನು ನೆಟ್ಟು ನೀರೆರೆದರು. ನೇರಳೆ, ಮಾವು, ಸಪೋಟ, ಗುಲಾಬಿ ಸೇರಿದಂತೆ ವಿವಿಧ ಸಸಿಗಳನ್ನು ನೆಡಲಾಯಿತು.

ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಪಾಲಿಕೆ ಪಟ್ಟಣ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಎಂ.ಶಾಂತಕುಮಾರಿ, ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಗಿರೀಶ್, ಉಪಾಧ್ಯಕ್ಷ ತಿವಾರಿ, ಮಾಧ್ಯಮ ವಕ್ತಾರ ಮಹೇಶ್, ಹಿಂದುಳಿದ ವಿಭಾಗದ ನಗರಾಧ್ಯಕ್ಷ ನಾಗೇಶ್, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಮುಖಂಡ ಸುಂದರ್‌ಕುಮಾರ್, ನಗರ ಸೇವಾ ದಳ ಅಧ್ಯಕ್ಷ ಅಶೋಕ್ ಮತ್ತಿತರರು ಪಾಲ್ಗೊಂಡಿದ್ದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲೂ ಗಿಡಗಳನ್ನು ನೆಡಲಾಯಿತು. ಇದೇ ವೇಳೆ ಮಾತನಾಡಿದ ಎಂ.ಕೆ.ಸೋಮಶೇಖರ್, ಸಿದ್ದರಾಮಯ್ಯ ಅವರು ರಾಜಕೀಯ ಮುತ್ಸದ್ಧಿ, ಧೀಮಂತ ನಾಯಕರು. ಅವರ ಆಡಳಿತಾವಧಿಯಲ್ಲಿ ನಮ್ಮಂತಹವರು ರಾಜಕೀಯ ಮಾಡುತ್ತಿರುವುದು ನಮ್ಮ ಸೌಭಾಗ್ಯ. ದೇಶದ ಸಂವಿಧಾನದಲ್ಲಿ ಬಲವಾದ ನಂಬಿಕೆಯಿಟ್ಟಿರುವ ಸಿದ್ದರಾಮಯ್ಯನವರು, ಸಿದ್ಧಾಂತಬದ್ಧ ರಾಜಕಾರಣದ ಮೂಲಕ ಜನಮಾನಸದಲ್ಲಿ ನೆಲೆಯೂರಿದ್ದಾರೆ ಎಂದರು.

ರಾಜ್ಯದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯ ಸಿಗಬೇಕು, ಯಾರೂ ಹಸಿದು ಮಲಗಬಾರದು, ಎಲ್ಲರಿಗೂ ಸೂರು ಸಿಗಬೇಕೆಂಬ ಸಂಕಲ್ಪ ಇಟ್ಟುಕೊಂಡು ಬಡವರು, ದೀನ ದಲಿತರು, ನಿರ್ಗತಿಕರ ಏಳಿಗೆಯನ್ನು ಬಯಸಿ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯನವರು ಮಾತೃ ಹೃದಯಿ ಆಗಿದ್ದಾರೆ. ಅವರು ತಮ್ಮ ಆಡಳಿತಾವಧಿಯಲ್ಲಿ ಜನಪರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನಮನ್ನಣೆ ಗಳಿಸಿದ್ದಾರೆ. ತಮ್ಮ ರಾಜಕೀಯ ಜೀವನದಲ್ಲಿ ಯಾವ ಕಪ್ಪು ಚುಕ್ಕೆ ಇಲ್ಲದೆ ಶುದ್ಧಹಸ್ತರಾಗಿ ಇಡೀ ದೇಶವೇ ಮೆಚ್ಚುವಂತಹ ಆಡಳಿತ ನೀಡುತ್ತಿದ್ದಾರೆ ಎಂದು ಹೇಳಿದರು.

ತಾಲೂಕು ಪಂಚಾಯಿತಿ ಚುನಾವಣೆಯಿಂದ ರಾಜಕೀಯ ಪ್ರವೇಶಿಸಿ, ಶಾಸಕರು, ಮಂತ್ರಿ, ಉಪಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರಾಗಿ ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ದಾಖಲೆ ಮಾಡಿದ್ದಾರೆ. ಅವರ ಪ್ರಾಮಾಣಿಕತೆ, ಬದ್ಧತೆ, ಸೈದ್ಧಾಂತಿಕ ನಿಲುವುಗಳು ಇಂದಿನ ರಾಜಕಾರಣಿಗಳಿಗೆ ಮಾದರಿ. ಅಂತಹ ಮೇರು ನಾಯಕತ್ವದಲ್ಲಿ ನಾವೆಲ್ಲರೂ ಮುನ್ನಡೆಯಬೇಕು. ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಅವರ ನಿಲುವಿಗೆ ಪೂರಕವಾಗಿ ನಾವೆಲ್ಲರೂ ಕೆಲಸ ಮಾಡಬೇಕು ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶಿವಮಾದು, ಸುಂದರ್, ಇಕ್ಬಾಲ್, ಕಾರ್ಯದರ್ಶಿ ಈಶ್ವರ್ ಚಕ್ಕಡಿ, ನಾಮ ನಿರ್ದೇಶಿತ ಪಾಲಿಕೆ ಸದಸ್ಯ ಆರ್.ಹೆಚ್.ಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಮುಖಂಡರಾದ ರೋಹಿತ್, ಗಿರೀಶ್, ಶೌಕತ್, ವಿಶ್ವ, ಗುಣ, ಸುಲೋಚನಾ ಆರಾಧ್ಯ, ಲೀಲಾ ಪಂಪಾಪತಿ, ಭವ್ಯ, ಕಮಲ, ನಾಗರಾಜು, ಮಧು ಮತ್ತಿತರರು ಪಾಲ್ಗೊಂಡಿದ್ದರು.

"ಕಾಲೇಜು ದಿನಗಳಿಗೆ ಹಿಂತಿರುಗಿ" ಸಮಾವೇಶ



ಮೈಸೂರು, ಆ.12–ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸುವರ್ಣ ಮಹೋತ್ಸವ ಆಚರಣೆಯ ಭಾಗವಾಗಿ ಕಾಲೇಜಿನ ಹಳೆಯ ವಿದ್ಯಾರ್ಥಿಗಳಿಗೆ 'ಕಾಲೇಜು ದಿನಗಳಿಗೆ ಹಿಂತಿರುಗಿ' ಎಂಬ ವಿಷಯದ ಮೇಲೆ ಸಮಾವೇಶವನ್ನು ಶನಿವಾರ ಆಯೋಜಿಸಲಾಗಿತ್ತು.

ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಮೈಸೂರು ಉಪ ಮೇಯರ್ ಡಾ.ಜಿ.ರೂಪ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಯನ್ನು ಹೆಚ್ಚಿಸುವಲ್ಲಿ ನಾಯಕತ್ವ ಮತ್ತು ಆಡಳಿತ ಮಂಡಳಿಯ ಪ್ರಯತ್ನಗಳನ್ನು ಶ್ಲಾಘಿಸಿ, ಈ ಸಂಸ್ಥೆಯು ಫಾರ್ಮಾ ಶಿಕ್ಷಣ ಮತ್ತು ಸಂಶೋಧನೆಗೆ ಫಾರ್ಮಾಸಿಸ್ಟ್‌ಗಳ ವಿಷಯದಲ್ಲಿ ಸಾಕಷ್ಟು ಕೊಡುಗೆ ನೀಡಿದೆ. ಉನ್ನತ ನೈತಿಕ ಸ್ಥೈರ್ಯ, ಗುಣಮಟ್ಟ ಮತ್ತು ಶಿಸ್ತು, ಶಿಕ್ಷಕರು ತುಂಬಾ ಶಿಸ್ತುಬದ್ಧರಾಗಿದ್ದರು. ನಾನು ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಯಾಗಿರುವುದಕ್ಕೆ ನನಗೆ ಹೆಮ್ಮೆ ಇದೆ ಎಂದು ಅವರು ತಿಳಿಸಿದರು.

ದೇಶದ ವಿವಿಧ ಭಾಗಗಳಿಂದ ಮತ್ತು ವಿದೇಶಗಳಿಂದ ಒಟ್ಟು 475 ಹಳೆಯ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಸಭೆಯ ಭಾಗವಾಗಿ, ಔಷಧೀಯ ಉದ್ಯಮಗಳಲ್ಲಿ ಕೆಲಸ ಮಾಡುವ ಹಳೆಯ ವಿದ್ಯಾರ್ಥಿಗಳಿಂದ ಉಪನ್ಯಾಸಗಳ ರೂಪದಲ್ಲಿ ಪ್ರಸ್ತುತ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮಗಳು ನಡೆದವು.

ಸಂಸ್ಥೆಯ ಪ್ರಸ್ತುತ ಪದವೀಧರ ವಿದ್ಯಾರ್ಥಿಗಳು ಫಾರ್ಮಾ ಉದ್ಯಮವು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಬಗ್ಗೆ ಮಾಹಿತಿ ವಿದ್ಯಾರ್ಥಿಗಳಿಂದ ಅದರ ಅವಶ್ಯಕತೆಗಳು ಯಾವುವು? ವಿದ್ಯಾರ್ಥಿಗಳು ಫಾರ್ಮಾ ಉದ್ಯಮಕ್ಕೆ ಹೇಗೆ ಪ್ರವೇಶಿಸಬಹುದು ಎಂಬುದರ ಬಗ್ಗೆ ಚರ್ಚೆಗಳು ನಡೆಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್, ಎಹೆಚ್‌ಇಆರ್ ಪರೀಕ್ಷಾ ನಿಯಂತ್ರಕ ಡಾ.ಸುಧೀಂದ್ರ ಭಟ್, ಡಾ.ಎಂ.ಪಿ. ವೆಂಕಟೇಶ್, ಸಂಯೋಜಕರಾದ ಡಾ.ಎಚ್.ವಿ.ಗಂಗಾಧರಪ್ಪ ಡಾ.ಸೀಮಾ ಮೆಹ್ದಿ ಹಾಗೂ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮಿಣುಕು ಹುಳುವಿನಂತೆ ಚುಟುಕು ಸಾಹಿತ್ಯ ಪ್ರಕಾಶಮಾನ



ಮೈಸೂರು, ಆ.12(ಜಿಎ)–ಮಿಣುಕು ಹುಳುವಿನಂತೆ ಚುಟುಕು ಸಾಹಿತ್ಯ ಹೆಚ್ಚು ಪ್ರಕಾಶಿಸುತ್ತದೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ತಿಳಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಮತ್ತು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಆಯೋಜಿಸಿದ್ದ 76ನೇ ಸ್ವಾತಂತ್ರ್ಯೋತ್ಸವದ ಸವಿ ನೆನಪಿನ ಚುಟುಕು ಕವಿಗೋಷ್ಠಿ ಮತ್ತು ಮಹಿಳಾ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಮಹತ್ವದ ಪಾತ್ರ ವಹಿಸಿದ್ದರು. ಅದರಂತೆ ಇಂದು ನವ ಸಮಾಜ ನಿರ್ಮಾಣ ಮಾಡುವುದರಲ್ಲಿ ಬಹುಮುಖ್ಯ ಪಾತ್ರ ವಹಿಸಬೇಕಿದ್ದು, ಹಂತಹಂತವಾಗಿ ಅದು ನಡೆಯುತ್ತಿದೆ ಎಂದರು.

ಚುಟುಕುಗಳ ವೈಶಿಷ್ಟ್ಯ ಎಂದರೆ ಮಿಣುಕು ಹುಳವಿದ್ದಂತೆ ಅವು ಹೆಚ್ಚು ಪ್ರಕಾಶಿಸುತ್ತದೆ. ಅವು ಸ್ವಯಂ ಪ್ರಕಾಶ ಮಾನವಾಗಿದ್ದು, ಅದು ರಾತ್ರಿಯನ್ನು ಹಗಲು ಮಾಡುತ್ತವೆ. ಮಿಣುಕು ಹುಳುವಿನಂತೆ ಚುಟುಕು ಕವಿಗಳು ಒಳಬೆಳಕನ್ನು ಚೆಲ್ಲಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಹಿಳಾ ಘಟಕದ ಅಧ್ಯಕ್ಷರಾಗಿ ಡಾ.ರತ್ನ ಹಾಲಪ್ಪ ಗೌಡ ಅಧಿಕಾರ ಸ್ವೀಕರಿಸಿದರು. ಚುಟುಕು ಸಾಹಿತ್ಯ ಪರಿಷತ್ತು ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್ ಪುಸ್ತಕ ತಾಂಬೂಲ ವಿತರಿಸಿದರು. ಮಾಜಿ ಸಚಿವ ಎಂ.ಶಿವಣ್ಣ, ಚುಟುಕು ಸಾಹಿತ್ಯ ಪರಿಷತ್ತು ರಾಜ್ಯಾಧ್ಯಕ್ಷ ತೋಂಟದಾರ್ಯ ಮತ್ತು ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ಘಟಕದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ 76ನೇ ಜನ್ಮದಿನದ ಪ್ರಯುಕ್ತ ಬಾಣಂತಿಯರಿಗೆ ಹೊದಿಕೆ, ಹಣ್ಣು ಹಾಗೂ ಸಿಹಿ ವಿತರಣೆ ಮಾಡಲಾಯಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಇದ್ದರು.

4ನೇ ಟಿ20: ಭಾರತಕ್ಕೆ ಭರ್ಜರಿ ಜಯ

ಫ್ಲೋರಿಡಾ,ಆ.12–ಶುಭ್‌ಮನ್ ಗಿಲ್ ಹಾಗೂ ಯಶಸ್ವಿ ಜೈಸ್ವಾಲ್ ಅವರ 165 ರನ್‌ಗಳ ದಾಖಲೆಯ ಜೊತೆಯಾಟದ ನೆರವಿನಿಂದ ಭಾರತ ವೆಸ್ಟ್‌ಇಂಡೀಸ್ ವಿರುದ್ಧ 9 ವಿಕೆಟ್‌ಗಳ ಜಯ ಸಾಧಿಸಿದೆ. ಆ ಮೂಲಕ 5 ಪಂದ್ಯಗಳ ಟಿ20 ಸರಣಿಯಲ್ಲಿ ಉಭಯ ತಂಡಗಳು ತಲಾ 2 ಪಂದ್ಯಗಳಲ್ಲಿ ಗೆಲುವು ಸಾಧಿಸಿ, ಸರಣಿಯಲ್ಲಿ ಸಮಬಲ ಸಾಧಿಸಿವೆ. ಇಲ್ಲಿನ ಮೈದಾನದಲ್ಲಿ ನಡೆದ 4ನೇ ಟಿ20 ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ 8 ವಿಕೆಟ್ ನಷ್ಟಕ್ಕೆ 178 ರನ್ ಗಳಿಸಿತು. ತಂಡದ ಪರ ಶೈ ಹೋಪ್ 45, ಶಿಮ್ರಾನ್ ಹೆಟ್ಮೆಯರ್ 31ರನ್ ಗಳಿಸಿದರು. ಭಾರತದ ಪರ ಅರ್ಶದೀಪ್ ಸಿಂಗ್ 3, ಕುಲದೀಪ್ ಯಾದವ್ 2 ವಿಕೆಟ್ ಉರುಳಿಸಿದರು. 179 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 17 ಓವರ್ 1 ವಿಕೆಟ್ ನಷ್ಟಕ್ಕೆ ಗೆಲುವಿನ ದಡ ಸೇರಿತು. ಭಾರತದ ಪರ ಶುಭ್‌ಮನ್ ಗಿಲ್ 77, ಯಶಸ್ವಿ ಜೈಸ್ವಾಲ್ 84ರನ್ ಗಳಿಸಿ ಗೆಲುವಿನ ರೂವಾರಿಗಳಾದರು.

ಅನ್ಯಾಯಕ್ಕೊಳಗಾದವರಿಗೆ ಏಕರೂಪ ನಾಗರಿಕ ಸಂಹಿತೆಯಿಂದ ನ್ಯಾಯ

ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಅಭಿಮತ

ಮೈಸೂರು,ಆ.12(ಪಿಎಂ)– 'ಏಕರೂಪ ನಾಗರಿಕ ಸಂಹಿತೆ' ಈಗಾಗಲೇ ನಮ್ಮ ಸಂವಿಧಾನದಲ್ಲಿ ಇದೆ. ಇದು ಕಾನೂನು ಆದಲ್ಲಿ ದೇಶದಲ್ಲಿ ರಕ್ತಪಾತ, ಹಿಂಸಾಚಾರ ಆಗುತ್ತದೆ ಎಂದು ಕೆಲವರು ತಮ್ಮ ಕಲ್ಪನೆಯಿಂದ ತೋಚಿದಂತೆ ಹೇಳುತ್ತಿದ್ದು, ಅದ್ಯಾವುದೂ ಆಗುವುದಿಲ್ಲ. ಬದಲಿಗೆ ಯಾರಿಗೆ ಅನ್ಯಾಯ ಆಗಿದೆಯೋ ಅವರಿಗೆ ಇದರಿಂದ ನ್ಯಾಯ ಸಿಗಲಿದೆ ಎಂದು ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಶೇಷಾದ್ರಿ ಐಯ್ಯರ್ ರಸ್ತೆಯ ವಿದ್ಯಾವರ್ಧಕ ಕಾನೂನು ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಕಾಲೇಜಿನ ವತಿಯಿಂದ ವಿದ್ಯಾವರ್ಧಕ ಸಂಸ್ಥೆ ಸಂಸ್ಥಾಪಕ ದಿವಂಗತ ಕೆ.ಪುಟ್ಟಸ್ವಾಮಿ ಅವರ ಸ್ಮರಣಾರ್ಥ ಶನಿವಾರ ಹಮ್ಮಿಕೊಂಡಿದ್ದ 4ನೇ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಏಕರೂಪ ನಾಗರಿಕ ಸಂಹಿತೆ–ಸಂವಿಧಾನಾತ್ಮಕ ಆದೇಶ' ಕುರಿತು ಅವರು ಮಾತನಾಡಿದರು.

'ಏಕರೂಪ ನಾಗರಿಕ ಸಂಹಿತೆ (ಯೂನಿಫಾರ್ಮ್ ಸಿವಿಲ್ ಕೋಡ್–ಯುಸಿಸಿ)' ಕಾನೂನು ಬಗ್ಗೆ ಇಲ್ಲಸಲ್ಲದ ಮಾಹಿತಿ ನೀಡಲಾಗುತ್ತಿದೆ. ವಿಶೇಷವಾಗಿ ಕಾನೂನು ವಿದ್ಯಾರ್ಥಿಗಳು ಈ ವಿಷಯದ ಬಗ್ಗೆ ಅಭ್ಯಾಸಿಸಿ ಜನತೆಗೆ ಸರಿಯಾದ ಮಾಹಿತಿ ನೀಡಬೇಕು. ಆಗ ಮಾತ್ರವೇ ದೇಶ ಮುಂದುವರೆಯಲು ಸಾಧ್ಯ ಎಂದು ಹೇಳಿದರು.

ಯುಸಿಸಿ ಒಂದು ಸೂಕ್ಷ್ಮ ವಿಷಯ. ಇದು ಸಂವಿಧಾನಾತ್ಮಕ, ಕಾನೂನು, ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸೇರಿದಂತೆ ಹಲವು ಆಯಾಮಗಳನ್ನು ಒಳಗೊಂಡಿದೆ. ವಿವಿಧ ಸಮುದಾಯಗಳ ಸಂಸ್ಕೃತಿಗೆ ಯುಸಿಸಿಯಿಂದ ಯಾವುದೇ ತೊಂದರೆ ಇಲ್ಲ. ದೇಶದಲ್ಲಿ ಯುಸಿಸಿ ಬಗ್ಗೆ ಭಾರೀ ಚರ್ಚೆಯಾಗುತ್ತಿದೆ. ಆದರೆ ಅದರ ಬಗ್ಗೆ ಬಹುತೇಕರು ಸರಿಯಾಗಿ ತಿಳಿದುಕೊಂಡಿಲ್ಲ. ಅನೇಕರು ಸಂವಿಧಾನ ದಲ್ಲಿರುವ ಹಕ್ಕುಗಳನ್ನಷ್ಟೇ ಕೇಂದ್ರೀಕರಿಸಿ ಮಾತನಾಡುತ್ತಾರೆ. ಈ ಸಂದರ್ಭದಲ್ಲಿ ಕರ್ತವ್ಯಗಳನ್ನು ಮರೆಯು ವುದೇ ಹೆಚ್ಚು ಸಂವಿಧಾನ ಅಷ್ಟು ಸಲಭವಾಗಿ ಅರ್ಥವಾಗುವುದಲ್ಲ. ಅದರ ಹಿಂದಿರುವ ಉದ್ದೇಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಆದರೆ ಅದನ್ನು ಅರಿಯದೇ ಕೆಲವರು ತಮಗೆ ಅನುಕೂಲಕ್ಕೆ ತಕ್ಕಂತೆ ಸಂವಿಧಾನವನ್ನು ವಿಶ್ಲೇಷಿಸುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳು ಭಾರತ ಸಂವಿಧಾನದ ಶಕ್ತಿ ಎಂದು ಹೇಳಬಹುದು. ಈ ನಡುವೆಯೂ ಧಾರ್ಮಿಕ ಹಿನ್ನೆಲೆಯ ವೈಯಕ್ತಿಕ ಕಾನೂನಿನಡಿ ಒಂದು ಸಮುದಾಯದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಶೋಷಣೆಗೆ ಒಳಗಾಗುತ್ತಿರುವುದನ್ನು ಇಂದಿಗೂ ಕಾಣಬಹುದು. ಇಂತಹ ಅನೇಕ ಬಿಕ್ಕಟ್ಟುಗಳಿಗೆ ಏಕರೂಪ ನಾಗರೀಕ ಸಂಹಿತೆ ಒಂದು ಪರಿಹಾರದ ಸಾಧನವಾಗಲಿದೆ ಎಂದರು.

ಸುಪ್ರೀಂಕೋರ್ಟ್‌ನಲ್ಲಿ ಲಕ್ಷಾಂತರ ಶುಲ್ಕ ಪಡೆಯುವ ವಕೀಲರನ್ನು ಕಾಣಬಹುದು. ನಿಮ್ಮಂತಹ ಕಾನೂನು ವಿದ್ಯಾರ್ಥಿಗಳಿಗೆ ಇದು ಆಕರ್ಷಣೆ ಆಗಬಹುದು. ವಿದ್ಯೆ ಕಲಿತು ಅದನ್ನು ಅನ್ಯಾಯ ದಾರಿಯಲ್ಲಿ ನಡೆಯುವವರ ಅನುಕೂಲಕ್ಕೆ ಬಳಸುವುದು ದೇಶಕ್ಕೆ ಒಳ್ಳೆಯದಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ವಕೀಲರು. ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದಕ್ಕೆ ದೊಡ್ಡ ಗೌರವ ಅಂದಿನ ವಕೀಲ ಸಮುದಾಯಕ್ಕೆ ಸಲ್ಲುತ್ತದೆ. ಅವರ್‍ಯಾರು ಕೋರ್ಟ್‌ಗೆ ಹೋಗಿ ಹಣ ಮಾಡಬೇಕೆಂದು ಯೋಚನೆ ಮಾಡಲಿಲ್ಲ ಎಂದು ಹೇಳಿದರು.

ಸ್ವಾತಂತ್ರ್ಯ ನಂತರ ಬಹುತೇಕ ವಕೀಲರು ದೇಶ ಮರೆತರು. ಸ್ವಾರ್ಥ ಹಾಗೂ ಹಣಗಳಿಕೆಗೆ ಸೀಮಿತರಾದರು. ಈಗಲೂ ಕಾಲ ಮಿಂಚಿಲ್ಲ. ಈಗಿನ ಪೀಳಿಗೆ ವಕೀಲರು ಚರಿತ್ರೆ ಅಭ್ಯಾಸ ಮಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ದೇಶ ಹೇಗಿತ್ತು ಎಂದು ಅರಿಯಬೇಕು. ಸ್ವಾತಂತ್ರ್ಯ ನಂತರದಲ್ಲಿ ದೇಶ ಪರಿಸ್ಥಿತಿ ಏನಾಗಿದೆ ಎಂಬುದು ಯೋಚನೆ ಮಾಡಬೇಕು. ಕೆ.ಪುಟ್ಟಸ್ವಾಮಿ ಅಂತಹವರನ್ನು ಆದರ್ಶವಾಗಿಸಿಕೊಂಡು ಆಗಿರುವ ದೋಷಗಳನ್ನು ಸರಿಪಡಿಸಬೇಕು ಎಂದು ಸಭಾಂಗಣದಲ್ಲಿದ್ದ ಕಾನೂನು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ಪಿ.ದೀಪು, ಕಾನೂನು ಅಧ್ಯಯನ ನಿರ್ದೇಶಕ ಪ್ರೊ.ಕೆ.ಬಿ.ವಾಸುದೇವ ಮತ್ತಿತರರು ಹಾಜರಿದ್ದರು.



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಏಕರೂಪ ನಾಗರೀಕ ಸಂಹಿತೆ ಕುರಿತು ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಮಾತನಾಡಿದರು.

> ಹಕ್ಕು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖವಿದ್ದಂತೆ. ಆದರೆ ಸಂವಿಧಾನ ಜಾರಿಯಾದ ದಿನದಿಂದಲೂ ಕೇವಲ ಹಕ್ಕುಗಳ ಬಗ್ಗೆ ಮಾತನಾಡುವುದೇ ಹೆಚ್ಚಾಗಿದೆ. ಯಾರು ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದರೋ ಅವರು ಹಕ್ಕು ಪಡೆಯಲು ನಿಜವಾದ ಅರ್ಹರು. ಇಂದು ಕರ್ತವ್ಯ ಬಗ್ಗೆ ಮಾತನಾಡುವುದು ತೀರಾ ಕಡಿಮೆ. ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮೂಲಭೂತ ಕರ್ತವ್ಯಗಳನ್ನು ಪರಿಚಯಿಸಿದ್ದು ಉತ್ತಮ ನಡೆಯಾಗಿದೆ. ಆದರೆ ಈವರೆಗೆ ಇದರ ಬಗ್ಗೆ ಓದಿ ತಿಳಿದವರು ಕಡಿಮೆ. ಕರ್ತವ್ಯ ನಿರ್ವಹಿಸದೇ ಕೇವಲ ಹಕ್ಕುಗಳಿಗಾಗಿ ಹೊಡೆದಾಡುವುದನ್ನು ಕಳೆದ 75 ವರ್ಷಗಳಿಂದ ನೋಡುತ್ತಿದ್ದೇವೆ. ಮೂಲಭೂತ ಕರ್ತವ್ಯಗಳ ಬಗ್ಗೆ ನಮ್ಮ ಯುವ ಜನತೆ ಚಿಂತನೆ ಮಾಡಬೇಕು.
> – ಎನ್.ಕುಮಾರ್, ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಇಂದಿನಿಂದ ಮಹಾರಾಜ ಟ್ರೋಫಿ KSCA ಟಿ–20 ಕ್ರಿಕೆಟ್ ಪಂದ್ಯಾವಳಿ

ಬಲಿಷ್ಠ ತಂಡಗಳ ಹಣಾಹಣಿ



ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಪ್ರಸಕ್ತ ಕೆಎಸ್‌ಸಿಎ ಟಿ-20 ಕ್ರಿಕೆಟ್ ಟೂರ್ನಿಗೆ ಆತಿಥ್ಯ ವಹಿಸಲು ಸಜ್ಜಾಗಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪ್ರಸ್ತುತಪಡಿಸುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ ಭಾನುವಾರದಿಂದ (ಆಗಸ್ಟ್ 13) ಆರಂಭವಾಗುತ್ತಿದೆ. ಆರು ಬಲಿಷ್ಠ ತಂಡಗಳು ಎರಡು ವಾರಗಳ ಕಾಲ, 33ರ ಸರಣಿಯ ಹೆಚ್ಚಿನ ಆಕ್ಟೇನ್ ಟಿ-20 ಪಂದ್ಯಗಳಲ್ಲಿ ಕ್ರಿಕೆಟ್ ಪ್ರೇಮಿಗಳಿಗೆ ರಸದೌತಣ ನೀಡಲಿವೆ. ರೌಂಡ್-ರಾಬಿನ್ ಫಾರ್ಮ್ಯಾಟ್ ನಂತರ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ಕರ್ನಾಟಕದ ಅತ್ಯುತ್ತಮ ಪ್ರತಿಭೆಗಳಿಗೆ ಉತ್ತಮ ವೇದಿಕೆ ಕಲ್ಪಿಸುತ್ತಿದೆ. ಕ್ರಿಕೆಟ್ ಕ್ಷೇತ್ರದಲ್ಲಿ ಪಳಗಿದ ಮತ್ತು ಭರವಸೆಯ ಆಟಗಾರರು ಈ ಕ್ರಿಕೆಟ್ ಶೋಡೌನ್‌ನಲ್ಲಿ ಪ್ರತಿಭೆ ಮೆರೆಯಲು ಸಜ್ಜಾಗಿದ್ದಾರೆ. ಪಂದ್ಯಾವಳಿ ಉದ್ಘಾಟನೆಗೆ ಎಲ್ಲವೂ ಸಜ್ಜಾಗಿದೆ.

ಇನ್ನು ನಮ್ಮ ಮೈಸೂರು ವಾರಿಯರ್ಸ್ ಕೂಡ ಅತ್ಯುತ್ತಮ ಪ್ರದರ್ಶನ ನೀಡಲು ಸಕಲ ರೀತಿಯಲ್ಲೂ ತಯಾರಿ ನಡೆಸಿದೆ. ಪಂದ್ಯಾವಳಿ ಉದ್ಘಾಟನೆಗೆ ಮುನ್ನ ಮೈಸೂರು ವಾರಿಯರ್ಸ್ ತಂಡದ ನಾಯಕ ಹಾಗೂ ತಂಡದ ಭರವಸೆಯ ವೇಗಿ ಪ್ರಸಿದ್ಧ ಕೃಷ್ಣರ ಸಂದರ್ಶನದೊಂದಿಗೆ ತಂಡಕ್ಕೆ ಶುಭ ಹಾರೈಸೋಣ ಬನ್ನಿ

ಸರಣಿಯಲ್ಲಿ ಹೆಚ್ಚಿನ ಸಾಧನೆ ವಿಶ್ವಾಸ: ಕರುಣ್ ನಾಯರ್

ಕ್ರಿಕೆಟ್ ಪ್ರಿಯರು ಈಗ ಮಹಾರಾಜ ಟಿ–20 ಪಂದ್ಯಾವಳಿ ಬಗ್ಗೆ ಅತೀವ ಕುತೂಹಲ ಹೊಂದಿದ್ದು, ಸಾಕಷ್ಟು ನಿರೀಕ್ಷೆಯಲ್ಲಿದ್ದಾರೆ. ಈ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ಪಯಣ, ಕರುಣ್ ನಾಯರ್ ನಾಯಕತ್ವದ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಿದೆ. ಕರುಣ್ ನಾಯರ್ ಉಪಸ್ಥಿತಿಯು ಆಟಗಾರರು ಮತ್ತು ಕ್ರಿಕೆಟ್ ಉತ್ಸಾಹಿಗಳಿಗೆ ಸ್ಫೂರ್ತಿ ನೀಡುತ್ತದೆ. "ಮೈಸೂರು ಮಿತ್ರ" ನಡೆಸಿದ ಸಂದರ್ಶನದಲ್ಲಿ ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್ ಮಹಾರಾಜ ಟಿ 20 ಪಂದ್ಯಗಳ ಮಹತ್ವ, ತಂಡದೊಂದಿಗೆ ತಮ್ಮ ಪಯಣದ ಅನುಭವಗಳನ್ನು ಹಂಚಿಕೊಂಡರು. ಸಂದರ್ಶನದ ಆಯ್ದ ಭಾಗ ಇಲ್ಲಿದೆ.



ಮೈಸೂರು ಮಿತ್ರ: *ಮಹಾರಾಜ ಟಿ20 ಪಂದ್ಯಾವಳಿ ಯುವ ಕ್ರಿಕೆಟಿಗರಿಗೆ ಎಷ್ಟರ ಮಟ್ಟಿಗೆ ಮಹತ್ವಕಾರಿ? ಹಿರಿಯ ಆಟಗಾರರೊಂದಿಗೆ ಆಡಿದ ಅನುಭವ ಹೇಗಿದೆ?*

ಕರುಣ್‌ನಾಯರ್: ಮಹಾರಾಜ ಟಿ20 ಮಹತ್ವಪೂರ್ಣವಾಗಿದೆ. ಯುವ ಕ್ರಿಕೆಟಿಗರಿಗೆ ಇದು ಹೆಚ್ಚು ಮಹತ್ವಕಾರಿ. ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಪ್ರದರ್ಶಿಸಲು ಅತ್ಯುತ್ತಮ ವೇದಿಕೆಯನ್ನು ಒದಗಿಸುತ್ತದೆ. ಪ್ರೇಕ್ಷಕರ ಹರ್ಷೋದ್ಗಾರದ ನಡುವೆ ಪ್ರದರ್ಶನ ನೀಡುವುದೇ ಥ್ರಿಲ್ಲಿಂಗ್. ಹಿರಿಯ ಆಟಗಾರರರೊಂದಿಗೆ ಭಾಗವಹಿಸುವುದರಿಂದ ಯುವ ಆಟಗಾರರಿಗೆ ವಿಶೇಷ ಅನುಭವ ಸಿಗುತ್ತದೆ. ಅನುಭವಿಗಳ ಪರಿಣಾಮಕಾರಿ ಆಟ ಮತ್ತು ತಂತ್ರಗಳನ್ನು ಹತ್ತಿರದಿಂದ ಗಮನಿಸಲು ಅವಕಾಶ ಸಿಗುತ್ತದೆ. ಹತ್ತು ಹಲವು ವಿಚಾರಗಳಲ್ಲಿ ಉದಯೋನ್ಮುಖ ಆಟಗಾರರಿಗೆ ಈ ಟೂರ್ನಿ ಸಹಕಾರಿ.

ಮಿತ್ರ: *ಮೈಸೂರು ವಾರಿಯರ್ಸ್ ತಂಡದೊಂದಿಗೆ ಮತ್ತೆ ಗುರುತಿಸಿಕೊಳ್ಳಲು ನಿಮಗೆ ಏನನ್ನಿಸುತ್ತದೆ?*

ಕರುಣ್ ನಾಯರ್: ಮೈಸೂರು ವಾರಿಯರ್ಸ್ ತಂಡದೊಂದಿಗೆ ಮತ್ತೆ ಕೂಡಿಕೊಂಡಿರುವುದು ನಿಜಕ್ಕೂ ಹರ್ಷದಾಯಕ ಅನುಭವ. ಕರ್ನಾಟಕ ಟಿ20 ಕ್ರಿಕೆಟ್ ಕ್ಷೇತ್ರದ ಅತ್ಯುತ್ತಮ ತಂಡ ಮತ್ತು ಫ್ರಾಂಚೈಸಿಯ ಸದಸ್ಯನಾಗಿರುವುದು ತುಂಬಾ ಸಂತೋಷ.

ಹಾಗೆಯೇ ತಂಡಕ್ಕೆ ಕೊಡುಗೆ ನೀಡಲು ಅವಕಾಶ ದೊರೆತಿರುವುದು ನಿಜಕ್ಕೂ ನನಗೆ ದಕ್ಕಿದ ಗೌರವ ಎಂದೇ ಭಾವಿಸುತ್ತೇನೆ. ತಂಡದ ಪರಿಶ್ರಮದ ಪ್ರಯತ್ನಗಳು ಹಾಗೂ ಅದನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡುತ್ತಿರುವ **ಅರ್ಜುನ್ ರಂಗ** ಅವರ ಕಾರ್ಯ ವೈಖರಿ ಶ್ಲಾಘನೀಯ. ಮೈದಾನದಲ್ಲಿ ಉತ್ತಮ ಪ್ರದರ್ಶನ ನೀಡಲು ಅತ್ಯಂತ ಉತ್ಸಾಹದಿಂದಿದ್ದೇನೆ. ನಮ್ಮ ಮೇಲಿನ ವಿಶ್ವಾಸ ಉಳಿಸಿಕೊಳ್ಳಲು ಇದು ಅತ್ಯುತ್ತಮ ಅವಕಾಶ..

ಮಿತ್ರ: *ನಾಯಕನಾಗಿ, ಕಷ್ಟಕರ ಸಂದರ್ಭಗಳಲ್ಲಿ ನಿಮ್ಮ ತಂಡಕ್ಕೆ ಹೇಗೆ ಪ್ರೇರೇಪಿಸುತ್ತೀರಿ?*

ಕರುಣ್ ನಾಯರ್: ತಂಡಕ್ಕೆ ಸದಾ ಪ್ರೇರೇಪಣೆ ನೀಡುವುದು, ಸಕಾರಾತ್ಮಕ ದೃಷ್ಟಿಕೋನವನ್ನು ಕಾಪಾಡಿಕೊಳ್ಳುವುದು ನಾಯಕನ ಮುಖ್ಯ ಕೆಲಸ. ಆಟಕ್ಕೆ ಬದ್ಧವಾಗಿರುವುದರ ಜತೆಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ತಂಡವನ್ನು ಮುನ್ನಡೆಸುವುದು ಮುಖ್ಯ ಧ್ಯೇಯ. ಪ್ರತಿಯೊಂದು ಸಂದರ್ಭದಲ್ಲೂ ಗೆಲುವು ಸಾಧಿಸುವ ಸಂಕಲ್ಪವನ್ನು ಒತ್ತಿಹೇಳುವುದು ಮುಖ್ಯ. ಈ ತತ್ವವು ಮೈಸೂರು ವಾರಿಯರ್ಸ್ ತಂಡದಲ್ಲಿ ಬೇರೂರಿದೆ. ಇಲ್ಲಿ ನಾವೆಲ್ಲರೂ ಪರಿಶ್ರಮದಿಂದ ಆಡಲು ಸಮರ್ಪಿತರಾಗಿದ್ದೇವೆ ಮತ್ತು ಎಂದಿಗೂ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಇದು ಒಬ್ಬ ನಿಜವಾದ ಯೋಧನ ಮನೋಭಾವ.

ಮಿತ್ರ: *ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಆಡಿದಂತಹ ನಿಮ್ಮ ಅನುಭವವನ್ನು ಹಂಚಿಕೊಳ್ಳಬಹುದೇ?*

ಕರುಣ್ ನಾಯರ್: ಇಂಗ್ಲಿಷ್ ಕ್ರಿಕೆಟ್ ಅನ್ನು ವಿಶ್ಲೇಷಿಸುವುದು ಒಂದು ಉತ್ತೇಜಕ ಸಾಹಸ. ನಾನು ಅತ್ಯಂತ ಆಸಕ್ತಿಯಿಂದ ತೊಡಗಿಸಿಕೊಂಡಿದ್ದೆ. ವೈವಿಧ್ಯಮಯ ಸನ್ನಿವೇಶಗಳು ನನಗೆ ಸವಾಲು ಒಡ್ಡುವಂತವು. ಕೌಂಟಿಯಲ್ಲಿನ ಸಕಾರಾತ್ಮಕ ಫಲಿತಾಂಶಗಳೊಂದಿಗೆ ನಾನು ಉತ್ಸಾಹಭರಿತನಾಗಿದ್ದೇನೆ. ಮೈಸೂರು ವಾರಿಯರ್ಸ್‌ಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡಿ ಯಶಸ್ಸು ಸಾಧಿಸುವ ಗುರಿ ಹೊಂದಿದ್ದೇನೆ.

ಮಿತ್ರ: *ಅಂತಿಮವಾಗಿ, ನಿಮ್ಮ ಬಗ್ಗೆ ಜನರಿಗೆ ತಿಳಿದಿಲ್ಲದ ಏನನ್ನಾದರೂ ನಮಗೆ ತಿಳಿಸಬಹುದೇ?*

ಕರುಣ್ ನಾಯರ್: ನನ್ನ ಬಗ್ಗೆ ಹೇಳುವುದು ಹೆಚ್ಚೇನೂ ಇಲ್ಲ; ಜನರು ಈಗಾಗಲೇ ನನ್ನ ಬಗ್ಗೆ ಅಧಿಕ ಮಾಹಿತಿ ಹೊಂದಿದ್ದಾರೆ.

ಮಹಾರಾಜ ಟ್ರೋಫಿ

ಕೆಎಸ್‌ಸಿಎ ಟಿ–20 ಕ್ರಿಕೆಟ್ ಪಂದ್ಯಾವಳಿ ವೇಳಾಪಟ್ಟಿ

ಆಗಸ್ಟ್ 13ರಿಂದ ಆಗಸ್ಟ್ 29ರವರೆಗೆ

ದಿನಾಂಕ	ಪಂದ್ಯ	ಸಮಯ
ಆ.13	ಗುಲ್ಬರ್ಗ ಮಿಸ್ಟಿಕ್ಸ್ v/s ಬೆಂಗಳೂರು ಬ್ಲಾಸ್ಟರ್ಸ್ ಹುಬ್ಬಳ್ಳಿ ಟೈಗರ್ಸ್ v/s ಮೈಸೂರು ವಾರಿಯರ್ಸ್	1 ಗಂಟೆ 5.30
ಆ.14	ಮಂಗಳೂರು ಡ್ರಾಗನ್ಸ್ v/s ಶಿವಮೊಗ್ಗ ಲಯನ್ಸ್ ಗುಲ್ಬರ್ಗ ಮಿಸ್ಟಿಕ್ಸ್ v/s ಹುಬ್ಬಳ್ಳಿ ಟೈಗರ್ಸ್	1 ಗಂಟೆ 5.30
ಆ.15	ಮೈಸೂರು ವಾರಿಯರ್ಸ್ v/s ಮಂಗಳೂರು ಡ್ರಾಗನ್ಸ್ ಶಿವಮೊಗ್ಗ ಲಯನ್ಸ್ v/s ಬೆಂಗಳೂರು ಬ್ಲಾಸ್ಟರ್ಸ್	1 ಗಂಟೆ 5.30
ಆ.16	ಬೆಂಗಳೂರು ಬ್ಲಾಸ್ಟರ್ಸ್ v/s ಹುಬ್ಬಳ್ಳಿ ಟೈಗರ್ಸ್ ಮೈಸೂರು ವಾರಿಯರ್ಸ್ v/s ಗುಲ್ಬರ್ಗ ಮಿಸ್ಟಿಕ್ಸ್	1 ಗಂಟೆ 5.30
ಆ.17	ಗುಲ್ಬರ್ಗ ಮಿಸ್ಟಿಕ್ಸ್ v/s ಶಿವಮೊಗ್ಗ ಲಯನ್ಸ್ ಮಂಗಳೂರು ಡ್ರಾಗನ್ಸ್ v/s ಹುಬ್ಬಳ್ಳಿ ಟೈಗರ್ಸ್	1 ಗಂಟೆ 5.30
ಆ.18	ಶಿವಮೊಗ್ಗ ಲಯನ್ಸ್ v/s ಮೈಸೂರು ವಾರಿಯರ್ಸ್ ಮಂಗಳೂರು ಡ್ರಾಗನ್ಸ್ v/s ಬೆಂಗಳೂರು ಬ್ಲಾಸ್ಟರ್ಸ್	1 ಗಂಟೆ 5.30
ಆ.19	ಬೆಂಗಳೂರು ಬ್ಲಾಸ್ಟರ್ಸ್ v/s ಮೈಸೂರು ವಾರಿಯರ್ಸ್ ಹುಬ್ಬಳ್ಳಿ ಟೈಗರ್ಸ್ v/s ಶಿವಮೊಗ್ಗ ಲಯನ್ಸ್	1 ಗಂಟೆ 5.30
ಆ.20	ಮೈಸೂರು ವಾರಿಯರ್ಸ್ v/s ಹುಬ್ಬಳ್ಳಿ ಟೈಗರ್ಸ್ ಗುಲ್ಬರ್ಗ ಮಿಸ್ಟಿಕ್ಸ್ v/s ಮಂಗಳೂರು ಡ್ರಾಗನ್ಸ್	1 ಗಂಟೆ 5.30
ಆ.21	ಶಿವಮೊಗ್ಗ ಲಯನ್ಸ್ v/s ಗುಲ್ಬರ್ಗ ಮಿಸ್ಟಿಕ್ಸ್ ಬೆಂಗಳೂರು ಬ್ಲಾಸ್ಟರ್ v/s ಮಂಗಳೂರು ಡ್ರಾಗನ್ಸ್	1 ಗಂಟೆ 5.30
ಆ.22	ಹುಬ್ಬಳ್ಳಿ ಟೈಗರ್ಸ್ v/s ಬೆಂಗಳೂರು ಬ್ಲಾಸ್ಟರ್ಸ್ ಮೈಸೂರು ವಾರಿಯರ್ಸ್ v/s ಶಿವಮೊಗ್ಗ ಲಯನ್ಸ್	1 ಗಂಟೆ 5.30
ಆ.23	ಹುಬ್ಬಳ್ಳಿ ಟೈಗರ್ಸ್ v/s ಗುಲ್ಬರ್ಗ ಮಿಸ್ಟಿಕ್ಸ್ ಮಂಗಳೂರು ಡ್ರಾಗನ್ಸ್ v/s ಮೈಸೂರು ವಾರಿಯರ್ಸ್	1 ಗಂಟೆ 5.30
ಆ.24	ಶಿವಮೊಗ್ಗ ಲಯನ್ಸ್ v/s ಮಂಗಳೂರು ಡ್ರಾಗನ್ಸ್ ಬೆಂಗಳೂರು ಬ್ಲಾಸ್ಟರ್ಸ್ v/s ಗುಲ್ಬರ್ಗ ಮಿಸ್ಟಿಕ್ಸ್	1 ಗಂಟೆ 5.30
ಆ.25	ಮೈಸೂರು ವಾರಿಯರ್ಸ್ v/s ಬೆಂಗಳೂರು ಬ್ಲಾಸ್ಟರ್ಸ್ ಶಿವಮೊಗ್ಗ ಲಯನ್ಸ್ v/s ಹುಬ್ಬಳ್ಳಿ ಟೈಗರ್ಸ್	1 ಗಂಟೆ 5.30
ಆ.26	ಹುಬ್ಬಳ್ಳಿ ಟೈಗರ್ಸ್ v/s ಮಂಗಳೂರು ಡ್ರಾಗನ್ಸ್ ಗುಲ್ಬರ್ಗ ಮಿಸ್ಟಿಕ್ಸ್ v/s ಮೈಸೂರು ವಾರಿಯರ್ಸ್	1 ಗಂಟೆ 5.30
ಆ.27	ಮಂಗಳೂರು ಡ್ರಾಗನ್ಸ್ v/s ಗುಲ್ಬರ್ಗ ಮಿಸ್ಟಿಕ್ಸ್ ಬೆಂಗಳೂರು ಬ್ಲಾಸ್ಟರ್ಸ್ v/s ಶಿವಮೊಗ್ಗ ಲಯನ್ಸ್	1 ಗಂಟೆ 5.30
ಆ.28	ಮೊದಲ ಸೆಮಿಫೈನಲ್ ಎರಡನೇ ಸೆಮಿಫೈನಲ್	1 ಗಂಟೆ 5.30
ಆ.29	ಫೈನಲ್	5.30

ಸ್ಥಳ: ಎಲ್ಲ ಪಂದ್ಯಗಳು ಬೆಂಗಳೂರಿನ ಎಂ. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ

ವಿ.ಸೂ: ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ–20 ಪಂದ್ಯಗಳು ಸ್ಟಾರ್ ಸ್ಪೋರ್ಟ್ಸ್ 2 ಮತ್ತು ಸ್ಟಾರ್ ಸ್ಪೋರ್ಟ್ಸ್ 1 ಕನ್ನಡ ಟಿವಿ ಚಾನೆಲ್‌ನಲ್ಲಿ ಪ್ರಸಾರವಾಗಲಿದೆ.
Fancode ಆ್ಯಪ್‌ನಲ್ಲಿ ಲೈವ್ ಸ್ಟ್ರೀಮಿಂಗ್

ಮಧ್ಯಮ ಓವರ್‌ಗಳಲ್ಲಿ ಸ್ಥಿರ, ಪರಿಣಾಮಕಾರಿ ಪ್ರದರ್ಶನ: ಪ್ರಸಿದ್ಧ್ ಕೃಷ್ಣ

ಕ್ರಿಕೆಟ್ ಜಗತ್ತಿನಲ್ಲಿ, ಕನಸುಗಳು ಬ್ಯಾಟ್ ಮತ್ತು ಚೆಂಡಿನ ಆಕಾರವನ್ನು ಪಡೆದುಕೊಳ್ಳುತ್ತವೆ. ಯುವ ವೇಗಿ ಪ್ರಸಿದ್ಧ್ ಕೃಷ್ಣ ಅವರ ವೃತ್ತಿ ಬದುಕಿನ ಪಯಣವು ಸಮರ್ಪಣೆ, ಶಿಸ್ತು ಮತ್ತು ಶ್ರೇಷ್ಠತೆಯ ಅಚಲ ಅನ್ವೇಷಣೆಗೆ ಸಾಕ್ಷಿಯಾಗಿದೆ. ಅವರ ಸಾಧನೆ ಹಾದಿಯು ಅಸಂಖ್ಯಾತ ಯುವ ಕ್ರಿಕೆಟಿಗರಿಗೆ ಸ್ಫೂರ್ತಿಯಾಗಿದೆ. ಎತ್ತರದ ಮೈಕಟ್ಟು, 140 ಕಿ.ಮೀ. ವೇಗದಲ್ಲಿ ಬೌಲಿಂಗ್‌ಗೆ ಅನುವು ಮಾಡಿಕೊಡುತ್ತದೆ. ಇದು ಇನ್ನಿಂಗ್ಸ್ ಮಧ್ಯದಲ್ಲಿ ಪಂದ್ಯದ ಗತಿ ಬದಲಿಸಲು ಪ್ರಮುಖ ಅಂಶವನ್ನಾಗಿಸಿದೆ. ಮೈಸೂರು ವಾರಿಯರ್ಸ್‌ನೊಂದಿಗೆ ಹೊಸ ಸವಾಲುಗಳನ್ನು ಸ್ವೀಕರಿಸಲು ಸಜ್ಜಾಗಿದ್ದಾರೆ ಪ್ರಸಿದ್ಧ್ ಕೃಷ್ಣ "ಮೈಸೂರು ಮಿತ್ರ"ನೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು ಪ್ರಸಿದ್ಧ್ ಕೃಷ್ಣ.

ಮೈಸೂರು ಮಿತ್ರ: *ಯುವ ಕ್ರಿಕೆಟಿಗನಾಗಿ ನಿಮ್ಮ ಪಯಣದ ಬಗ್ಗೆ ತಿಳಿಸಿ?*

ಪ್ರಸಿದ್ಧ್ ಕೃಷ್ಣ: ಯುವ ಉತ್ಸಾಹಿ ಕ್ರಿಕೆಟರ್ ಆಗಿ ಭಾರತವನ್ನು ಪ್ರತಿನಿಧಿಸುವವರೆಗಿನ ನನ್ನ ಹಾದಿಯು ಸಾಕಷ್ಟು ಏಳುಬೀಳು, ಯಶಸ್ಸಿನಿಂದ ಕೂಡಿದೆ. ಎಲ್ಲ ಭಾರತೀಯರಂತೆ, ನಾನು ಕೂಡ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ಆಸಕ್ತಿ ಬೆಳೆಸಿಕೊಂಡಿದ್ದೆ. ಸ್ನೇಹಿತರೊಂದಿಗೆ ನಿರಂತರ ಕ್ರಿಕೆಟ್ ಆಡುತ್ತಿದ್ದೆ. ಒಂದು ದಿನ, ನನ್ನ ಪೋಷಕರು ನನ್ನನ್ನು ಶಿಬಿರಕ್ಕೆ ಸೇರಿಸಿದರು. ಅದು ನನ್ನ ಕ್ರಿಕೆಟ್ ಪಯಣದ ಆರಂಭಕ್ಕೆ ನಾಂದಿ ಹಾಡಿತು. ಇದು ಶಾಲಾ ಪಂದ್ಯಗಳು, ವಲಯ ಸ್ಪರ್ಧೆಗಳು, 14, 16 ವರ್ಷದೊಳಗಿನ ಮತ್ತು 19 ವರ್ಷದೊಳಗಿನವರ ವಿಭಾಗಗಳಲ್ಲಿ, ರಾಜ್ಯ ಮಟ್ಟದ ಪಂದ್ಯಗಳಲ್ಲಿ ಆಡಲು ದಾರಿ ಮಾಡಿಕೊಟ್ಟಿತು, ಏನಾದರೂ ಸಾಧಿಸಬೇಕೆಂಬ ಛಲ, ಉತ್ಸಾಹ ನನ್ನಲ್ಲಿ ಹೆಚ್ಚಾಯಿತು.

ನಾನು ಕರ್ನಾಟಕವನ್ನು ಪ್ರತಿನಿಧಿಸಲು ಆಯ್ಕೆಯಾಗುತ್ತಿದ್ದಂತೆ ನನ್ನ ಜೀವನದಲ್ಲಿ ಕ್ರಿಕೆಟ್ ಮಹತ್ವದ ಪಾತ್ರವನ್ನು ಪಡೆದುಕೊಂಡಿತು. ಅದುವೇ ವೃತ್ತಿಜೀವನವೂ ಆಯಿತು. ಪರಿಶ್ರಮದಿಂದ ಒಂದೊಂದೇ ಹೆಜ್ಜೆ ಇಡಲು ಪ್ರಾರಂಭಿಸಿದೆ. ಇದು ಹಿರಿಯರ ತಂಡದಲ್ಲಿ ಚೊಚ್ಚಲ ಪ್ರವೇಶಕ್ಕೆ ಕಾರಣವಾಯಿತು. ಆ ಹಂತದಿಂದ, ಹೆಚ್ಚು ಸಮರ್ಪಣೆ ಮತ್ತು ಶಿಸ್ತಿನ ಕಠಿಣ ಪರಿಶ್ರಮ ನನ್ನನ್ನು ಪ್ರಸ್ತುತ ಸ್ಥಾನಕ್ಕೆ ತಂದು ನಿಲ್ಲಿಸಿದೆ.



ಮಿತ್ರ: *ಕರ್ನಾಟಕ ರಣಜಿ ಟ್ರೋಫಿ ತಂಡದಲ್ಲಿ ಹಿರಿಯ ಆಟಗಾರರೊಂದಿಗೆ ಆಡಿದ್ದು ನಿಮ್ಮ ಮೇಲೆ ಯಾವ ರೀತಿ ಪ್ರಭಾವ ಬೀರಿದೆ?*

ಪ್ರಸಿದ್ಧ್ ಕೃಷ್ಣ: ಕರ್ನಾಟಕ ತಂಡದ ಭಾಗಿಯಾಗಿದ್ದು, ನಾನು ವೈಯಕ್ತಿಕ ಅನುಭವ ಮಹತ್ವದ ಘಟ್ಟವಾಗಿದೆ. ಭಾರತ ತಂಡವನ್ನು ಪ್ರತಿನಿಧಿಸಿದ್ದ ಹಿರಿಯ ಆಟಗಾರರೂ ತಂಡದಲ್ಲಿ ಇದ್ದದ್ದು ನನಗೆ ಕಲಿಯಲು ಹೆಚ್ಚು ಅನುಕೂಲವಾಯಿತು. ಅವರ ಗಮನಾರ್ಹ ಶಿಸ್ತು, ಚುರುಕಾದ ಆಟದ ಲಯ, ಗೆಲ್ಲುವ ಸಾಮರ್ಥ್ಯ ನಿಜಕ್ಕೂ ಅದ್ಭುತವಾಗಿತ್ತು. ಇದು ನನ್ನಲ್ಲಿ ಆತ್ಮವಿಶ್ವಾಸ ಇಮ್ಮಡಿಗೊಳಿಸಿತು. ಕರ್ನಾಟಕ ಕ್ರಿಕೆಟ್‌ನೊಂದಿಗಿನ ನನ್ನ ಒಡನಾಟ, ನನ್ನ ವೃತ್ತಿ ಬದುಕಿನ ಶ್ರೇಷ್ಠ ಸಾಧನೆ ಎಂದು ನಾನು ಪರಿಗಣಿಸುತ್ತೇನೆ ಮತ್ತು ಈ ಗಮನಾರ್ಹ ಹಂತವು ನನ್ನ ಪಾಲಿಗೆ "ವಿಶೇಷ ಟಾನಿಕ್" ಆಗಿದೆ.

ಮಿತ್ರ: *ಐಪಿಎಲ್‌ನಲ್ಲಿ ಆಡಿದ ಅನುಭವವನ್ನು ಮಹಾರಾಜ ಟ್ರೋಫಿ ಟಿ20 ಯಲ್ಲಿ ಮೈಸೂರು ವಾರಿಯರ್ಸ್‌ಗಾಗಿ ಆಡಿದ ಅನುಭವವನ್ನು ಹೇಗೆ ಹೋಲಿಸುವಿರಿ?*

ಪ್ರಸಿದ್ಧ್ ಕೃಷ್ಣ: ಐಪಿಎಲ್‌ನಲ್ಲಿ ಆಡಿದ್ದು ಹಾಗೂ ಮಹಾರಾಜ ಟ್ರೋಫಿ ಟಿ 20 ಯಲ್ಲಿ ಮೈಸೂರು ವಾರಿಯರ್ಸ್ ಪರವಾಗಿ ಆಡಿದ ಅನುಭವವೇ ವಿಭಿನ್ನವಾದುದು. ಕರ್ನಾಟಕದ ಆಟಗಾರರು ಸಹ ಆಟಗಾರರಾಗಿರುವುದು ಒಂದು ವಿಶಿಷ್ಟ ಮೋಡಿಯಾಗಿದೆ. ಪರಿಚಿತತೆ ಮತ್ತು ಪರಸ್ಪರ ಅನುಭವ ವಿನಿಮಯ, ಸೌಹಾರ್ದತೆ, ಜೊತೆಯಲ್ಲಿ ಆಡುತ್ತಾ ಬೆಳೆಯುವುದು ನಿಜಕ್ಕೂ ಅದ್ಭುತ ಅನುಭವ. ಮಹಾರಾಜ ಟ್ರೋಫಿಯಲ್ಲಿ ಪಾಲ್ಗೊಳ್ಳುವ ಆಟಗಾರರು ವಿಶೇಷ ಪ್ರತಿಭೆಗಳ ಅನನ್ಯ ಮಿಶ್ರಣವಾಗಿದೆ. ಇದು ಅತ್ಯುತ್ತಮ ಆಟಗಾರರನ್ನು ಒಟ್ಟುಗೂಡಿಸುತ್ತದೆ. ಮತ್ತೊಂದೆಡೆ, ಐಪಿಎಲ್ ಉನ್ನತಮಟ್ಟದ ಆಕ್ರಮಣಶೀಲತೆ ಬೆಳೆಸುತ್ತದೆ. ರಾಷ್ಟ್ರದಾದ್ಯಂತದ ಉನ್ನತ ದರ್ಜೆಯ ಆಟಗಾರರನ್ನು ಒಳಗೊಂಡಿರುತ್ತದೆ. ಈ ಕ್ರಿಯಾತ್ಮಕ ಸೆಟ್ಟಿಂಗ್ ಸಾಂಸ್ಕೃತಿಕ ವಿನಿಮಯಕ್ಕೆ ಅವಕಾಶ ನೀಡುತ್ತದೆ, ಏಕೆಂದರೆ ವಿಭಿನ್ನ ಹಿನ್ನೆಲೆಯ ವ್ಯಕ್ತಿಗಳು ಒಟ್ಟಿಗೆ ಸೇರುತ್ತಾರೆ, ವಿಭಿನ್ನ ಸಂಸ್ಕೃತಿಗಳ ಬಗ್ಗೆ ಒಬ್ಬರ ತಿಳುವಳಿಕೆ ಮತ್ತು ಮೆಚ್ಚುಗೆಯನ್ನು ಪುಷ್ಟೀಕರಿಸುತ್ತದೆ. ಎರಡೂ ಪ್ರಯಾಣವು ವೃತ್ತಿ ಬದುಕಿನಲ್ಲಿ ಶ್ರೀಮಂತ ಅನುಭವ ಕಲ್ಪಿಸಿ ಕೊಟ್ಟಿದೆ.

ಮಿತ್ರ: *ಮೊದಲ ಬಾರಿಗೆ ವಾರಿಯರ್ ಆಗಿರುವುದು ಹೇಗನಿಸುತ್ತದೆ?*

ಪ್ರಸಿದ್ಧ್ ಕೃಷ್ಣ: ಮೊದಲ ಬಾರಿಗೆ ವಾರಿಯರ್ ಆಗಿ, ನನ್ನ ಭಾವನೆಗಳನ್ನು ಪದಗಳಲ್ಲಿ ವಿವರಿಸಲು ಆಗುತ್ತಿಲ್ಲ. ತಂಡದ ಅಸಾಧಾರಣ ಶಿಸ್ತು ಮತ್ತು ಉತ್ಸಾಹ ಗಮನಾರ್ಹವಾಗಿದೆ. ಆಟಗಾರರಲ್ಲಿ ಮಾತ್ರವಲ್ಲದೆ ಮಾಲೀಕರಿಂದ, ಸಹಾಯಕ ಸಿಬ್ಬಂದಿಯಲ್ಲೂ ಕಂಡು ಬರುತ್ತಿರುವುದು ಸಂತಸದಾಯಕ. ಸಿಕ್ಕಿರುವ ಈ ಅವಕಾಶಕ್ಕಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಮಿತ್ರ: *ಯುವ ಮಹತ್ವಾಕಾಂಕ್ಷಿ ಕ್ರಿಕೆಟಿಗರಿಗೆ ನಿಮ್ಮ ಸಲಹೆ ಏನು?*

ಪ್ರಸಿದ್ಧ್ ಕೃಷ್ಣ: ಅತೀ ಉತ್ಸಾಹದಿಂದ ಆಟದಲ್ಲಿ ತೊಡಗಿಸಿಕೊಳ್ಳಿ, ಹೆಚ್ಚು ಅಭಿಮಾನವನ್ನು ಬೆಳೆಸಿಕೊಳ್ಳಿ. ಶಿಸ್ತು ಮತ್ತು ಶ್ರದ್ಧೆಯ ಪ್ರಯತ್ನಕ್ಕೆ ಆದ್ಯತೆ ನೀಡಿ, ಯಶಸ್ಸು ಸಹಜವಾಗಿಯೇ ಸಿಗುತ್ತದೆ. ಅನಗತ್ಯ ಒತ್ತಡ ತಪ್ಪಿಸಿ. ಆಟದ ಆನಂದವನ್ನು ಅನುಭವಿಸಿ. ಶಿಸ್ತಿನ ಬಲವಾದ ಪ್ರಜ್ಞೆ ಸದಾ ಇರಿಸಿಕೊಳ್ಳಿ. ಒಟ್ಟಾರೆ, ಸದಾ ಆಟವನ್ನು ಅನುಭವಿಸಬೇಕು.

ಮೈಸೂರು ವಾರಿಯರ್ಸ್ ಆಟಗಾರರು


ಕರುಣ್ ನಾಯರ್ (ನಾಯಕ)
ಬಲಗೈ ಬ್ಯಾಟ್ಸ್‌ಮನ್, ಆಫ್ ಸ್ಪಿನ್ ಬೌಲರ್


ಪ್ರಸಿದ್ಧ್ ಕೃಷ್ಣ
ಬಲಗೈ ಬ್ಯಾಟ್ಸ್‌ಮನ್ ಬಲಗೈ ಬೌಲರ್


ಜೆ. ಸುಚಿತ್
ಎಡಗೈ ಸ್ಪಿನ್ನರ್, ಎಡಗೈ ಬ್ಯಾಟ್ಸ್‌ಮನ್


ಆರ್ ಸಮರ್ಥ್
ಬಲಗೈ ಬ್ಯಾಟ್ಸ್‌ಮನ್, ಆಫ್ ಸ್ಪಿನ್ನರ್


ಮನೋಜ್ ಭಾಂಗಡೆ
ಎಡಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ


ಸಿ.ಎ. ಕಾರ್ತಿಕ್
ಬಲಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ


ಶೋಯೇಬ್ ಮ್ಯಾನೇಜರ್
ಬಲಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ


ಎಸ್. ರಕ್ಷಿತ್
ಬಲಗೈ ಬ್ಯಾಟ್ಸ್‌ಮನ್, ವಿಕೆಟ್ ಕೀಪರ್


ಎಂ. ವೆಂಕಟೇಶ್
ಬಲಗೈ ಮಧ್ಯಮ ವೇಗಿ, ಎಡಗೈ ಬ್ಯಾಟ್ಸ್‌ಮನ್


ಕುಶಾಲ್ ವಾಧ್ವಾನಿ
ಬಲಗೈ ಬ್ಯಾಟ್ಸ್‌ಮನ್, ಬಲಗೈ ಲೆಗ್ ಸ್ಪಿನ್ನರ್


ಭರತ್ ಧುರಿ
ಬಲಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ


ಮೋನಿಷ್ ರೆಡ್ಡಿ
ಬಲಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ


ತುಷಾರ್ ಸಿಂಗ್
ಬಲಗೈ ಬ್ಯಾಟ್ಸ್‌ಮನ್, ವಿಕೆಟ್ ಕೀಪರ್


ಶ್ರೀಶಾ ಎಸ್. ಆಚಾರ್
ಎಡಗೈ ಬ್ಯಾಟ್ಸ್‌ಮನ್, ಎಡಗೈ ಸ್ಪಿನ್ನರ್



ರಾಹುಲ್ ಸಿಂಗ್ ರಾವತ್
ಎಡಗೈ ಬ್ಯಾಟ್ಸ್‌ಮನ್, ವಿಕೆಟ್ ಕೀಪರ್


ಶಶಿಕುಮಾರ್
ಬಲಗೈ ಬ್ಯಾಟ್ಸ್‌ಮನ್, ಬಲಗೈ ಆಫ್ ಸ್ಪಿನ್ನರ್


ಆದಿತ್ಯ ಮಣಿ
ಬಲಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ


ಗೌತಮ್ ಮಿಶ್ರಾ
ಬಲಗೈ ಬ್ಯಾಟ್ಸ್‌ಮನ್, ಎಡಗೈ ಮಧ್ಯಮ ವೇಗಿ


ಕೆ.ಎಸ್.ಲಂಕೇಶ್
ಎಡಗೈ ಬ್ಯಾಟ್ಸ್‌ಮನ್, ಎಡಗೈ ಸ್ಪಿನ್ನರ್


ಗೌತಮ್ ಸಾಗರ್
ಬಲಗೈ ಬ್ಯಾಟ್ಸ್‌ಮನ್, ಬಲಗೈ ಮಧ್ಯಮ ವೇಗಿ

ಸಿಎಂ ಸಿದ್ದರಾಮಯ್ಯನವರಿಂದ ನಾನು ಶಾಸಕನಾದೆ...

● ಸಿದ್ದರಾಮಯ್ಯ ಹುಟ್ಟುಹಬ್ಬದಲ್ಲಿ ಹಾಡಿ ಹೊಗಳಿದ ಶಾಸಕ ಅನಿಲ್ ಚಿಕ್ಕಮಾದು
● ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ, ಆರೋಗ್ಯ ಶಿಬಿರ, ದೇವಸ್ಥಾನದಲ್ಲಿ ವಿಶೇಷ ಪೂಜೆ



ಹೆಚ್.ಡಿ.ಕೋಟೆ, ಆ.12– ಹೆಚ್. ಡಿ. ಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ ನಾನು ತಾಲೂಕಿನ ಜನರ ಸೇವೆ ಮಾಡಲು ಅವಕಾಶ ಕಲ್ಪಿಸಿ ಕೊಟ್ಟವರು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ಹೆಚ್. ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 76ನೇ ಹುಟ್ಟುಹಬ್ಬದ ಕಾರ್ಯಕ್ರಮವನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ, ಅವರು ಮಾತನಾಡಿದರು.

ಕ್ಷೇತ್ರದಲ್ಲಿ ನಾನು ತಾಲೂಕಿನ ಜನತೆ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಟ್ಟವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶೀರ್ವಾದ ಹಾಗೂ ಅವರ ಮಾರ್ಗದರ್ಶನದಿಂದಲೇ ಕಳೆದ 5 ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇನೆ ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ದಿ.ಆರ್.ಧ್ರುವನಾರಾಯಣ್ ಅವರ ಆಶೀರ್ವಾದದಿಂದ ಎರಡನೇ ಬಾರಿಗೆ ತಾಲೂಕಿನ ಜನತೆ ಮತ್ತೊಮ್ಮೆ ನನ್ನನ್ನು ಶಾಸಕನಾಗಿ ಆಶೀರ್ವಾದ ಮಾಡಿದ್ದಾರೆ ಎಂದರು. ಭಾರತದ ಇತಿಹಾಸದಲ್ಲಿ ಯಾವ ರಾಜ್ಯ ದಲ್ಲಿಯೂ ಇಂತ ದೊಡ್ಡ ಬಜೆಟ್ ಮಂಡಿಸಿಲ್ಲ. ದೇಶದಲೇ ಬೆಸ್ಟ್ ಮುಖ್ಯಮಂತ್ರಿ ಸ್ಥಾನ ಪಡೆದು ದೊಡ್ಡ ಅಭಿಮಾನಿ ಬಳಗವನ್ನು ನಿರ್ಮಿಸಿದ್ದಾರೆ. ಚುನಾವಣಾ ಪೂರ್ವದಲ್ಲಿ ಭರವಸೆ ನೀಡಿದಂತೆ ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ ಎಲ್ಲಾ ಸಮುದಾಯಕ್ಕೆ ಸಾಮಾ ಜಿಕ ನ್ಯಾಯ ಕೊಟ್ಟ ನ್ಯಾಯವಾದಿಗಳು ಸಿದ್ದ ರಾಮಯ್ಯನವರು ಎಂದು ಹಾಡಿ ಹೊಗಳಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಅಭಿಮಾನಿಗಳು ಪೂಜೆ ಸಲ್ಲಿಸಿ ನಂತರ ಸಾರ್ವಜನಿಕ ಆಸ್ಪತ್ರೆ ಹಾಗೂ ಬೋಚಿಕಟ್ಟೆ ಗ್ರಾಮದಲ್ಲಿ ಇರುವ ಚಿತ್ತಧಾಮದಲ್ಲಿ ಹಣ್ಣು–ಹಂಪಲ ವಿತರಣೆ ಮಾಡಿದರು.

ಇದೇ ಸಂಧರ್ಭದಲ್ಲಿ ಮೈಸೂರಿನ ಸುಯೋಗ್ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕುರುಬ ಸಮಾಜದ ಹಿರಿಯರಾದ ನಾಗೇಗೌಡ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಅತಿಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಾದ ತಮನ, ಸಂಗೀತ, ಕಾರ್ತಿಕ್, ನಂದೇಶ್, ಅಭಿಶೇಕ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಮಣ್ಯ, ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ಎಚ್.ಡಿ. ಕೋಟೆ ತಾಲೂಕು ಅಧ್ಯಕ್ಷ ಮೊಳಿಯೂರ್ ಆನಂದ್, ಉಪಾಧ್ಯಕ್ಷರುಗಳಾದ ಕುಮಾರ್, ಎಂ. ರವಿ, ವೀರೇಗೌಡ, ಪ್ರದಾನ ಕಾರ್ಯ ದರ್ಶಿ ಚಿಕ್ಕಣ್ಣ, ರಾಜ್ಯ ಭೋವಿ ನಿಗಮದ ಮಾಜಿ ಅಧ್ಯಕ್ಷ ಜಿ. ವಿ. ಸೀತಾರಾವ್, ಜಿಪಂ ಮಾಜಿ ಸದಸ್ಯರುಗಳಾದ ಚಿಕ್ಕವೀರನಾಯಕ, ಹೆಚ್.ಸಿ.ಮಂಜುನಾಥ, ನಂದಿನಿ, ಭಾಗ್ಯಲಕ್ಷ್ಮಿ, ರವಿ, ಮೈಮುಲ್ ನಿರ್ದೇಶಕ ಹಿರೇಗೌಡ, ಜೈ ಕರ್ನಾಟಕ ಸಂಘಟನಾ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಕುರುಬ ಸಮಾಜದ ಮುಖಂಡರಾದ ಬೈಪಾಸ್ ಮಂಜು, ರಾಜೇಗೌಡ, ಎಂ.ಆರ್. ಗಿರೀಶ್ ಕುಮಾರ್, ಶಿವರಾಜು, ಮಂಜು, ಕಾರ್ ಮಾದೇವ, ಮರಿಸ್ವಾಮಿ, ನಾಗೇಗೌಡ, ಶಿವಮಲ್ಲಪ್ಪ ತಮ್ಮಣ್ಣ, ಕರಿಯಪ್ಪ ಮಾದೇವ, ರವಿಗೌಡ, ಕಾರ್ತಿಕ್, ಆಟೋ ರಮೇಶ್, ಸೋಮೇಗೌಡ, ರಾಮಕೃಷ್ಣ, ಕುಮಾರ್, ಪುಟ್ಟೇಗೌಡ, ಪರಶಿವಮೂರ್ತಿ, ಪ್ರದೀಪ್, ಅಶೋಕ್, ಶಂಭುಲಿಂಗ ನಾಯಕ, ಭಾಸ್ಕರ್, ಸಮಾಜದ ಮುಖಂಡರುಗಳು ಹಾಜರಿದ್ದರು.



ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಅವರು ಮೈಸೂರಿನ ತಮ್ಮ ನಿವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭೇಟಿ ನೀಡಿದ್ದ ವೇಳೆ ಹೂಗುಚ್ಛ ನೀಡಿ ಹುಟ್ಟುಹಬ್ಬದ ಶುಭಾಶಯವನ್ನು ಕೋರಿದರು. ಈ ವೇಳೆ ಮುಖಂಡರಾದ ಮರಿಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.



ನಂಜನಗೂಡು ತಾಲೂಕಿನ ದೇವಿರಾಶೆಟ್ಟಿ ಪುರ ಗ್ರಾಪಂ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಶಿಲ್ಪ ಸುರೇಶ್, ಉಪಾಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಬಿ.ಟಿ.ಕುಮಾರ್ ಆಯ್ಕೆಯಾದರು. ಈ ವೇಳೆ ಗ್ರಾಪಂ ಸದಸ್ಯರುಗಳಾದ ಸಿದ್ದರಾಜು, ವಿಶಾಲಾಕ್ಷಿ, ಜಗದೀಶ್, ಪಾಂಡು, ಜವರೇಗೌಡ, ಸೋಮನಾಯಕ, ಪುಟ್ಟಮ್ಮ, ಭಾನು ಬೇಗಂ, ಮುಖಂಡರುಗಳಾದ ಗೋವಿಂದರಾಜು, ಶಿವನಾಗಪ್ಪ ಸಿದ್ದರಾಜು, ರಾಜಶೇಖರಪ್ಪ ಪಟೇಲ್, ನಾಗೇಶ್, ಸೇರಿದಂತೆ ಪ್ರಮುಖರು ಹಾಜರಿದ್ದರು.

ಬಡ್ಡಿ ಸಾಲ ಬೇಡ, ಶೂನ್ಯ ಬಡ್ಡಿಯ ಸಾಲ ಪಡೆಯಿರಿ

ಶಾಸಕ ಜಿ.ಡಿ. ಹರೀಶ್‌ಗೌಡ ರೈತರಲ್ಲಿ ಮನವಿ



ಹಿರೀಕ್ಯಾತನಹಳ್ಳಿ, ಆ.12– ರೈತರು ಬಡ್ಡಿಗೆ ಸಾಲ ಪಡೆಯದೆ ಸಹಕಾರ ಸಂಘಗಳಿಂದ ಶೂನ್ಯ ಬಡ್ಡಿಯಲ್ಲಿ ನೀಡುವ ಸಾಲ ಪಡೆದು ಬೇಸಾಯ ಮಾಡಬೇಕೆಂದು ಶಾಸಕ ಜಿ.ಡಿ. ಹರೀಶ್ ಗೌಡ ಮನವಿ ಮಾಡಿದ್ದಾರೆ.

ಹುಣಸೂರು ತಾಲೂಕಿನ ಕಟ್ಟೆ ಮಳಲವಾಡಿ ಗ್ರಾಮದ ರೈತ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮೈಸೂರು ಜಿಲ್ಲಾ ಸಹಕಾರ ಬ್ಯಾಂಕ್ ವತಿಯಿಂದ ಸುಮಾರು 3 ಲಕ್ಷ ರೂ. ವೆಚ್ಚದಲ್ಲಿ ಪೀಠೋಪಕರಣ ಹಾಗೂ ನವೀಕರಣಗೊಂಡ ಕೌಂಟರ್ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಅತಿಯಾದ ಬಡ್ಡಿ ಕಟ್ಟಿ ಲಾಭ ಕಾಣದೆ ಇರುವಾಗ ಸಹಕಾರ ಬ್ಯಾಂಕುಗಳು ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದು, ರೈತರು ಇದನ್ನು ಸದುಪಯೋಗಪಡಿಸಿಕೊಂಡು ಉತ್ತಮ ಜೀವನ ಸಾಗಿಸುವುದರೊಂದಿಗೆ ಬೆಳೆ ಲಾಭಗಳಿಸಿ ಮಕ್ಕಳ ವಿದ್ಯಾಭ್ಯಾಸಕಡೆಗೆ ಹೆಚ್ಚು ಒತ್ತು ನೀಡಿ ಎಂದರು.

ಈ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸುಮಾರು 90ಕ್ಕೂ ಹೆಚ್ಚು ರೈತರಿಗೆ 1 ಕೋಟಿಗೂ ಹೆಚ್ಚು ವಿವಿಧ ರೀತಿಯ ಬೆಳೆ ಸಾಲ ನೀಡಲಾಗಿದೆ. ರೈತರು ಸದುಪಯೋಗಪಡಿಸಿಕೊಂಡು ಸರಿಯಾದ ಸಮಯದಲ್ಲಿ ಸಾಲವನ್ನು ಬ್ಯಾಂಕಿಗೆ ಮರು ಪಾವತಿಸಿ ಸಹಕಾರ ಸಂಘಗಳು ಬೆಳೆಯಲು ಸಹಕಾರ ನೀಡಬೇಕು ಎಂದು ಇದೇ ವೇಳೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷರು ಹಾಗೂ ಶಾಸಕ ಜಿ.ಡಿ. ಹರೀಶ್ ಗೌಡರನ್ನು ಬುದ್ಧನ ವಿಗ್ರಹ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶ್ರೀಧರ್, ಉಪಾಧ್ಯಕ್ಷ ರಾಜು.ಕೆ, ನಿರ್ದೇಶಕರುಗಳಾದ ನಾಜಿರ್ ಸಾಬ್, ಸಿಂಗಮ್ಮ, ರಾಜೇಗೌಡ, ಯಶೋಧ ರಘು, ಚಾಮಮ್ಮ, ಜಗದೀಶ್, ಮಹದೇವ್, ಮಹಮ್ಮದ್ ಶಮದ್, ಅಮೀರ್ ಪಾಷಾ, ಕಾರ್ಯ ನಿರ್ವಹಣಾಧಿಕಾರಿ ನಂಜಪ್ಪ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ದಿಲೀಪ್, ಸದಸ್ಯರುಗಳಾದ ನಟರಾಜ್, ಆಂಜನೇಯ, ಗ್ರಾಮದ ಯಜಮಾನರಾದ ಕೃಷ್ಣ ಶೆಟ್ಟಿ, ಮುಖಂಡರುಗಳಾದ ಪುಟ್ಟರಾಜು, ಸಂತೋಷ್, ತಗಡಯ್ಯ, ರಾಜು ಹಾಗೂ ಹಲವಾರು ಮುಖಂಡರು ಹಾಜರಿದ್ದರು.

15 ಅಮೃತ ಸರೋವರ ಕೆರೆ ಏರಿಯಲ್ಲಿ ಹಾರಲಿದೆ ತ್ರಿವರ್ಣ ಧ್ವಜ

ಹುಣಸೂರು, ಆ.12– ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ತಾಲೂಕಿನಲ್ಲಿ ಆಯ್ಕೆಗೊಂಡಿರುವ 20 ಅಮೃತ ಸರೋವರಗಳ ಪೈಕಿ 15 ಗ್ರಾಮ ಪಂಚಾಯಿತಿಯಲ್ಲಿರುವ ಅಮೃತ ಸರೋವರಗಳ ಬಳಿ ಈ ಬಾರಿ ಮತ್ತೊಂದು ವಿಶೇಷತೆಯೊಂದಿಗೆ ತ್ರಿವರ್ಣ ಧ್ವಜ ಹಾರಲಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮನು ತಿಳಿಸಿದ್ದಾರೆ.

ಈ ಬಾರಿಯ ತ್ರಿವರ್ಣ ಧ್ವಜ ಹಾರುವುದರೊಂದಿಗೆ ದೇಶದ ರಕ್ಷಣೆಗಾಗಿ ವೀರ ಮರಣವನ್ನಪ್ಪಿರುವ ಯೋಧರಿಗೆ ನಮನ ಸಲ್ಲಿಸಲು ಶಿಲಾ ಫಲಕಗಳನ್ನು ತಾಲೂಕಿನ 41 ಗ್ರಾಮ ಪಂಚಾಯಿತಿಗಳಲ್ಲಿ ನಿರ್ಮಿಸಲಾಗುತ್ತಿದ್ದು, ಈ ಮೂಲಕ ನಮ್ಮ ದೇಶವನ್ನು ರಕ್ಷಿಸಲು ತಮ್ಮ ಪ್ರಾಣವನ್ನು ಮುಡಿಪಾಗಿಟ್ಟ ಯೋಧರಿಗೆ ಗೌರವ ನಮನಗಳನ್ನು ಸಲ್ಲಿಸಲಾಗುತ್ತದೆ ಎಂದರು.

ಆ.15 ರಂದು ನಡೆಯಲಿರುವ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಅಂತರ್ಜಲ ಉಳಿಸುವ ಅಭಿಯಾನದಡಿಯಲ್ಲಿ 15 ಅಮೃತ ಸರೋವರ ಕೆರೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸಲಾಗುತ್ತಿದ್ದು, ಉದ್ಯೋಗ ಖಾತ್ರಿ ನೆರವಿನೊಂದಿಗೆ ವಿವಿಧ ಚಟುವಟಿಕೆಗಳನ್ನು ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅಂತೆಯೇ ಅಮೃತ ಸರೋವರದ ಅಂಗಳದಲ್ಲಿ ಪಂಚಾಯಿತಿ ವತಿಯಿಂದ ಪ್ರಮುಖ ಬೀದಿಗಳಲ್ಲಿ ತಿರಂಗ ಯಾತ್ರೆ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಸ್ಥಳೀಯ ಪ್ರೌಢಶಾಲಾ ಮಕ್ಕಳಿಗೆ ಕೆರೆ ಮಹತ್ವ ಹಾಗೂ ದೇಶ ಭಕ್ತಿ ಕುರಿತು ಚಿತ್ರಕಲೆ ಸ್ಪರ್ಧೆ, ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ನಡೆಸಲಿದ್ದು ಸ್ಥಳದಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ.

ಜೊತೆಗೆ 'ಅಮೃತ ವಾಟಿಕಾ' ಎಂಬ ಹೆಸರಿನಡಿ ಅರಣ್ಯ ಇಲಾಖೆಯಿಂದ 75 ಸಸಿಗಳನ್ನು ಪಡೆದು ಈಗಾಗಲೇ ಆಯ್ದ ಪ್ರದೇಶದಲ್ಲಿ ನೆಡಲಾಗುತ್ತಿದ್ದು, ಆ ಮೂಲಕ ಗ್ರಾಮದ ಜನರಿಗೆ ಹಾಗೂ ಮುಂದಿನ ಪೀಳಿಗೆಯ ಮಕ್ಕಳಲ್ಲಿ ಪರಿಸರದ ಮೌಲ್ಯವನ್ನು ತಿಳಿಸುವ ಪ್ರಯತ್ನ ಮಾಡಲಾಗುವ ಮೂಲಕ ಈ ಬಾರಿಯ ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ನಡೆಸಲು ಸಿದ್ಧವಾಗುತ್ತಿದೆ. ಅಜಾದಿ ಕಾ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಈ ಬಾರಿಯ ಸ್ವಾತಂತ್ರ್ಯೋತ್ಸವ ದಿನದಂದು ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ತಾಲ್ಲೂಕಿನ 41 ಗ್ರಾಮ ಪಂಚಾಯಿತಿಗಳಲ್ಲಿ ಎಲ್ಲರನ್ನು ಒಳಗೊಂಡು ಸ್ವಾತಂತ್ರ್ಯ ದಿನವನ್ನು ಆಚರಿಸಲಾಗುತ್ತಿದೆ. ದೇಶದ ರಕ್ಷಣೆಗಾಗಿ ವೀರ ಮರಣವನ್ನಪ್ಪಿದ್ದವರ ಸ್ಮರಣೆ ಹಾಗೂ ಗೌರವ ಸೂಚಕವಾಗಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆಯ್ದ ಒಂದು ಭಾಗದಲ್ಲಿ ಶಿಲಾ ಪ್ರತಿಮೆಯನ್ನು ನಿರ್ಮಿಸಲಾಗುತ್ತಿದೆ ಎಂದರು.

ಪುಸ್ತಕಗಳನ್ನು ಓದಿ, ಜ್ಞಾನ ಹೆಚ್ಚಿಸಿಕೊಳ್ಳಿ



ಸರಗೂರು, ಆ.12– ಪುಸ್ತಕಗಳನ್ನು ಹೆಚ್ಚು ಓದುವುದರಿಂದ ಜ್ಞಾನ ವೃದ್ಧಿಯಾಗಲಿದೆ ಎಂದು ಗ್ರಂಥಪಾಲಕ ಬಿಡುಗಲು ಶಿವಣ್ಣ ತಿಳಿಸಿದ್ದಾರೆ. ಪಟ್ಟಣದ ಶಾಖಾ ಗ್ರಂಥಾಲಯದಲ್ಲಿ ನಡೆದ ಗ್ರಂಥಪಾಲಕರ ದಿನಾಚರಣೆಯಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳು ಗ್ರಂಥಾಲಯಗಳಿಗೆ ಹೆಚ್ಚಾಗಿ ಭೇಟಿ ನೀಡುವ ಮೂಲಕ ಪುಸ್ತಕಗಳನ್ನು ಓದಿ ಸಮಗ್ರವಾಗಿ ವಿಚಾರ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರಗೂರು ಗ್ರಂಥಾಲಯದಲ್ಲಿ ಗ್ರಂಥಪಾಲಕರ ದಿನಾಚರಣೆಯ ಪ್ರಯುಕ್ತ ಶಾಲಾ ಕಾಲೇಜು ಮಕ್ಕಳಿಗೆ ಚಿತ್ರಕಲೆ ಮತ್ತು ರಸಪ್ರಶ್ನೆ ಸ್ಪರ್ಧೆಗಳನ್ನು ನಡೆಸಲಾಗಿತ್ತು, ಅದರಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಯಿತು.

ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಯೋಜಿತ್ ಅರಸ್, ದ್ವಿತೀಯ ಬಹುಮಾನ ರಂಜಿತಾ, ತೃತೀಯ ಬಹುಮಾನ ಅಪೂರ್ವ ಮತ್ತು ಆದ್ಯ, ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪ್ರಥಮ ಬಹುಮಾನ ಪ್ರಕಾಶ್, ದ್ವಿತೀಯ ಬಹುಮಾನ ಸೋಮೇಶ್, ತೃತೀಯ ಬಹುಮಾನ ಪ್ರವೀಣ್, ಮತ್ತು ರಂಗನಾಥ್ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಮಧುಕುಮಾರ್, ಸಂಪತ್‌ಕುಮಾರ್,ಚಿನ್ಮಯಿ, ಹೇಮಾ, ವರ್ಷ, ಮಂಜುನಾಥ್, ಪ್ರವೀಣ್, ಗಿರೀಶ್, ಪ್ರಕಾಶ್, ಹರ್ಷ, ಪವನ್, ಮಹೇಶ್, ರಂಗನಾಥ್, ಸೋಮೇಶ್, ವಿವೇಕ್, ಶಶಾಂಕ್, ಉಲ್ಲಾಸ್ ಮತ್ತು ಶಾಲಾ ಮಕ್ಕಳು ಹಾಜರಿದ್ದರು,

ಸಚಿವರು ವಾಸ್ತವ್ಯ ಹೂಡಿದ್ದ ಗೊಳೂರು ನಿವಾಸಿಯ ಕುಟುಂಬಕ್ಕೆ ನೇರ ಸಾಲ ಸೌಲಭ್ಯ



ಹೆಚ್.ಡಿ.ಕೋಟೆ, ಆ.12– ಗೊಳೂರು ಹಾಡಿಯಲ್ಲಿ ಸಚಿವ ನಾಗೇಂದ್ರ ಅವರು ವಾಸ್ತವ ಹೂಡಿದ್ದ ನಿವಾಸದ ಕುಟುಂಬದವರಿಗೆ ನೇರ ಸಾಲ ಮಂಜೂರಾತಿ ಪತ್ರವನ್ನು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎಂ.ಕೆ. ಮಲ್ಲೇಶ್ ವಿತರಿಸಿದರು.

ತಾಲೂಕಿನ ಗೊಳೂರು ಹಾಡಿಗೆ ಆಗಮಿಸಿದ ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಸಬಲೀಕರಣ ಹಾಗೂ ಕ್ರೀಡಾ ಸಚಿವ ಬಿ.ನಾಗೇಂದ್ರ ಅವರು ಗೊಳೂರು ಹಾಡಿಯ ಕೃಷ್ಣ ಎಂಬುವರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಕೃಷ್ಣ, ಜಯ, ಪುಟ್ಟಿ, ಈ ಮೂವರಿಗೆ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ವತಿಯಿಂದ ನೇರ ಸಾಲ ಯೋಜನೆ ಅಡಿಯಲ್ಲಿ ಸಚಿವರ ಆದೇಶದ ಮೇರೆಗೆ ತಲಾ 50 ಸಾವಿರ ರೂ. ಸಾಲ ಸೌಲಭ್ಯದ ಮಂಜುರಾತಿ ಪತ್ರವನ್ನು, ಮಹರ್ಷಿ ವಾಲ್ಮೀಕಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎಂ. ಕೆ. ಮಲ್ಲೇಶ್ ನೀಡಿದರು.

ಈ ಸಂದರ್ಭದಲ್ಲಿ ನಿಗಮದ ತಾಲೂಕು ಅಭಿವೃದ್ಧಿ ಅಧಿಕಾರಿ ಪರಮೇಶ್ವರಪ್ಪ ಗಿರಿಜನ ಕಲ್ಯಾಣ ಇಲಾಖೆಯ ನಾಗರಾಜು, ಕೃಷ್ಣ, ಜಯ, ಪುಟ್ಟಿ, ಹಾಜರಿದ್ದರು.

ತಿ.ನರಸೀಪುರ ವ್ಯವಸಾಯೋತ್ಪನ್ನ ಮಾರುಕಟ್ಟೆಗೆ 14.96 ಲಕ್ಷ ರೂ. ನಿವ್ವಳ ಲಾಭ

ಪ್ರಸ್ತುತ ವರ್ಷದಿಂದ ಗೊಬ್ಬರ ಮಾರಾಟ ಮಳಿಗೆ ಆರಂಭ



ತಿ.ನರಸೀಪುರ, ಆ.12– ತಾಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯು ಪ್ರಸಕ್ತ ಸಾಲಿನಲ್ಲಿ 14.96 ಲಕ್ಷ ರೂ.ಗಳ ನಿವ್ವಳ ಲಾಭಗಳಿಸಿ ಯಶಸ್ವಿಯಾಗಿ ಮುನ್ನಡೆದಿದೆ ಎಂದು ಸಮಿತಿಯ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಹೇಳಿದರು.

ಪಟ್ಟಣದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘದ ಆವರಣದಲ್ಲಿ ನಡೆದ ಸಂಘದ 2022–23 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘದ ಸರ್ವ ಸದಸ್ಯರ ಸಹಕಾರದೊಂದಿಗೆ ಸಹಕಾರ ಸಂಘವು ವರ್ಷದಿಂದ ವರ್ಷಕ್ಕೆ ಉನ್ನತಿ ಸಾಧಿಸುತ್ತಿದ್ದು, ಲಾಭದತ್ತ ಮುನ್ನಡೆಯುತ್ತಿದೆ. ಹಾಗಾಗಿ ಸಂಘದ ಸರ್ವ ಸದಸ್ಯರು ಸಂಘದ ಯಶಸ್ಸಿಗೆ ಪಾಲುದಾರರಾಗಿದ್ದಾರೆ ಎಂದರು. ಸಂಘದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ವೇಳೆ ನಷ್ಟದಲ್ಲಿದ್ದ ಸಂಘವನ್ನು ಲಾಭದತ್ತ ಕೊಂಡೊಯ್ಯಲು ಸದಸ್ಯರು ನೀಡಿದ ಸಹಕಾರ ಮರೆಯಲಾಗದು, ಮುಂದೆಯೂ ಸರ್ವ ಸದಸ್ಯರಿಂದ ಇಂತದ್ದೇ ಸಹಕಾರ ಬಯಸುತ್ತೇನೆ ಎಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ವೈ.ಎನ್. ಶಂಕರೇಗೌಡ ಸಂಘದ ವತಿಯಿಂದ ಗೊಬ್ಬರ ಮಾರಾಟ ಮಳಿಗೆ ತೆರೆಯಲಾಗಿಲ್ಲ, ಇದರಿಂದ ದೊರೆಯುವ ಲಾಭಾಂಶವನ್ನು ಪಡೆಯಲು ಆಡಳಿತ ಮಂಡಳಿ ಯತ್ನಿಸಿಲ್ಲ ಎಂದು ದೂರಿದರು. ಇದಕ್ಕುತ್ತರಿಸಿದ ಅಧ್ಯಕ್ಷರು ಪ್ರಸಕ್ತ ಸಾಲಿನಿಂದಲೇ ಸಂಘದ ವತಿಯಿಂದ ಗೊಬ್ಬರ ಮಾರಾಟ ಮಳಿಗೆ ತೆರೆಯಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಹಕಾರ ಸಂಘದ ವಾಣಿಜ್ಯ ಮಳಿಗೆಯ ಬಾಡಿಗೆ ದರವನ್ನು 11 ತಿಂಗಳಿಗೊಮ್ಮೆ ಹೆಚ್ಚಳ ಮಾಡಲಾಗುತ್ತಿದೆ. ಹಾಗೂ ಸಹಕಾರ ಸಂಘಕ್ಕೆ ಮುಂಜೂರಾಗಿರುವ ಪೆಟ್ರೋಲ್ ಬಂಕ್ ತೆರೆಯುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ತಿಳಿಸಿದರು.

ಸಂಘದ ಕಾರ್ಯದರ್ಶಿ ಜಿ.ರಘುನಂದನ್ ವಾರ್ಷಿಕ ವರದಿ ಮಂಡಿಸಿದರು. ಸಂಘದ ಉಪಾಧ್ಯಕ್ಷ ಮಲ್ಲಣ್ಣ, ನಿರ್ದೇಶಕರಾದ ಟಿ.ವಾಸುದೇವ, ಬಿ.ಎಸ್.ಮಹೇಶ್, ಎನ್.ಮೋಹನ್, ಬಿ.ಶಿವಸ್ವಾಮಿ, ಎಸ್.ರಾಜಮ್ಮ, ಎಂ.ಎಸ್.ಜಂಬಣ್ಣ, ಎಂ.ಎಸ್. ಬಸವರಾಜು, ಡಿ.ಕೋಮಲ ಕುಮಾರ ಸ್ವಾಮಿ, ಹೆಚ್.ವಿ.ಚೈತ್ರಾಗಿರೀಶ್, ಹೆಚ್.ಬಿ.ಶಾರದ, ಕಚೇರಿ ಸಹಾಯಕಿ ಟಿ.ಜಿ.ಸುಮಿತ್ರ, ಎನ್.ಮಹೇಶ್, ಡಿ.ಪಿ.ಸಂದೇಶ್, ಸಾವಿತ್ರಮ್ಮ, ಶ್ರೀಧರ ಸ್ವಾಮಿ ಮತ್ತಿತರರು ಹಾಜರಿದ್ದರು.

ಹಾಡಹಗಲೇ ಹುಲಿ ದಾಳಿ; ಹಸು ಬಲಿ

ಹುಣಸೂರು, ಆ.12– ತಾಲೂಕಿನ ಆಡಿಗನಹಳ್ಳಿ ಗ್ರಾಮದಲ್ಲಿ ಹಾಡಹಗಲೇ ಹುಲಿ ದಾಳಿಯಿಂದ ಹಸು ಸಾವನ್ನಪ್ಪಿದ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಆಡಿಗನಹಳ್ಳಿ ಗ್ರಾಮದ ನಿವಾಸಿ ದಿವಂಗತ ಬಸವಯ್ಯನವರ ಪುತ್ರ ರವಿ ಅವರು ತಮ್ಮ ಪತ್ನಿ, ಪುತ್ರನೊಂದಿಗೆ ಜಮೀನಿಗೆ ಕೆಲಸಕ್ಕೆಂದು ಹೋಗಿದ್ದರು. ರವಿ ಅವರು ತಮ್ಮ 3 ಹಸುಗಳನ್ನು ಸಹ ಮೇಯಿಸಲೆಂದು ಜೊತೆಗೆ ಕರೆದೊಯ್ದಿದ್ದರು. ಕೆಲಸದಲ್ಲಿ ನಿರತರಾಗಿದ್ದಾಗ ಪಕ್ಕದಲ್ಲೇ ಮೇಯುತ್ತಿದ್ದ ಹಸು ಏಕಾಏಕಿ ಜೋರಾಗಿ ಕೂಗಲಾರಂಭಿಸಿದ್ದು, ತಕ್ಷಣ ರವಿರವರು ಹೋಗಿ ನೋಡಲು ಹುಲಿ ಹಸುವನ್ನು ಹಿಡಿದು ಎಳೆದೊಯ್ಯಲು ಪ್ರಯತ್ನಿಸುತ್ತಿತ್ತು.

ಆಗ ರವಿ ಹಾಗೂ ಅವರ ಮಗ ಜೋರಾಗಿ ಕಿರುಚಿ ಕಲ್ಲಿನಿಂದ ಹುಲಿಯನ್ನು ಓಡಿಸಿದ್ದಾರೆ. ಹುಲಿ ಹಸುವನ್ನು ಬಿಟ್ಟು ಓಡಿದೆ, ಆದರೆ ಹಸು ಸಾವನ್ನಪ್ಪಿತ್ತು. ಮೃತಪಟ್ಟ ಹಸುವನ್ನು ಇತ್ತೀಚೆಗೆ ಖರೀದಿಸಿದ್ದು, ಅದರ ಬೆಲೆ ರೂ. 80,000 ಎಂದು ರೈತ ರವಿ ತಿಳಿಸಿದರು. ಸ್ಥಳಕ್ಕೆ ಅರಣ್ಯ ಇಲಾಖೆ ಡಿಆರ್‌ಎಫ್‌ಒ ಮಲ್ಲಿಕಾರ್ಜುನ್, ರಿಹಾನ್, ಕುಮಾರ್, ಭೇಟಿ ನೀಡಿದ್ದಾರೆ. ಪಶುವೈದ್ಯರು ಹಸುವಿನ ಮರಣೋತ್ತರ ಪರೀಕ್ಷೆ ನಡೆಸಿದರು.



ತಿ.ನರಸೀಪುರ ತಾಲೂಕು ಕಿರಗಸೂರು ಗ್ರಾಪಂ ನೂತನ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷೆ ಚಿನ್ನತಾಯಮ್ಮ ಅವರು ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು. ಈ ವೇಳೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಿ. ಮಂಟೇಲಿಂಗಪ್ಪ, ಫೈನಾನ್ಸ್ ಕಾಂತರಾಜು, ನಿಂಗರಾಜು, ಶಿವರಾಜ್, ನಾಗರಾಜು, ಗಿರೀಶ್, ಮಹದೇವಸ್ವಾಮಿ, ವಸಂತ್ ಹಾಜರಿದ್ದರು

ವೆಂಕಟರಮಣ ನಿಧನ



ಹುಣಸೂರು, ಆ.12– ತಾಲೂಕಿನ ಉದ್ದೂರು ಗ್ರಾಮದ ನಿವಾಸಿ ಹಾಗೂ ಬನ್ನಿಕುಪ್ಪೆ ಶಾಲೆಯ ಶಿಕ್ಷಕ ತಿಮ್ಮರಾಜು ಅವರ ತಂದೆ ವೆಂಕಟರಮಣ(80) ಅವರು ಇಂದು ನಿಧನರಾದರು. ಮೃತರು ಪತ್ನಿ ಹಾಗೂ ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

1ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಅಂಗಮ್ಮಣ್ಣಿಯವರು

ನೀವು ನಮ್ಮನ್ನಗಲಿ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು ಮತ್ತು ಸಮಸ್ತ ಕುಟುಂಬವರ್ಗದವರು, ದೇವಯ್ಯನಹುಂಡಿ, ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ




ಇವರು ದಿನಾಂಕ: 04.08.2023 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ **ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು** ದಿನಾಂಕ 14.08.2023 ಸೋಮವಾರ ಬೆಳಿಗ್ಗೆ 11 ಗಂಟೆಗೆ ಸ್ವಗೃಹ ನಂಜನಗೂಡು ತಾಲ್ಲೂಕು, ಇಮ್ಮಾವು ಗ್ರಾಮದಲ್ಲಿ ಏರ್ಪಡಿಸಿರುವುದರಿಂದ

ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಭೋಜನ: ಮಧ್ಯಾಹ್ನ 1.00 ಗಂಟೆಗೆ

ಶ್ರೀ ಪಟೇಲ್ ಮಹೇಂದ್ರರವರು
(ಯಜಮಾನರು)

ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ಬೀನಾ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು



ಶ್ರೀವೈಷ್ಣವ ಸಭಾ (ರಿ.)
ನ್ಯೂ ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು–570009

ಅಭಿನಂದನಾ ಸಮಾರಂಭ

ದಿನಾಂಕ: 14–08–2023ರ ಸೋಮವಾರದಂದು ಸಂಜೆ 5.00 ಶ್ರೀವೈಷ್ಣವ ಸಭಾ (ರಿ.), ಸರಸ್ವತಿಪುರಂ, ಮೈಸೂರು ಇವರಿಂದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಟಿ.ಎಸ್.ಶ್ರೀವತ್ಸರವರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿರುತ್ತೇವೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೊ: 9901964242

ಸಹಿ/– ಕಾರ್ಯದರ್ಶಿ

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಶಂಕರ್ ರವರು

ಮಾಜಿ ಅಧ್ಯಕ್ಷರು, ಮೈಸೂರು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕ.ರಾ.ರ.ಸಾ.ನಿಗಮ ನೌಕರರ ಪತ್ತಿನ ಸಹಕಾರ ಸಂಘ ನಿ.
ಮಾಜಿ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ಅಧಿಕಾರಿ ಮತ್ತು ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಚಿರಸ್ಥಾಯಿಯಾಗಿದೆ. ನೀವು ತೋರಿದ ಅದರ್ಶ ಮಾರ್ಗದಲ್ಲೇ ಅನುದಿನವೂ ಸಾಗಿದ್ದೇವೆ, ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ ಕೋರುವ

ದುಃಖತಪ್ತರು
ಧರ್ಮಪತ್ನಿ ಶ್ರೀಮತಿ ಗಾಯಿತ್ರಿ ಶಂಕರ್,
ಮಕ್ಕಳು: ವಿನಯ್, ವಿಜಯ್ ಮತ್ತು ಕುಟುಂಬವರ್ಗದವರು



ಇವರುಗಳಿಂದ ಕರ್ನಾಟಕದ ಜನಪ್ರಿಯ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರ ಹುಟ್ಟುಹಬ್ಬದ ಅಂಗವಾಗಿ
ದಿನಾಂಕ 13–08–2023 ಭಾನುವಾರ

ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ

ಎಂಬ ಸುಂದರ ಭಕ್ತಿ ಪ್ರಧಾನ ನಾಟಕವನ್ನು ಅಭಿನಯಿಸುತ್ತಿದ್ದಾರೆ.

ಡ್ರಾಮ ಮಾಸ್ಟರ್ ಶ್ರೀ ಚೌಡಶೆಟ್ಟರು, ಕೃಷ್ಣಾಪುರ (ನರಸೀಪುರ),
ಉತ್ತನಹಳ್ಳಿ ಶ್ರೀ ನಾಗಣ್ಣ, ಈಶ್ವರ, ಶ್ರೀ ಕೃಷ್ಣ, ದಕ್ಷ,
ಶ್ರೀ ದೊಡ್ಡೇಗೌಡ, ವಸುಂಧರ, ಮುರುಡಗಳ್ಳಿ,
ಶ್ರೀ ಶಿವಪ್ಪ, ಕೋಟೆಹುಂಡಿ, ಜಾಲಬ್ರಹ್ಮ,
ಕಾಳಿರಾಮಣ್ಣನ ಆರ್. ಮಹದೇವು, ಡಿ. ಸಾಲುಂಡಿ, ಭೃಗು ಋಷಿ

ಮಧ್ಯಾಹ್ನ 12-00 ಗಂಟೆಗೆ
ಲಘು ಉಪಹಾರ ಮತ್ತು
ಸಿಹಿ ಹಂಚಲಾಗುವುದು

ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರು
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮಹದೇವೇಗೌಡ
(ಮಾಕಿ ಮಹದೇವು)
ಮಾ.ಗ್ರಾ.ಪಂ. ಅಧ್ಯಕ್ಷರು, ಮಾಲೀಕರು,
ಐಶ್ವರ್ಯ ಕಲ್ಯಾಣ ಮಂಟಪ, ಡಿ. ಸಾಲುಂಡಿ
ಚಂದ್ರಮ
ಮೊ. : 9448003108

ಶ್ವೇತಾ

ಸನ್ಮಾನ್ಯ ಶ್ರೀ ಹೆಚ್. ಸಿ. ಮಹದೇವಪ್ಪರವರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು

ಚಂದ್ರಮನ 21 ಪತ್ನಿಯರನ್ನು ನೋಡಲು ಮರೆಯದಿರಿ
ಮರೆತು ನಿರಾಶರಾಗದಿರಿ ಕನ್ನಡ ಕಲಾಭಿಮಾನಿಗಳೆ